ಕರ್ನಾಟಕ ಸರ್ಕಾರ

ವೈದ್ಯಕೀಯ ಸಾಹಿತ್ಯ ಮಾಲೆ

# ವೈದ್ಯ ಪದಗಳ ಅರ್ಥ ವಿವರಣಾ ಕೋಶ

ಎನ್. ವಿಶ್ವರೂಪಾಚಾರ್
ಎಂ.ಬಿ. ಗಿರೀಶ್ ತಾಳಿಕಟ್ಟಿ



ಕನ್ನಡ ಪುಸ್ತಕ ಪ್ರಾಧಿಕಾರ

ವೈದ್ಯಕೀಯ ಸಾಹಿತ್ಯ ಮಾಲೆ

ಪ್ರಧಾನ ಸಂಪಾದಕರು
ಡಾ. ಸಿದ್ಧಲಿಂಗಯ್ಯ

ಗೌರವ ಸಂಪಾದಕರು
ಡಾ॥ ಸಿ.ಆರ್. ಚಂದ್ರಶೇಖರ್

# ವೈದ್ಯ ಪದಗಳ ಅರ್ಥ ವಿವರಣಾಕೋಶ

ಎನ್. ವಿಶ್ವರೂಪಾಚಾರ್
ಎಂ.ಬಿ. ಗಿರೀಶ್ ತಾಳಿಕಟ್ಟೆ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು–೫೬೦ ೦೦೨

**VAIDYA PADAGALA ARTHA - VIVARANAKOSHA** — A mini Dictionary of Medical Words Written by Sri N. Vishwaroopachar & Sri M.B. Gireesh Thalikatte, (Vydyakiya Sahitya Maale), and Published by **B.H. Mallikarjuna,** Administrative Officer, Kannada Pustaka Pradhikara, Kannada Bhavana, J.C.Road, Bangalore-560 002.

© ಈ ಆವೃತ್ತಿಯ ಗ್ರಂಥಸ್ವಾಮ್ಯ : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

| | | |
|---|---|---|
| ಪ್ರಥಮ ಮುದ್ರಣ | : | ೨೦೧೨ |
| ಪುಟಗಳು | : | xii+೧೨೦=೧೩೨ |
| ಪ್ರತಿಗಳು | : | ೧,೦೦೦ |
| ಬೆಲೆ | : | ₹ ೭೦/- |

| | | |
|---|---|---|
| First Print | : | 2012 |
| Pages | : | **xii+120=132** |
| Copies | : | **1,000** |
| Price | : | **₹ 70/-** |

ಕರಡು ತಿದ್ದಿದವರು : ಲೇಖಕರು ಮತ್ತು ಸಂಪಾದಕರು

ಪ್ರಕಾಶಕರು
**ಬಿ.ಹೆಚ್. ಮಲ್ಲಿಕಾರ್ಜುನ**
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು-೫೬೦ ೦೦೨

ಮುದ್ರಕರು :
**ಸತ್ಯಶ್ರೀ ಪ್ರಿಂಟರ್ಸ್ ಪ್ರೈ. ಲಿ.,**
ನಂ. ೧೬/೧, ೨ನೇ ಮುಖ್ಯರಸ್ತೆ, ೩ನೇ ಅಡ್ಡರಸ್ತೆ
ಕಸ್ತೂರಿಬಾ ನಗರ, ಮೈಸೂರು ರಸ್ತೆ, ಬೆಂಗಳೂರು-೫೬೦ ೦೨೬
**ದೂರವಾಣಿ : ೦೮೦-೨೬೭೪ ೮೮೧೧; ಮೊ : ೯೩೪೨೮ ೬೪೭೬೧**

# ವೈದ್ಯಕೀಯ ಸಾಹಿತ್ಯ ಮಾಲೆ

ಪ್ರಧಾನ ಸಂಪಾದಕರು
ಡಾ. ಸಿದ್ಧಲಿಂಗಯ್ಯ

ಸಂಪಾದಕರು
ಡಾ॥ ಸಿ.ಆರ್. ಚಂದ್ರಶೇಖರ್

ಸದಸ್ಯರು

ಡಾ॥ ನಾ. ಸೋಮೇಶ್ವರ
ಡಾ॥ ವಸಂತ ಅ. ಕುಲಕರ್ಣಿ
ಡಾ॥ ಪದ್ಮಿನಿ ಪ್ರಸಾದ್
ಡಾ॥ ವಸುಂಧರಾ ಭೂಪತಿ
ಡಾ॥ ವಿಜಯಲಕ್ಷ್ಮೀ ಬಾಳೇಕುಂದ್ರಿ
ಡಾ॥ ಕೆ.ಪಿ. ಪುತ್ತೂರಾಯ

ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ
ಆಡಳಿತಾಧಿಕಾರಿಗಳು

# ಅಧ್ಯಕ್ಷರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ಅಪರೂಪದ ಹಾಗೂ ಶಾಸ್ತ್ರ ಸಂಬಂಧ ಕೃತಿಗಳನ್ನು ಪ್ರಕಟಿಸುವುದರ ಜೊತೆಗೆ ವಿವಿಧ ಮಾಲಿಕೆಯಡಿ ಬೇರೆ ಪ್ರಕಾಶಕರು ಅಷ್ಟಾಗಿ ಪ್ರಕಟಿಸದ ಪುಸ್ತಕಗಳು ಜನಸಾಮಾನ್ಯರಿಗೆ ಲಭ್ಯವಾಗಬೇಕೆಂಬ ಉದ್ದೇಶದಿಂದ ಪ್ರಕಟಿಸುತ್ತಾ ಬಂದಿದೆ. ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಕನ್ನಡ ಭಾಷೆ ಸಾಹಿತ್ಯಿಕವಾಗಿ ಪ್ರೌಢಾವಸ್ತೆಯನ್ನು ತಲುಪಿರುವುದರಲ್ಲಿ ಸಂಶಯವಿಲ್ಲ. ಸಮಾಜ ಈ ಒಂದು ಶತಮಾನದಿಂದ ಬಹಳ ಶೀಘ್ರಗತಿಯಲ್ಲಿ ಮುಂದುವರೆಯುತ್ತಿದ್ದು ಆ ವೇಗಕ್ಕೆ ತಕ್ಕಾಗಿ ಕನ್ನಡ ಭಾಷೆಯೂ ಹೊಸ ಪ್ರಯೋಗಗಳನ್ನು ಮಾಡುತ್ತಾ ಹೊಸತನ್ನು ತನ್ನಲ್ಲಿ ಅರಗಿಸಿಕೊಳ್ಳುವುದು ಅನಿವಾರ್ಯ. ವೈದ್ಯಕೀಯ, ಇಂಜಿನಿಯರಿಂಗ್, ವಿಜ್ಞಾನ ಲೋಕಗಳ ಬಗ್ಗೆ ಕನ್ನಡದಲ್ಲಿ ಸಾಕಷ್ಟು ಪುಸ್ತಕಗಳು ಹೊರಬರುತ್ತಿದ್ದರೂ ಈಗಿನ ಕಾಲ ವೇಗಕ್ಕೆ ತಕ್ಕಷ್ಟು ಕನ್ನಡದಲ್ಲಿ ಈ ವಿಭಾಗಗಳಲ್ಲಿ ಪುಸ್ತಕಗಳು ಹೊರಬರುತ್ತಿಲ್ಲ. ಬಂದಂತಹ ಪುಸ್ತಕಗಳೂ ಕೂಡ ಜನ ಸಾಮಾನ್ಯರಿಗೆ ಎಟುಕುವ ದರದಲ್ಲಿ ಲಭ್ಯವಾಗುತ್ತಿಲ್ಲ. ಈ ಕೊರತೆಯನ್ನು ತುಂಬಬೇಕೆಂಬ ಸದಾಶಯದಿಂದ ಕೆಲ ಮಾಲೆಗಳಲ್ಲಿ ಪುಸ್ತಕಗಳನ್ನು ಹೊರತರುವ ಪ್ರಯತ್ನವನ್ನು ಮಾಡಿದ್ದೇವೆ.

ಈ ದಿಶೆಯಲ್ಲಿ ಪ್ರಾಧಿಕಾರವು ಹಮ್ಮಿಕೊಂಡಿರುವ ಮಹತ್ವದ ಯೋಜನೆಗಳಲ್ಲಿ ವೈದ್ಯಕೀಯ ಸಾಹಿತ್ಯ ಮಾಲೆಯೂ ಒಂದು. ಕನ್ನಡದಲ್ಲಿ ವೈದ್ಯಕೀಯ ಸಾಹಿತ್ಯಕ್ಕೆ ಹೆಚ್ಚು ಗ್ರಂಥಗಳು ಲಭ್ಯವಿಲ್ಲದೆ ಇರುವುದನ್ನು ಗಮನಿಸಿದ ಪ್ರಾಧಿಕಾರ ಈ ಮಾಲೆಯನ್ನು ಆರಂಭಿಸಬೇಕೆಂದು ಒಂದು ಸಂಪಾದಕ ಮಂಡಳಿಯನ್ನುನೇಮಿಸಿತು. ಈ ಸಂಪಾದಕ ಮಂಡಳಿಯಲ್ಲಿ ಸಂಪಾದಕರಾಗಿರಲು ನಾಡಿನ ಹಿರಿಯ ವೈದ್ಯರಾದ ಡಾ॥ ಸಿ.ಆರ್. ಚಂದ್ರಶೇಖರ್ ಅವರು ಒಪ್ಪಿರುತ್ತಾರೆ. ಮಂಡಳಿಯ ಸದಸ್ಯರಾಗಿ ಹಿರಿಯ ವೈದ್ಯರುಗಳಾದ ಡಾ॥ ನಾ. ಸೋಮೇಶ್ವರ, ಡಾ॥ ವಸಂತ ಕುಲಕರ್ಣಿ, ಡಾ॥ ಪದ್ಮಿನಿ ಪ್ರಸಾದ್, ಡಾ॥ ವಸುಂಧರಾ ಭೂಪತಿ,

ಡಾ॥ ವಿಜಯಲಕ್ಷ್ಮೀ ಬಾಳೇಕುಂದ್ರಿ, ಡಾ॥ ಕೆ.ಪಿ. ಪುತ್ತೂರಾಯ ಅವರುಗಳು ಈ ಕಾರ್ಯವನ್ನು ಸುಲಲಿತವಾಗಿ ನೆರವೇರಿಸಿ ಕೊಟ್ಟಿದ್ದಾರೆ. ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಈ ಮಾಲಿಕೆಯಲ್ಲಿ "ವೈದ್ಯ ಪದಗಳ ಅರ್ಥ ವಿವರಣಾಕೋಶ" ಕೃತಿಯನ್ನು ರಚಿಸಿಕೊಡಲು ಒಪ್ಪಿ ಹಸ್ತಪ್ರತಿಯನ್ನು ನೀಡಿ ಸಹಕರಿಸಿದ ಡಾ. ಎನ್. ವಿಶ್ವರೂಪಾಚಾರ್ ಮತ್ತು ಎಂ.ಬಿ. ಗಿರೀಶ್ ತಾಳಿಕಟ್ಟೆ ಅವರಿಗೆ ಆಭಾರಿಯಾಗಿದ್ದೇವೆ.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ. ಹೆಚ್. ಮಲ್ಲಿಕಾರ್ಜುನ ನನ್ನ ಆಪ್ತ ಕಾರ್ಯದರ್ಶಿ ಶ್ರೀ ಕೆ. ಮುಕುಂದನ್, ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಈ ಮಾಲೆಯ ಕೃತಿಗಳನ್ನು ಕನ್ನಡ ವಾಚಕರು ತುಂಬುಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.



(ಡಾ. ಸಿದ್ಧಲಿಂಗಯ್ಯ)
ಅಧ್ಯಕ್ಷರು

# ಸಂಪಾದಕರ ಮಾತು

ಆಧುನಿಕ ವೈದ್ಯಶಾಸ್ತ್ರ, ವೈಜ್ಞಾನಿಕ ತಳಹದಿಯ ಮೇಲೆ, ನಿತ್ಯ ಪರಿವೀಕ್ಷಣೆ, ಪ್ರಯೋಗ, ವಿಶ್ಲೇಷಣೆ, ಸಂಶೋಧನೆ, ಆವಿಷ್ಕಾರಗಳಿಂದ ಬೆಳೆಯುತ್ತಿದೆ. ವೈದ್ಯ ವಿಜ್ಞಾನದ ಆಳ–ವಿಸ್ತಾರ ಒಬ್ಬ ವ್ಯಕ್ತಿಯ ಕಲಿಕೆ ತಿಳುವಳಿಕೆಗೆ ನಿಲುಕಲಾರದಷ್ಟು ಬೆಳೆದಿದೆ. ಈ ಶಾಸ್ತ್ರದಲ್ಲಿ ಸಾವಿರಾರು ಪಾರಿಭಾಷಿಕ ಪದಗಳಿವೆ. ಪ್ರತಿಯೊಂದು ಪದಕ್ಕೆ ತನ್ನದೇ ಆದ ನಿರ್ದಿಷ್ಟ ಅರ್ಥ, ವ್ಯಾಖ್ಯೆ ವಿವರಣೆ ಇದೆ. ಈ ಪಾರಿಭಾಷಿಕ ಪದಗಳ ಮೂಲ ಗ್ರೀಕ್, ಲ್ಯಾಟಿನ್, ಅರಾಬಿಕ್, ಪರ್ಶಿಯನ್, ಫ್ರೆಂಚ್, ಜರ್ಮನ್, ಲ್ಯಾಟಿನ್ ಅಮೆರಿಕನ್, ಸ್ಪಾನಿಶ್, ಆಫ್ರಿಕನ್, ಸಂಸ್ಕೃತ ಹೀಗೆ ಹತ್ತಾರು ಭಾಷೆಗಳಾಗಿರಬಹುದು. ವೈದ್ಯಕೀಯ, ನರ್ಸಿಂಗ್, ಲ್ಯಾಬ್ ಟೆಕ್ನಿಶಿಯನ್ ಇತ್ಯಾದಿ ವೈದ್ಯಕೋರ್ಸ್‌ಗಳಲ್ಲಿ ತರಬೇತಿ ಪಡೆಯುವ ವೈದ್ಯರು, ನರ್ಸ್‌ಗಳು, ಫಾರ್ಮಸಿಸ್ಟ್‌ಗಳು, ಆರೋಗ್ಯ ಸಹಾಯಕರು, ಪ್ರಯೋಗಶಾಲೆಯ ತಂತ್ರಜ್ಞರು ಈ ಪಾರಿಭಾಷಿಕ ಪದಗಳನ್ನು ಕಲಿಯುತ್ತಾರೆ. ನಿತ್ಯ ಬಳಕೆಯಲ್ಲಿ ಬಳಸುತ್ತಾರೆ. ಪರಸ್ಪರ ಸಂವಹನ ಮಾಡಲು ಉಪಯೋಗಿಸುತ್ತಾರೆ. ವೈದ್ಯ ವಿಷಯಗಳನ್ನು ರೋಗಿಗಳಿಗೆ, ರೋಗಿಗಳ ಮನೆಯವರಿಗೆ, ಜನಸಾಮಾನ್ಯರಿಗೆ ಹೇಳುವಾಗ, ಪಾರಿಭಾಷಿಕ–ತಾಂತ್ರಿಕ ಪದಗಳನ್ನು ಹಾಗೆಯೇ ಬಳಸುತ್ತಾರೆ. ಜನಸಾಮಾನ್ಯರಿಗೆ ಈ ಪದಗಳ ಅರ್ಥ ಗೊತ್ತಾಗುವುದಿಲ್ಲ. ಇನ್‌ಫೆಕ್ಷನ್ ಆಗಿದೆ ಎಂದರೇನು? ಇನ್‌ಫ್ಲಮೇಶನ್ ಎಂದರೆ ಏನು? ಬ್ರೈನೀನ ಟ್ಯೂಮರ್‌ಗೂ, ಕ್ಯಾನ್ಸರ್‌ಗೂ ವ್ಯತ್ಯಾಸವಿದೆಯೇ? ರಕ್ತದಲ್ಲಿ ಪ್ಲಾಸ್ಮಾ, ಆರ್‌ಬಿಸಿ, ಡಬ್ಲ್ಯೂಬಿಸಿ ಪ್ಲೇಟ್ ಲೆಟ್‌ಗಳು ಏನು ಕೆಲಸ ಮಾಡುತ್ತವೆ? ರಕ್ತನಾಳಗಳು, ನರಗಳು, ಲಿಂಫ್ ನಾಳಗಳು ಎಲ್ಲವೂ ಒಂದೇನಾ, ಬೇರೆ ಬೇರೆಯಾ, ಮೂಳೆ ಯಾವುದು, ಟೆಂಡನ್, ಲಿಗಮೆಂಟ್ಸ್, ಸ್ನಾಯುಗಳು ಯಾವುವು? ಅಪೆಂಡಿಕ್ಸ್ ಎಂದರೇನು? ಅದನ್ನು ಆಪರೇಷನ್ ಮಾಡಿ ಏಕೆ ತೆಗೆಯಬೇಕು? ತೆಗೆದರೆ ಹಾನಿ ಇಲ್ಲವೇ? ಮೆನಿನ್ಜೈಟಿಸ್, ಎನ್‌ಸೆಫಲೈಟಿಸ್ ಎರಡೂ ಮಿದುಳ ಜ್ವರಗಳೇ? ಇತ್ಯಾದಿ ಹಲವು ಪ್ರಶ್ನೆಗಳು

ಗೊಂದಲಗಳಿಂದ, ಜನಸಾಮಾನ್ಯರು ದಿಕ್ಕು ಗೆಟ್ಟವರಾಗುತ್ತಾರೆ. ವೈದ್ಯರು, ನರ್ಸ್‌ಗಳಿಗೂ ಇವೆಲ್ಲವನ್ನು ಸರಳ ಕನ್ನಡದಲ್ಲಿ ವಿವರಿಸಲು ಬರುವುದಿಲ್ಲ.

ಶ್ರೀ ಎನ್. ವಿಶ್ವರೂಪಾಚಾರ್ ಮತ್ತು ಶ್ರೀ ಎಂ.ಬಿ. ಗಿರೀಶ್ ತಾಳಿಕಟ್ಟೆ ಅಪಾರ ಶ್ರಮವಹಿಸಿ, ಈ ವೈದ್ಯ ಪದಗಳ ಅರ್ಥ–ವಿವರಣಾ ಕೋಶವನ್ನು ತಯಾರಿಸಿದ್ದಾರೆ. ನಿತ್ಯಬಳಕೆಯ, ಜನರಿಗೆ ಅತ್ಯಗತ್ಯವಾದ ವೈದ್ಯ ಪದಗಳಿಗೆ ಅರ್ಥ ಮತ್ತು ವಿವರಣೆಯನ್ನು ಸಂಕ್ಷಿಪ್ತವಾಗಿ ಬರೆದಿದ್ದಾರೆ. ವೈದ್ಯ ಪದ ಬ್ರಹ್ಮ ಡಾ॥ ಡಿ.ಎಸ್. ಶಿವಪ್ಪನವರ ವೈದ್ಯ ಪದಕೋಶ ಈಗ ಲಭ್ಯವಿಲ್ಲ. ಸಾಮಾನ್ಯ ನಿಘಂಟುಗಳಲ್ಲಿ ವೈದ್ಯ ಪಾರಿಭಾಷಿಕ ಪದಗಳಿಗೆ ಅರ್ಥ ವಿವರಣೆ ಸಿಗುವುದಿಲ್ಲ. ಈ ಪುಸ್ತಕ ಈ ಕೊರತೆಯನ್ನು ಪರಿಣಾಮಕಾರಿಯಾಗಿ ನೀಗಿಸಿದೆ. ಇದಕ್ಕಾಗಿ ಲೇಖಕರನ್ನು ನಾವೆಲ್ಲ ಅಭಿನಂದಿಸಬೇಕು. ಲೇಖಕರು ಕೊಟ್ಟಿರುವ ಅರ್ಥ–ವಿವರಣೆ ಅಪೂರ್ಣವೆನಿಸಬಹುದು. ಕೆಲವು ತಪ್ಪುಗಳು ನುಸುಳಿರಬಹುದು. ನಮ್ಮ ವೈದ್ಯರು, ವೈದ್ಯ ಸಿಬ್ಬಂದಿ ಈ ಪುಸ್ತಕವನ್ನು ಓದಿ 'ಫೀಡ್ ಬ್ಯಾಕ್' ನೀಡಲೆಂದು ಪ್ರಾರ್ಥಿಸುತ್ತೇನೆ. ಮರು ಮುದ್ರಣ ಸಮಯದಲ್ಲಿ ಕೊರತೆ–ನ್ಯೂನತೆಗಳನ್ನು ಸರಿಪಡಿಸಬಹುದಾಗಿದೆ.

ಈ ಉಪಯುಕ್ತ ಪುಸ್ತಕವನ್ನು ವೈದ್ಯಕೀಯ ಸಾಹಿತ್ಯಮಾಲೆಯಲ್ಲಿ ಪ್ರಕಟಿಸಿದ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಸಿದ್ದಲಿಂಗಯ್ಯ ಮತ್ತು ಅವರ ಬಳಗ ಸ್ತುತ್ಯಾರ್ಹ ಕೆಲಸವನ್ನು ಮಾಡಿದೆ. ಅವರಿಗೆ ನನ್ನ ನಮನಗಳು.

– ಡಾ॥ ಸಿ.ಆರ್. ಚಂದ್ರಶೇಖರ್

# ಲೇಖಕರ ಮಾತು

ಜನಸಾಮಾನ್ಯರ ದೃಷ್ಟಿಯಲ್ಲಿ ಅನಾರೋಗ್ಯವೇ ವೈದ್ಯಕೀಯ ವಿಷಯವಾಗಿರುವುದು ದುರಾದೃಷ್ಟವೇ ಸರಿ. ಆರೋಗ್ಯವಂತ ಸ್ಥಿತಿಯೂ ವೈದ್ಯಕೀಯ ಪರಿಧಿಯೊಳಗೆ ಬರುತ್ತದೆ ಎಂಬ ಕಲ್ಪನೆಯು ಅನೇಕರಲ್ಲಿಲ್ಲ. ಇದರ ಪರಿಣಾಮವಾಗಿಯೇ ಇಂದು ಮುನ್ನೆಚ್ಚರಿಕೆಗಿಂತ ಹೆಚ್ಚಾಗಿ ಚಿಕಿತ್ಸೆಯ ಮೇಲೆ ಜನರೆಲ್ಲಾ ಅವಲಂಬಿತವಾಗಬೇಕಿದೆ ಮತ್ತು ಒಂದು ರೋಗ ಪೀಡಿತ ಸಮಾಜವನ್ನು ಸಮರ್ಥವಾಗಿ ಸೃಷ್ಟಿಸುತ್ತಿದ್ದೇವೆ, ಪೋಷಿಸುತ್ತಿದ್ದೇವೆ.

ಜನಸಾಮಾನ್ಯರಿಗೆ ವೈದ್ಯಕೀಯ ವಿಷಯವನ್ನು ಆತ್ಮೀಯಗೊಳಿಸುವ ಪ್ರಯತ್ನಕ್ಕೆ ಅಡ್ಡಿಯಾಗುವ ಕಾರಣಗಳನ್ನು ಹುಡುಕ ಹೊರಟರೆ ಮೊದಲು ಎದುರಾಗುವುದೆ ವೈದ್ಯಕೀಯ ಪಾರಿಭಾಷಿಕ ಪದಗಳು. ಎಲ್ಲ ಕ್ಷೇತ್ರಗಳಲ್ಲಿರುವಂತೆ, ವೈದ್ಯಕೀಯ ಕ್ಷೇತ್ರದಲ್ಲೂ ಪರಸ್ಪರ ಸುಲಭ ಅರ್ಥೈಕೆಗಾಗಿ ರೂಢಿಯಲ್ಲಿರುವ, ಅಂಗೀಕರಿಸಲ್ಪಟ್ಟಿರುವ ಸಂಕೇತಗಳು ಮತ್ತು ಪದ ಪ್ರಯೋಗಗಳು ಜನಸಾಮಾನ್ಯರ ಜ್ಞಾನಮಟ್ಟಕ್ಕೆ ಮೀರಿದವಾಗಿವೆ. ವೈದ್ಯರು ಉಚ್ಚರಿಸುವ, ತನಗರ್ಥವಾಗದ ಒಂದೊಂದು ಪದವೂ ರೋಗಿಯಲ್ಲಿ ಭಯ ಮತ್ತು ಗೊಂದಲವನ್ನು ಮೂಡಿಸುವ ಸಂಭವವಿರುತ್ತದೆ. ಪ್ರತಿ ಬಾರಿಯು ವೈದ್ಯರು ಎಲ್ಲವನ್ನು ವಿವರಿಸಿ ಹೇಳುವಷ್ಟು ಸಮಯಾವಕಾಶ ಇಲ್ಲದೇ ಹೋಗಬಹುದು. ಆಗ ರೋಗಿ ಆ ಪದಗಳನ್ನು ಕೇಳಿಸಿಕೊಳ್ಳುತ್ತಾನಾದರೂ ಅದರ ವಿವರಣೆ, ಗಂಭೀರತೆ ಆತನಿಗೆ ಅರ್ಥವಾಗದೇ ಹೋಗುವುದರಿಂದ ಜನಸಾಮಾನ್ಯರೆಲ್ಲ 'ವೈದ್ಯ ಜಗತ್ತು' ಕಾಯಿಲೆ ಬಂದಾಗ ಮಾತ್ರ ಅಗತ್ಯ, ಉಳಿದಂತೆ ಅದರ ವ್ಯಾಪ್ತಿಯೇ ನಮಗೆ ಅರ್ಥವಾಗುವುದಿಲ್ಲ ಎಂಬ ನಿರ್ಧಾರಕ್ಕೆ ಬಂದು ಬಿಡಬಹುದು.

ಈ ಸಮಸ್ಯೆಯ ಜಾಡನ್ನೇ ಹಿಡಿದು, ವೈದ್ಯಕೀಯ ಪಾರಿಭಾಷಿಕ ಪದಗಳನ್ನು ಜನಸಾಮಾನ್ಯರಿಗೆ ಸುಲಭವಾಗಿ ಅರ್ಥ ಮಾಡಿರುವ ಈ 'ವೈದ್ಯ ಪದಗಳ ಅರ್ಥ ವಿವರಣಾಕೋಶ'ವನ್ನು ಶ್ರಮಪಟ್ಟು ರಚಿಸಿ ಓದುಗರ ಕೈಗಿಡುತ್ತಿದ್ದೇವೆ.

ವೈದ್ಯಕೀಯ ಸಾಹಿತ್ಯಮಾಲೆಯಲ್ಲಿ ಪ್ರಕಟಿಸುತ್ತಿರುವ ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ನಾವು ಆಭಾರಿಯಾಗಿದ್ದೇವೆ. ಮಾಲೆಯ ಸಂಪಾದಕರುಗಳಾದ ಡಾ. ಸಿದ್ದಲಿಂಗಯ್ಯ ಮತ್ತು ಡಾ. ಸಿ.ಆರ್. ಚಂದ್ರಶೇಖರ್ ಅವರಿಗೆ ನಮ್ಮ ವಂದನೆಗಳು. ಅಲ್ಲದೆ, ಅಂದವಾದ ಡಿ.ಟಿ.ಪಿ.ಯನ್ನು ಮಾಡಿಕೊಟ್ಟ ಶ್ರೀ ಈ. ರಾಜೇಶ್‌ರವರಿಗೆ ವಂದನೆಗಳು.

– ಎನ್. ವಿಶ್ವರೂಪಾಚಾರ್

– ಎಂ.ಬಿ. ಗಿರೀಶ್ ತಾಳಿಕಟ್ಟೆ

ಬೆಂಗಳೂರು

# ಲೇಖಕರ ಪರಿಚಯ

| | | |
|---|---|---|
| ಪೂರ್ಣ ಹೆಸರು | : | ಎಂ.ಬಿ. ಗಿರೀಶ್ ತಾಳಿಕಟ್ಟೆ |
| ಹುಟ್ಟಿದ ದಿನಾಂಕ | : | ೧೩-೧೧-೧೯೮೩ ವಯಸ್ಸು ೨೮ ವರ್ಷ |
| ಪ್ರಸಕ್ತ ವಿಳಾಸ | : | ನಂ. ೯, ಇ.ಎ.ಟಿ. ರಸ್ತೆ, ಗಾಂಧಿಬಜಾರ್, ಬಸವನಗುಡಿ, ಬೆಂಗಳೂರು-೫೬೦ ೦೦೪. |
| ವಿದ್ಯಾಭ್ಯಾಸ | : | ದಂತ ವೈದ್ಯಕೀಯ ಪದವಿ (ಅಭ್ಯಾಸ) |
| ಉದ್ಯೋಗ | : | ಅರೆಕಾಲಿಕ ವೈದ್ಯ ಸಾಹಿತ್ಯ ಮತ್ತು ಆರೋಗ್ಯ ವಿಜ್ಞಾನಗಳ ಲೇಖನ ಬರಹ ಅರೆ ಕಾಲಿಕ ಉಪ ಸಂಪಾದಕ |
| ವೈದ್ಯ ಸಾಹಿತ್ಯ ಸೃಷ್ಟಿ | : | ಲೇಖನಗಳ ಸಂಖ್ಯೆ ಸುಮಾರು ೫೦, ಪುಸ್ತಕಗಳ ಸಂಖ್ಯೆ ೪ |

**ಪ್ರಶಸ್ತಿ / ಪುರಸ್ಕಾರ ವಿಜೇತ ಕೃತಿಗಳು ಹಾಗೂ ಪ್ರಶಸ್ತಿಯ ವಿವರ :**

ವೈದ್ಯ ಸಾಹಿತ್ಯ ಲೋಕದಲ್ಲಿ ಈಗಷ್ಟೆ ಬೆಳೆಯುತ್ತಿದ್ದು ಈಗಾಗಲೇ ಪ್ರಸಿದ್ಧ ಮಾಸ ಪತ್ರಿಕೆಗಳಲ್ಲಿ ಆರೋಗ್ಯ ವಿಜ್ಞಾನ ಲೇಖನಗಳು ಪ್ರಕಟವಾಗಿ ಓದುಗರ ಮೆಚ್ಚುಗೆ ಮತ್ತು ಖ್ಯಾತ ವೈದ್ಯ ಸಾಹಿತಿಗಳ ಪ್ರಶಂಸೆ ಗಳಿಸಿರುತ್ತವೆ. ದಂತ ವೈದ್ಯಕೀಯ ವಿದ್ಯಾರ್ಥಿಯಾದ್ದರಿಂದ ಸಹಜವಾಗಿಯೇ ವೈದ್ಯ ಸಾಹಿತ್ಯದತ್ತ ಆಸಕ್ತಿ ಮೂಡಿದೆ.

**ಇತರ ಪ್ರತಿಭೆ ಮತ್ತು ಚಟುವಟಿಕೆಗಳು :**

ರಾಜ್ಯದ ಪ್ರಸಿದ್ಧ ಆರೋಗ್ಯ ಮಾಸ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುವುದು, ವೈದ್ಯ ಸಾಹಿತ್ಯಕ್ಕೆ ಸಂಬಂಧಿಸಿದ ಗೋಷ್ಠಿ ಮತ್ತು ಸಮ್ಮೇಳನಗಳಲ್ಲಿ ಭಾಗವಹಿಸುವುದು. ಪೂರಕ ವೈದ್ಯಕೀಯ ಕ್ಷೇತ್ರಗಳಾದ ಆಪ್ತ ಅಮಾಲೋಚನೆಯಲ್ಲಿ ತೊಡಗಿಸಿಕೊಳ್ಳುವುದು. ಈಗಾಗಲೇ ಹವ್ಯಾಸಿ ಆಪ್ತ ಸಮಾಲೋಚಕರ ವೇದಿಕೆಯಿಂದ ನೀಡಿದ ಆಪ್ತ ಸಮಾಲೋಚನಾ ತರಬೇತಿಯಲ್ಲಿ ಭಾಗವಹಿಸಿ ಪ್ರಮಾಣ ಪತ್ರವನ್ನು ಪಡೆದಿರುತ್ತಾರೆ.

# ಲೇಖಕರ ಪರಿಚಯ

| | | |
|---|---|---|
| ಪೂರ್ಣ ಹೆಸರು | : | ಎನ್. ವಿಶ್ವರೂಪಾಚಾರ್ |
| ಹುಟ್ಟಿದ ದಿನಾಂಕ | : | ೫–೮–೧೯೪೪ (೬೪ ವರ್ಷ) |
| ಪ್ರಸಕ್ತ ವಿಳಾಸ | : | ನಂ. ೮೬, ೧೨ನೇ 'ಸಿ' ಮುಖ್ಯರಸ್ತೆ, ೬ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–೫೬೦ ೦೧೦. |
| ವಿದ್ಯಾಭ್ಯಾಸ | : | ಬಿ.ಎ., |
| ವಿಶೇಷ ಪರಿಣಿತಿ ವಿಷಯ | : | ಜನಾರೋಗ್ಯ ಮತ್ತು ದಾಂಪತ್ಯ ಜೀವನ ಮತ್ತು ಲೈಂಗಿಕ ವಿಜ್ಞಾನ |
| ಉದ್ಯೋಗ | : | ಹೆಲ್ತ್‌ಸೂಪರ್ ವೈಸರ್ (ನಿವೃತ್ತ) |
| ವೈದ್ಯ ಸಾಹಿತ್ಯ ಸೃಷ್ಟಿ | : | ಲೇಖನಗಳ ಸಂಖ್ಯೆ ಸುಮಾರು ೧೦೦೦ಕ್ಕೂ ಹೆಚ್ಚು, ಪುಸ್ತಕಗಳ ಸಂಖ್ಯೆ ೧೨೦ |

**ಪ್ರಶಸ್ತಿ / ಪುರಸ್ಕಾರ ವಿಜೇತ ಕೃತಿಗಳು ಹಾಗೂ ಪ್ರಶಸ್ತಿಯ ವಿವರ :**

೨೦೦೯ನೇ ಇಸವಿಯಲ್ಲಿ ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು 'ಕನ್ನಡ ವೈದ್ಯ ಸಾಹಿತ್ಯಕ್ಕೆ ಸಲ್ಲಿಸಿರುವ ಸೇವೆಗಾಗಿ' 'ಜೀವಮಾನ ಮಾನ ಸಾಧನೆ' ಪ್ರಶಸ್ತಿ ನೀಡಿರುತ್ತದೆ.

**ಇತರ ಪ್ರತಿಭೆ ಮತ್ತು ಚಟುವಟಿಕೆಗಳು :**

೧. ಆರೋಗ್ಯ ಮತ್ತು ಲೈಂಗಿಕ ಅರಿವು ತರಬೇತಿ ಕಾರ್ಯಕ್ರಮಗಳನ್ನು ನಡೆಸುವುದು.

೨. ಕನ್ನಡ ಆರೋಗ್ಯ ಮತ್ತು ವೈದ್ಯಕೀಯ ಪುಸ್ತಕಗಳ ಪ್ರದರ್ಶನ ಮಾರಾಟವನ್ನು ವಿವಿಧ ಸ್ಥಳಗಳಲ್ಲಿ ಏರ್ಪಡಿಸುವುದು.

೩. ಸಹ ಸಂಪಾದಕ : ಗಂಡ–ಹೆಂಡತಿ ಮತ್ತು ಆರೋಗ್ಯ ಸ್ಫೂರ್ತಿ ಮಾಸಪತ್ರಿಕೆ.

೪. ಅಧ್ಯಕ್ಷ : ಕರ್ನಾಟಕ ಹವ್ಯಾಸಿ ಆಪ್ತಸಮಾಲೋಚಕರ ವೇದಿಕೆ

೫. ಉಪಾಧ್ಯಕ್ಷ : ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು

# A

**ABACTERIAL** (ಎಬ್ಯಾಕ್ಟೀರಿಯಲ್) : ಬ್ಯಾಕ್ಟೀರಿಯಾದಿಂದ ಮುಕ್ತವಾದುದು. ವಿಕಾಣು ಜೀವಿ ಇಲ್ಲದ.

**ABDOMEN, ABDOMINAL CAVITY** (ಅಬ್ಡೋಮೆನ್, ಅಬ್ಡೋಮಿನಲ್ ಕ್ಯಾವಿಟಿ) : ಹೊಟ್ಟೆ; ಒಡಲು, ಹಿಂಭಾಗದಲ್ಲಿ ಕೆಳಭಾಗದ ಬೆನ್ನುಮೂಳೆ ಮತ್ತು ಬೆನ್ನಿನ ಮಾಂಸಖಂಡಗಳಿಂದಲೂ, ಇಕ್ಕೆಲ ಮತ್ತು ಮುಂಭಾಗದಲ್ಲಿ ಉದರ ಮಾಂಸಖಂಡಗಳಿಂದಲೂ ಆವೃತವಾಗಿರುವ ದೇಹದ ಕುಹರ. ಪೃಷ್ಠ ಮೂಳೆಯು ಇದರ ತಳಭಾಗದಲ್ಲಿ ನೆಲದಂತಿದ್ದರೆ, ಡಯಾಫ್ರಾಮ್ (ಉದರ ಪೊರೆ) ಇದರ ಮೇಲ್ಛಾವಣಿಯಾಗಿರುತ್ತದೆ. ಪಿತ್ತಕೋಶ, ಜಠರ, ಮೇದೋಜೀರಕಾಂಗ, ಕರುಳು, ಮೂತ್ರಪಿಂಡ, ಮೂತ್ರ ಚೀಲದಂತಹ ಅಂಗಗಳು ಇದರಲ್ಲಿರುತ್ತವೆ.

**ABDUCT** (ಅಬ್ಡಕ್ಟ್): ದೂರ ಸರಿಸು, ದೇಹದ ಮಧ್ಯೆ ಗೆರೆಯಿಂದ ದೂರಕ್ಕೆ ಚಲಿಸುವುದು.

**ABDUCTION** (ಅಬ್ಡಕ್ಷನ್) : ದೂರ ಸರಿಕೆ; ಅಪಚಾಲನ. ಕೈಕಾಲು ಇಲ್ಲವೆ ಕೈಕಾಲುಗಳ ಕೆಲ ಭಾಗ ದೇಹದ ಮಧ್ಯ ಗೆರೆಯಿಂದ ದೂರ ಚಲಿಸುವುದು ಉದಾ: ಕೈಯನ್ನು ದೇಹದ ಪಕ್ಕದಿಂದ ಮೇಲಕ್ಕೆ ಎತ್ತುವುದು. ಅದೇ ರೀತಿ ಕೈಬೆರಳು ಇಲ್ಲವೆ ಕಾಲು ಬೆರಳುಗಳನ್ನು ಅಗಲಿಸುವುದು ಕೂಡ ಅಬ್ಡಕ್ಷನ್.

**ABDUCTOR** (ಅಬ್ಡಕ್ಟರ್) : ದೂರ ಸರಿಕೆ, ದೇಹದ ಮಧ್ಯಗೆರೆಯಿಂದ ದೂರ ಚಲನೆಯನ್ನು ನಿಯಂತ್ರಿಸುವ ಮಾಂಸಖಂಡ.

**ABERRANT** (ಅಬೆರಂಟ್) : ದಾರಿಬಿಟ್ಟ; ದಿಸೆಗೆಟ್ಟ; ಸಾಮಾನ್ಯ ಲಕ್ಷಣಕ್ಕಿಂತ ಭಿನ್ನವಾದ, ಮಾನಸಿಕ ರೋಗಿಯ ನಡವಳಿಕೆಯಂತೆ.

**ABERRATION** (ಅಬೆರೇಷನ್): ಅಸಹಜತೆ, ತುಸು ಮತಿಗೆಡಿಕೆ; ಅಪಸಾಮಾನ್ಯವಾದುದು, ಮಾನಸಿಕ ಮತ್ತು ದೈಹಿಕ ಕ್ರಿಯೆಗಳಲ್ಲಿ ಅಸಹಜತೆಯಿದೆ ಎಂಬುದನ್ನು ಸೂಚಿಸುವ ಪದ.

**ABEYANCE** (ಅಬೇಯನ್ಸ್): ಸದ್ಯತಡೆ; ಕಡಿಮೆಯಾಗುವುದು. ಲಕ್ಷಣಗಳಂತೆ. ಸಾಮಾನ್ಯವಾಗಿ ತಾತ್ಕಾಲಿಕವಾಗಿರುವಂತವು.

**ABLATION** (ಅಬ್ಲೇಷನ್): ಕಿತ್ತೆಗೆತ; ಶಸ್ತ್ರಚಿಕಿತ್ಸೆಯಿಂದ ದೇಹದ ಒಂದು ಭಾಗವನ್ನು ಪ್ರತ್ಯೇಕಿಸುವುದು ಇಲ್ಲವೆ ತೆಗೆದು ಹಾಕುವುದು.

**ABLUTION** (ಅಬ್ಲೂಷನ್): ದೇಹವನ್ನು ತೊಳೆಯುವುದು (ಸ್ನಾನ).

**ABORTION** (ಅಬಾರ್ಷನ್): ಗರ್ಭಪಾತ; ಮೈಯಿಳಿತ, ಅಕಾಲಿಕವಾಗಿ ಗರ್ಭವನ್ನು ಕೊನೆಗಾಣಿಸುವುದು, ನೈಸರ್ಗಿಕ ಅಥವಾ ಕೃತಕ ರೀತಿಯಿಂದ.

**ABNORMAL** (ಅಬ್‌ನಾರ್ಮಲ್): ಅಸಹಜತೆ, ಅಸ್ವಾಭಾವಿಕತೆ, ಅಪಸಾಮಾನ್ಯ ಸಾಮಾನ್ಯವಲ್ಲದ್ದು.

**ABRADE** (ಅಬ್ರೇಡ್): ತರಚು, ಚಿವುರು, ಉಜ್ಜುವುದರಿಂದ ಸವೆದು ಹೋಗುವುದು (ಚರ್ಮದಂತೆ).

**ABRASION** (ಅಬ್ರೇಝನ್): ತರಚಿಕೆ, ಚಿವುರ್ಗಾಯ, ಚರ್ಮದ ಮೇಲ್ಮೈಯನ್ನು ಉಜ್ಜುವುದರಿಂದಾದ ಗಾಯ.

**ABSCESS** (ಅಬ್ಸೆಸ್): ಕುರು, ಸೋಂಕಿನಿಂದಾಗಿ ಉಬ್ಬಿದ ದೇಹದ ಭಾಗ. ಕೆಲವೊಮ್ಮೆ ಕೆಂಪಗಾಗಿದ್ದು ನೋವನ್ನು ಹೊಂದಿರುತ್ತದೆ ಮತ್ತು ಅಲ್ಲಿ ಕೀವು ಶೇಖರಣೆಯಾಗಿರುತ್ತದೆ.

ಬ್ಯಾಕ್ಟೀರಿಯಾದ ಸೋಂಕು ಅಥವಾ ಇನ್ನಾವುದೇ ರೀತಿಯ ಅಲರ್ಜಿಯ ವಸ್ತುಗಳಿಗೆ ದೇಹವು ತೋರಿಸುವ ಸ್ವಾಭಾವಿಕ ಪ್ರತಿಕ್ರಿಯೆಯಿಂದಾಗಿ ಕೀವು ಶೇಖರಣೆಗೊಂಡಿರುತ್ತದೆ. ಲ್ಯೂಕೋಸೈಟ್ಸ್ ಅಥವಾ ಬಿಳಿರಕ್ತಕಣಗಳು ಸೋಂಕಿನ ವಿರುದ್ಧ ಹೋರಾಡಲು ಅಲ್ಲಿ ಶೇಖರಗೊಂಡಿರುತ್ತವೆ. ಸತ್ತ ಬ್ಯಾಕ್ಟೀರಿಯಾ ಮತ್ತು ಬಿಳಿ ರಕ್ತಕಣಗಳು ಸೇರಿ ಈ ಕೀವು ಉಂಟಾಗುತ್ತದೆ ಮಾತ್ರವಲ್ಲ ಆ ಜಾಗದಲ್ಲಿ ಒತ್ತಡ ಮತ್ತು ಅಸೌಖ್ಯತೆಯನ್ನು ಉಂಟುಮಾಡುತ್ತದೆ. ಕೀವು ತನ್ನಷ್ಟಕ್ಕೆ ಚರ್ಮ ಒಡೆದು ಹೊರಬರುತ್ತದಾದರೂ, ವೈದ್ಯರಿಂದ ಅದನ್ನು ತೆಗೆಸಿಕೊಳ್ಳುವುದು ಸೂಕ್ತ. ಒಡೆಯಲು ಸಂಪೂರ್ಣ ಅರ್ಹವಾಗುವ

ಮುನ್ನವೆ ಕೀವನ್ನು ಚುಚ್ಚಿ ಹೊರ ತೆಗೆಯುವುದರಿಂದ ಸೋಂಕು ಮತ್ತಷ್ಟು ಹರಡುವ ಸಂಭವವಿರುವುದರಿಂದ ಆ ಕೆಲಸಕ್ಕೆ ಮುಂದಾಗಬಾರದು.

**ABSORPTION** (ಅಬ್ಸಾರ್ಪ್‌ಷನ್): ಹೀರಿಕೆ; ಆಹಾರ ಅಥವಾ ಯಾವುದೇ ಪದಾರ್ಥಗಳು ದೇಹದೊಳಗೆ ಸೇರಿಕೊಳ್ಳುವ ಕ್ರಿಯೆ. ಅಬ್ಸಾರ್ಪ್ಷನ್ ನಾನಾ ವಿಧದಿಂದ ಆಗಬಹುದು. ಉದಾ.: ಗ್ಯಾಸ್ಟ್ರೋಇಂಟೆಸ್ಟಿನಾಲ್ ಟ್ರ್ಯಾಕ್ಟ್ (ಉದರ–ಕರುಳು ನಾಳ) ಮೂಲಕ, ಚರ್ಮದ ಮೂಲಕ, ಕಣ್ಣು ಮತ್ತು ಮೂಗಿನ ಮ್ಯೂಕಸ್ ಮೆಂಬ್ರೇನ್ ಮೂಲಕ ಇತ್ಯಾದಿ.

ಆಹಾರ ಮತ್ತು ದ್ರವ ಪದಾರ್ಥಗಳನ್ನು ಬಾಯಿಯಿಂದ ಸೇವಿಸಿದಾಗ ಅನ್ನನಾಳದ ಮೂಲಕ ಜಠರವನ್ನು ಸೇರಿ ನಂತರ ಕರುಳನ್ನು ಸೇರುತ್ತದೆ. ಅಲ್ಲಿ ಆಹಾರದ ಅಬ್ಸಾರ್ಪ್ಷನ್ (ಹೀರುವಿಕೆ) ನಡೆಯುತ್ತದೆ.

ಬಹಳಷ್ಟು ಔಷಧಗಳು ಇದೇ ರೀತಿ ಅನ್ನನಾಳದ ಮೂಲಕ ಜಠರವನ್ನು ಹಾದು ಕರುಳನ್ನು ಸೇರಿ, ಅಲ್ಲಿ ಕರುಳು ಕವಚ (ಇಂಟಸ್ಟಿನಲ್ ವಾಲ್)ವನ್ನು ಸೇರಿ, ರಕ್ತ ಪ್ರವಾಹವನ್ನು ಸೇರುತ್ತವೆ. ಕೆಲ ಔಷಧಗಳು ಚರ್ಮ ಮತ್ತು ಮ್ಯೂಕಸ್ ಮೆಂಬ್ರೇನ್‌ಗಳಿಂದಲೂ ಹೀರಲ್ಪಡುತ್ತವೆ. ಬೆಳಕಿನ ಕಿರಣಗಳು ಚರ್ಮದ ಮೂಲಕ ದೇಹದಿಂದ ಹೀರಲ್ಪಡುತ್ತವೆ.

**ABUSE** (ಅಬ್ಯೂಸ್): ತಪ್ಪು ಬಳಕೆ, ಅತಿ ಬಳಕೆ, ಅಪಬಳಕೆ, ತಪ್ಪು ವರ್ತನೆ ಕೆಲವನ್ನು ತಪ್ಪು ಪ್ರಮಾಣದಲ್ಲಿ ಅಥವಾ ಬೇಕಾಬಿಟ್ಟಿ ಬಳಸುವುದು. ಉದಾ.: ಔಷಧ. ವೈದ್ಯ ಸೌಲಭ್ಯ, ತಪಾಸಣೆಗಳು.

**ACAPNIA** (ಅಕ್ಯಾಪ್ನಿಯ): ಇಂಗಾಲಾಮ್ಲ ಕೊರೆ; ಇಂಗಾಲದ ಡೈಆಕ್ಸೈಡ್ ಕೊರತೆ, ರಕ್ತ ಅಥವಾ ದೇಹದ ಅಂಗಾಂಶದಲ್ಲಿ ಇಂಗಾಲದ ಡೈಆಕ್ಸೈಡ್ ($Co_2$)ನ ಕೊರತೆ.

**ACCELERATOR** (ಆ್ಯಗ್ಸಿಲರೇಟರ್): ವೇಗಕಾರಿ, ಔಷಧಿಯಂತ ವಸ್ತುಗಳ ಕ್ರಿಯೆಯ ವೇಗವನ್ನು ಹೆಚ್ಚಿಸುವಂತ ಮಧ್ಯವರ್ತಿ, ದೇಹದ ಚಟುವಟಿಕೆಯನ್ನು ಹೆಚ್ಚಿಸುವ ನರ ಅಥವಾ ಮಾಂಸಖಂಡ.

**ACCLIMATE** (ಆಕ್ಲೈಮೇಟ್) : ಹವಾಗುಣದೊಂದಿಕೆ; ಹವಾಗುಣದೊಂದಿಗೆ ಹೊಂದಿಕೊಳ್ಳುವುದು; ಹೊಸ ಸ್ಥಿತಿಗಳಿಗೆ ಹೊಂದಿಕೊಳ್ಳುವುದು. ಉದಾ.: ಉಷ್ಣತೆ ಅಥವಾ ಪರಿಸರ.

**ACCOMMODATION** (ಅಕೊಮೊಡೇಷನ್): ಹೊಂದಾಣಿಕೆ; ಅತಿ ಹೆಚ್ಚಿನ ಬೆಳಕು ಅಥವಾ ಕಡಿಮೆ ಬೆಳಕಿನಲ್ಲಿರುವ ವಸ್ತುಗಳನ್ನು ಸರಿಯಾಗಿ ನೋಡಲು

ಮತ್ತು ಹತ್ತಿರದ ಹಾಗೂ ದೂರದ ವಸ್ತುಗಳನ್ನು ಗುರುತಿಸುವುದಕ್ಕಾಗಿ ಕಣ್ಣಿನ ಮಸೂರ (ಲೆನ್ಸ್)ಗಳು ಹೊಂದಾಣಿಕೆಯಾಗುವುದು.

ಹತ್ತಿರದ ವಸ್ತುಗಳನ್ನು ನೋಡುವಾಗ ಕಣ್ಣಿನ ಮಸೂರಗಳು ದಪ್ಪವಾಗಿ, ಹೆಚ್ಚಿನ ಪೀನ (ಕಾನ್ವೆಕ್ಸ್) ಆಕಾರಕ್ಕೆ ತಿರುಗಿ, ವಸ್ತುವಿನ ಬೆಳಕು ಕಣ್ಣಿನ ರೆಟಿನಾದ ಮೇಲೆ ಕೇಂದ್ರಿತವಾಗುವಂತೆ ಮಾರ್ಪಾಟಾಗುತ್ತವೆ. ದೂರದ ವಸ್ತುಗಳನ್ನು ನೋಡುವಾಗ ವಸ್ತುವಿನ ಬೆಳಕನ್ನು ರೆಟಿನಾದ ಮೇಲೆ ಕೇಂದ್ರೀಕರಿಸಲು ಮಸೂರಗಳು ಕುಗ್ಗುತ್ತವೆ.

ವಯಸ್ಸಾದಂತೆ ಕಣ್ಣಿನ ಈ ರೀತಿಯ ಹೊಂದಾಣಿಕೆಯ ಗುಣ ಕಡಿಮೆಯಾಗುತ್ತ ಬರುವುದರಿಂದ ಹತ್ತಿರದ ಮತ್ತು ದೂರದ ವಸ್ತುಗಳನ್ನು ನೋಡಲು ಕನ್ನಡಕವನ್ನು ಬಳಸಬೇಕಾಗುತ್ತದೆ.

**ACCRETION** (ಅಕ್ರೀಷನ್): ಒಳ ಸೇರಿಕೆ, ಸಂಚಯ, ಬೆಳವಣಿಗೆಯ ಕ್ರಿಯೆ.

**ACHE** (ಏಕ್): ನೋವು, ಬಿಡದ ಅಥವಾ ಸ್ಥಿರವಾದ ಮಂದಗತಿಯ ನೋವು.

**ACHILLES TENDON** (ಅಕಿಲೇಸ್ ಟೆಂಡಾನ್): ಅಕಿಲೇಸನ ಕಂಡರ, ಹಿಮ್ಮಡಿಯ ಮೂಳೆಯೊಂದಿಗೆ ಮೀನಖಂಡ ಮಾಂಸಖಂಡವನ್ನು ಬೆಸೆಯುವ ಜೋಡಣೆ, ಅಂಗಾಂಶ.

**ACNE** (ಏಕ್ನೆ): ಮೊಡವೆ; ಬೆವರು ಗ್ರಂಥಿ ಅಥವಾ ಚರ್ಮದ ಎಣ್ಣೆ ಉತ್ಪಾದಿಸುವ ಅಂಗದ ಉರಿಯೂತ. ಗಟ್ಟಿಯಾದ ನೋವು ಪೂರಿತ ಗುಳ್ಳೆಯ ಲಕ್ಷಣ ಹೊಂದಿರುತ್ತದೆ. ಈ ಸ್ಥಿತಿಯನ್ನು ಸಾಮಾನ್ಯವಾಗಿ ಯೌವ್ವನಾವಸ್ಥೆಯಲ್ಲಿ ಕಾಣಬಹುದು. ಎಣ್ಣೆ, ಬೆವರು, ಕೊಬ್ಬುಪೂರಿತ ವಸ್ತುಗಳಾಗಿದ್ದು ಚರ್ಮ ತನ್ನ ರಚನೆಯನ್ನು ಕಾಪಾಡಿಕೊಳ್ಳಲು ತುಂಬಾ ಸಹಾಯ ಮಾಡುತ್ತವೆ.

ಆ್ಯಂಡ್ರೋಜೆನ್ ಅಥವಾ ಲೈಂಗಿಕ ಹಾರ್ಮೋನ್ ಯೌವ್ವನಾವಸ್ಥೆಯಲ್ಲಿ ಸ್ತ್ರೀ ಮತ್ತು ಪುರುಷರಿಬ್ಬರಲ್ಲೂ ಹೆಚ್ಚಾಗಿ ಉತ್ಪತ್ತಿಯಾಗುವುದರಿಂದ ಬೆವರು ಗ್ರಂಥಿಗಳು ಹೆಚ್ಚು ಕ್ರಿಯಾಶೀಲವಾಗಿ ಗಟ್ಟಿಯಾದ ಬೆವರನ್ನು (ಸೆಬಮ್) ಉತ್ಪತ್ತಿ ಮಾಡುತ್ತವೆ. ಇದು ಗ್ರಂಥಿ ಮತ್ತು ಕೂದಲು ಚೀಲ (ಹೇರ್ ಫಾಲಿಕಲ್)ಗಳನ್ನು ಮುಚ್ಚಲು ಶಕ್ತವಾಗಿರುವುದರಿಂದ ಅವುಗಳನ್ನು ಮುಚ್ಚಿಬಿಡುತ್ತದೆ.

ಕಾಲಕ್ರಮೇಣ, ವ್ಯಕ್ತಿ ಯೌವನಾವಸ್ಥೆಯನ್ನು ದಾಟಿ ಪ್ರಬುದ್ಧತೆಯೆಡೆಗೆ ನಡೆದಂತೆ ಈ ಸಮಸ್ಯೆ ದೂರಾಗುತ್ತದೆ. ಸೋಪು ಮತ್ತು ನೀರನ್ನು ಬಳಸಿ ತೊಳೆಯುವುದರಿಂದ ಕೆಲ ಬ್ಯಾಕ್ಟೀರಿಯಾ ಮತ್ತು ಕಶ್ಮಲಗಳನ್ನು

ತೆಗೆಯಬಹುದು. ಚರ್ಮರೋಗ ತಜ್ಞರ ಸೂಕ್ತ ಚಿಕಿತ್ಸೆಯಿಂದಲೂ ಇದರ ಲಕ್ಷಣವನ್ನು ಕಡಿಮೆ ಮಾಡಬಹುದಾಗಿದೆ.

**ACOUSTIC NERVE** (ಅಕಾಸ್ಟಿಕ್ ನರ್ವ್): ಕೇಳುವುದಕ್ಕೆ ಸಂಬಂಧಪಟ್ಟ ಸಂದೇಶವನ್ನು ರವಾನಿಸುವ ಮತ್ತು ಒಳಕಿವಿ ಮತ್ತು ಮೆದುಳಿನ ನಡುವೆ ಸಮತೋಲನವನ್ನು ಕಾಪಾಡುವ ನರ.

**ACQUIRED** (ಅಕ್ವೈರ್ಡ್): ಗಳಿತ; ಗಳಿಸಿದ; ಪರಿಸರದಿಂದ ಪ್ರಚೋದನೆಗೊಂಡು ಉಂಟಾದ ಅಥವಾ ಬದಲಾವಣೆಯನ್ನು ಹೊಂದಿದ ಸ್ಥಿತಿಯ ವಿವರಣೆ. ಜನ್ಮಿಸುತ್ತಲೆ ವಂಶವಾಹಿನಿಯಿಂದ ಹೊಂದಿದ ಸ್ಥಿತಿಯಿಂದ ಹೊರತಾಗಿದ್ದು.

**ACRID** (ಅಕ್ರಿಡ್): ತುಂಬಾ ತೀಕ್ಷ್ಣ ಮತ್ತು ಸಹಿಸಲು ಆಗದ ರುಚಿ ಅಥವಾ ವಾಸನೆ.

**ACROPHOBIA** (ಅಕ್ರೋಫೋಬಿಯ): ಏರಿನಂಜಿಕೆ; ಎತ್ತರದ ಸ್ಥಳಗಳ ಬಗ್ಗೆ ಇರುವ ಅತೀವ ಭಯ. ಬೀಳುವ ಅವಕಾಶವಿರುವುದರಿಂದ ಎತ್ತರದ ಬಗ್ಗೆ ಮನುಷ್ಯರಿಗೆ ಸ್ವಲ್ಪ ಪ್ರಮಾಣದಲ್ಲಿ ರಕ್ಷಣಾತ್ಮಕ ಭಯ ಇರುವುದು ಸಾಮಾನ್ಯ. ಆದರೆ ಆ್ಯಕ್ರೋಫೋಬಿಯಾದಲ್ಲಿ ಬೀಳುವ ಅವಕಾಶ ಇಲ್ಲದೆ. ಇರುವ ಸ್ಥಳಗಳ ಬಗ್ಗೆಯು ತೀವ್ರವಾದ ಭಯ ಇರುತ್ತದೆ.

**ACTH** (ಎ.ಸಿ.ಟಿ.ಹೆಚ್): ಅಡ್ರಿನೋ ಕಾರ್ಟಿಕೋ ಟ್ರೋಪಿಕ್ ಹಾರ್ಮೋನು: ಮೆದುಳಿನ ತಳಭಾಗದಲ್ಲಿರುವ ಪಿಟ್ಯುಟರಿ ಗ್ರಂಥಿಯಿಂದ ಉತ್ಪತ್ತಿಯಾಗುವ ಅತಿ ಅವಶ್ಯಕ ಹಾರ್ಮೋನು. ಜೀವ ರಾಸಾಯನಿಕ ಕ್ರಿಯೆಯನ್ನು ನಿಯಂತ್ರಿಸುವ ಅಡ್ರಿನಲ್ ಗ್ರಂಥಿಗಳನ್ನು ಪಿಟ್ಯುಟರಿ ಗ್ರಂಥಿಯೊಂದಿಗೆ ಬೆಸೆಯುವ ಕೆಲಸ ಈ ಹಾರ್ಮೋನ್‌ದ್ದು.

**ACCUITY** (ಅಕ್ಯುಟಿ): ಚುರುಕು; ತೀವ್ರತೆ; ಚೂಪುತನ; ತೀಕ್ಷ್ಣ ನೋಟ ಅಥವಾ ಗ್ರಹಿಕೆ.

**ACUPRESSURE** (ಆಕ್ಯುಪ್ರೆಷರ್): ನೋವನ್ನು ಕಡಿಮೆ ಮಾಡಲು ಅಥವಾ ಕಾಯಿಲೆಗೆ ಚಿಕಿತ್ಸೆ ನೀಡಲು ದೇಹದ ವಿವಿಧ ಭಾಗಗಳಿಗೆ ಒತ್ತಡವನ್ನು ಹಾಕುವ ವಿಧಾನ.

**ACUPUNCTURE** (ಅಕ್ಯುಪಂಕ್ಚರ್): ಸೂಜಿಚುಚ್ಚುಗೆ; ನೋವನ್ನು ನಿವಾರಿಸಲು ಅಥವಾ ರೋಗಕ್ಕೆ ಚಿಕಿತ್ಸೆ ನೀಡಲು, ಉದ್ದನೆಯ ಸೂಜಿಯ ತುದಿಗಳನ್ನು ಚರ್ಮದೊಳಗೆ ಚುಚ್ಚಿ ನಿಯಂತ್ರಿಸುತ್ತಿದ್ದ ಪುರಾತನ ಚಿಕಿತ್ಸಾ ವಿಧಾನ.

**ACUTE** (ಅಕ್ಯೂಟ್): ತೀವ್ರ; ಮೊನಚಾದ; ತಕ್ಷಣ ಅಥವಾ ತೀವ್ರವಾದ. ಕಡಿಮೆ ಕಾಲಾವಧಿಯದ್ದು.

**ACUTE BRONCHITIS** (ಅಕ್ಯೂಟ್ ಬ್ರಾಂಕೈಟಿಸ್): ತೀವ್ರವಾದ ಬ್ರಾಂಕೈಟಿಸ್; ಉಸಿರುನಾಳ ಮತ್ತು ಬ್ರಾಂಕೈಗಳ ಉರಿಯೂತದ ಲಕ್ಷಣಗಳನ್ನು ಹೊಂದಿರುವ ಶ್ವಾಸವ್ಯೂಹದ ಸೋಂಕು.

ಪ್ರಾರಂಭದಲ್ಲಿ ಒಣಕೆಮ್ಮು ಮಾತ್ರವಿದ್ದು ನಂತರ ಅದು ಕಫದಿಂದ ಕೂಡಿದ ಕೆಮ್ಮು ಆಗಿ ಬದಲಾಗುತ್ತದೆ. ಉಸಿರಾಡುವಾಗ ವ್ಯಕ್ತಿಗೆ ಅಸೌಖ್ಯತೆ ಉಂಟಾಗುತ್ತದೆ. ಕೆಮ್ಮು ಮತ್ತು ನೆಗಡಿಯ ಚಿಕಿತ್ಸೆಗಳೇ ಇದಕ್ಕೂ ಸೂಕ್ತ. ಆದರೆ ಲಕ್ಷಣಗಳು ತುಂಬಾ ದಿನಗಳವರೆಗೆ ಕಾಣಿಸಿಕೊಂಡರೆ ಕೂಡಲೆ ವೈದ್ಯರನ್ನು ಸಂಪರ್ಕಿಸಬೇಕು.

**ADAPTATION** (ಅಡಾಪ್ಟೇಶನ್): ಸರಿಹೊಂದುವಳಿ; ಅನುಗೊಳಿಕೆ; ಯಾವುದೇ ಪರಿಸರ, ಸ್ಥಿತಿಗತಿಗೆ ಹೊಂದಾಣಿಕೆಯನ್ನು ಮಾಡಿಕೊಳ್ಳುವ ಪ್ರಕ್ರಿಯೆ.

**ADDICTION** (ಅಡಿಕ್ಷನ್): ದುಶ್ಚಾಳಿ, ಕೆಟ್ಟಚಾಳಿ, ವ್ಯಸನ; ಅಭ್ಯಾಸ ಬೆಳೆಸುವಂತಹ ಅಥವಾ ಅಪಾಯಕಾರಿ ವಸ್ತುಗಳ ತೀರಾ ಅವಲಂಬನೆ ಅಥವಾ ಹೆಚ್ಚಿಗೆ ಬಳಸುವುದು.

**ADDICTIVE** (ಅಡಿಕ್ಟಿವ್): ವ್ಯಸನಕ್ಕೊಳಗಾಗುವುದು; ಅಭ್ಯಾಸವನ್ನು ಬೆಳೆಸುವಂತಹ ವಸ್ತುಗಳಿಗೆ ದಾಸರಾಗುವುದು.

**ADDISON'S DISEASE** (ಅಡ್ಡಿಸನ್ಸ್ ಡಿಸೀಜ಼್): ಅಡ್ಡಿಸನ್ಸ್‌ನ ಕಾಯಿಲೆ; ಅಡ್ರಿನಲ್ ಗ್ರಂಥಿಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸದೆ ಇರುವುದು ಮತ್ತು ಸ್ಟಿರಾಯ್ಡ್ ಹಾರ್ಮೋನುಗಳನ್ನು ಅವಶ್ಯವಿರುವಷ್ಟು ಪ್ರಮಾಣದಲ್ಲಿ ಉತ್ಪಾದಿಸದೆ ಇರುವ ಸ್ಥಿತಿ.

ನಿಶ್ಯಕ್ತಿ, ಆಯಾಸ ಮತ್ತು ಚರ್ಮದಲ್ಲಿ ಕಲೆಗಳು (ಪಿಗ್ಮೆಂಟೇಷನ್) ಮುಂತಾದ ಸಾಮಾನ್ಯ ಲಕ್ಷಣ ಮಾತ್ರವಲ್ಲದೆ ದೇಹದ ತೂಕ ಕಡಿಮೆಯಾಗುವುದು, ನಿರ್ಜಲೀಕರಣ, ಕಡಿಮೆ ರಕ್ತದೊತ್ತಡ ಮತ್ತು ವಾಕರಿಕೆಯಂತಹ ಲಕ್ಷಣಗಳನ್ನೂ ಈ ಅಡ್ಡಿಸನ್ಸ್ ಸ್ಥಿತಿಯಲ್ಲಿ ಕಾಣಬಹುದು.

**ADDUCTION** (ಅಡಕ್ಷನ್): ಒಳಗೆಳೆತ; ಕೈಕಾಲು ಅಥವಾ ಕೈಕಾಲಿನ ಕೆಲ ಭಾಗ ದೇಹದ ಮಧ್ಯಗೆರೆ ಕಡೆಗೆ ಚಲಿಸುವ ಚಲನೆಯ ವಿವರಣೆ. ಉದಾ.: ಎತ್ತಿದ ಕೈಗಳನ್ನು ದೇಹದ ಪಕ್ಕಕ್ಕೆ ಇಳಿಸುವುದು. ಅದೇ ರೀತಿ ಅಗಲಿಸಿದ ಕೈ ಮತ್ತು ಕಾಲು ಬೆರಳುಗಳನ್ನು ಪುನಃ ಮೊದಲಿನ ಸ್ಥಿತಿಯಲ್ಲಿ

ಜೋಡಿಸುವುದು ಕೂಡ ಅಡಕ್ಷನ್. ಈ ರೀತಿಯ ಚಲನೆಗೆ ಕಾರಣವಾದ ಮಾಂಸಖಂಡಗಳನ್ನು ಅಡಕ್ಟರ್ ಎಂದು ಕರೆಯುತ್ತಾರೆ.

**ADENITIS** (ಅಡಿನೈಟಿಸ್): ಗ್ರಂಥಿಯುರಿತ; ಹಾಲ್ರಸ ಗ್ರಂಥಿಯುರಿತ; ದುಗ್ಧಗ್ರಂಥಿಯ ಉರಿಯೂತ. ಸೋಂಕಿನ ವಿರುದ್ಧ ಹೋರಾಡುವಲ್ಲಿ ದೇಹಕ್ಕೆ ಸಹಾಯ ಮಾಡುವ ಈ ದುಗ್ಧ ಗ್ರಂಥಿ (Lymph Node)ಗಳು ದೇಹದ ತುಂಬೆಲ್ಲಾ ಚದುರಿರುತ್ತವೆ.

**ADENO CARICINOMA** (ಅಡಿನೋ ಕಾರ್ಸಿನೋಮ): ಗ್ರಂಥಿ ಏಡಿಗಂತಿ; ದೇಹ ಅಂಗಾಂಶಗಳಾದ ಜಠರ, ದೊಡ್ಡಕರುಳು, ಪಿತ್ತಜನಕಾಂಗ, ಮೇದೋಜೀರಕಾಂಗ, ಗರ್ಭಕೋಶ ಅಥವಾ ವೃಷಣ ಗ್ರಂಥಿಗಳಲ್ಲಿ ಉಂಟಾಗುವ ಸಾಮಾನ್ಯ ರೀತಿಯ ಕ್ಯಾನ್ಸರ್ ಗಡ್ಡೆ. ಈ ಗಡ್ಡೆ ಕೆಲ ಬಾರಿ ಮೊಲೆ ಅಥವಾ ಶ್ವಾಸಕೋಶಗಳಲ್ಲೂ ಕಾಣಿಸಿಕೊಳ್ಳಬಹುದು.

ಇದನ್ನು ಗುರುತಿಸಿ ಸರಿಯಾದ ಚಿಕಿತ್ಸೆ ನೀಡದೆ ಇದ್ದರೆ, ರಕ್ತ ಮತ್ತು ದುಗ್ಧ ಅಂಗಾಂಶ ವ್ಯವಸ್ಥೆ ಮೂಲಕ ದೇಹದ ಇತರ ಭಾಗಗಳಿಗೂ ಹರಡಿ ಮೂಲ ಗಡ್ಡೆಯನ್ನೇ ಹೋಲುವ ದ್ವಿತೀಯ ಹಂತದ (ಸೆಕೆಂಡರಿ) ಗಡ್ಡೆಗಳಿಗೆ ಕಾರಣವಾಗುತ್ತವೆ.

**ADENOIDS** (ಅಡಿನಾಯ್ಡ್ಸ್): ಮೂಗಳ್ಳೆ; ಟಾನ್ಸಿಲ್‌ಗಳ ಮೇಲೆ, ಗಂಟಲಿನ ದ್ವಾರದ ಬಳಿಯಿರುವ ಲಿಂಫಾಯ್ಡ್ ಅಂಗಾಂಶ (ದುಗ್ಧ ಅಂಗಾಂಶ). ಶ್ವಾಸವ್ಯೂಹದ ರೋಗಗಳ ವಿರುದ್ಧ ರಕ್ಷಣೆ ನೀಡುವಂತಹ ವಿಶೇಷ ರೀತಿಯ ಬಿಳಿರಕ್ತಕಣಗಳನ್ನು ಅಡಿನಾಯ್ಡ್ ಹೊಂದಿರುತ್ತದೆ. ಟಾನ್ಸಿಲ್‌ಗಳಂತೆ ಸೋಂಕಿನ ಸಂದರ್ಭದಲ್ಲಿ ಅಡಿನಾಯ್ಡ್‌ಗಳು ಕೂಡ ಹಿಗ್ಗಿ ದಪ್ಪಗಾಗಬಲ್ಲವು. ಕೆಲವೊಂದು ಬಾರಿ ಪದೇ ಪದೇ ಆಗುವ ಸೋಂಕು ಇಲ್ಲವೆ ಅಲರ್ಜಿಯಿಂದಾಗಿ ಇವು ದೊಡ್ಡದಾಗೆ ಉಳಿದು ಉಸಿರಾಟಕ್ಕೆ ತೊಂದರೆಯಾಗಬಹುದು. ಕೆಲವೊಂದು ಬಾರಿ ಶಸ್ತ್ರಚಿಕಿತ್ಸೆಯಿಂದ ಅವುಗಳನ್ನು ತೆಗೆಯುತ್ತಾರಾದರು, ಅವುಗಳ ರಕ್ಷಣಾತ್ಮಕ ಕೆಲಸ ಮತ್ತು ವಯಸ್ಸಾದಂತೆ ತಮ್ಮ ಗಾತ್ರದಲ್ಲಿ ಕುಗ್ಗುವ ಗುಣಗಳಿಂದಾಗಿ ಹಾಗೇ ಬಿಡುತ್ತಾರೆ.

**ADENOMA** (ಅಡಿನೋಮ): ಗ್ರಂಥಿ; ಗಂತಿ; ಗ್ರಂಥಿ ಅಂಗಾಂಶಗಳಲ್ಲಿ ಕಾಣಿಸಿಕೊಳ್ಳುವ, ಪ್ರಾರಂಭಿಕ ಹಂತದಲ್ಲಿರುವ ಅಪಾಯಕಾರಿಯಲ್ಲದ ಗಡ್ಡೆ.

ಸಾಮಾನ್ಯವಾಗಿ ಈ ಅಡಿನೋಮ ಒಂದು ರೀತಿಯ ಅಸೌಖ್ಯ ಮತ್ತು ನೋವನ್ನು ಉಂಟು ಮಾಡಿದರೂ, ಅಷ್ಟೇನು ಅಪಾಯಕಾರಿಯಲ್ಲ. ಪ್ರತ್ಯೇಕವಾಗಿಯೇ ಇರುವ ಇದು ಸುತ್ತಲಿನ ಬೇರೆ ಅಂಗಾಂಶಗಳಿಗೆ ಹರಡುವುದಿಲ್ಲ ಮತ್ತು ಅವುಗಳನ್ನು ನಾಶ ಮಾಡುವುದಿಲ್ಲ.

**ADENOSIS** (ಅಡಿನೋಸಿಸ್): ಗ್ರಂಥಿಬೇನೆ; ಗ್ರಂಥಿಗಳ ಕಾಯಿಲೆ, ನಿಖರವಾಗಿ ಗ್ರಂಥಿ ಅಂಗಾಂಶದ ಅಪಸಾಮಾನ್ಯ ಬೆಳವಣಿಗೆ.

**ADHESION** (ಅಡ್ಹೇಷನ್): ಸಾಮಾನ್ಯವಾಗಿ ಬೇರ್ಪಟ್ಟಿರುವ ಅಂಗಾಂಶಗಳನ್ನು ಸೇರಿಸುವುದು. ಮತ್ತೊಂದು ಬೇರೆ ಅಂಗಾಂಶಕ್ಕೆ ಅಂಟಿಕೊಳ್ಳುವ ಅಂಗಾಂಶ.

**ADIPOSE TISSUE** (ಅಡಿಪೋಸ್ ಟಿಶ್ಯೂ): ಕೊಬ್ಬಿನ ಅಂಗಾಂಶ; ದೇಹದ ತುಂಬೆಲ್ಲ ಸಿಗುವ ಕೊಬ್ಬಿನ ಅಂಗಾಂಶ. ಚರ್ಮದ ಕೆಳಗೆ ಇರುವ ಇದು ತಡೆ ಕವಚ (ಇನ್ಸುಲೇಷನ್) ಮತ್ತು ಶಕ್ತಿಯ ಆಗರವಾಗಿ ಕಾರ್ಯ ನಿರ್ವಹಿಸುತ್ತದೆ. ಅನಿರೀಕ್ಷಿತ ಆಘಾತಗಳಿಗೆ ಒಳಗಾಗುವಂತಹ ಪೃಷ್ಠ ಮತ್ತು ಹಿಮ್ಮಡಿಗಳಲ್ಲಿ ಯಥೇಚ್ಛವಾಗಿ ಶೇಖರವಾಗುವ ಇದು ಶಾಕ್ ಅಬ್ಸಾರ್ಬರ್ ರೀತಿ ಕಾರ್ಯ ನಿರ್ವಹಿಸುತ್ತದೆ.

ಮೂಳೆಯ ನೆಣ (ಬೋನ್ ಮ್ಯಾರೋ)ದಲ್ಲಿರುವ ಕೊಬ್ಬಿನ ಅಂಗಾಂಶ ಶುದ್ಧ ಮತ್ತು ಅಶುದ್ಧ ರಕ್ತನಾಳಗಳಿಗೆ ಬೆಂಬಲವಾದರೆ, ಕೀಲು ಮತ್ತು ಮಾಂಸಖಂಡಗಳಲ್ಲಿರುವ ಕೊಬ್ಬು ಇದ್ದಕ್ಕಿದ್ದಂತೆ ಆಗುವ ಆಘಾತಗಳಿಂದ ರಕ್ಷಣೆಯನ್ನು ಕೊಡುತ್ತದೆ. ಹೃದಯ ಮತ್ತು ಶ್ವಾಸಕೋಶಗಳಿಗೆ ಮೆತ್ತನೆಯ ಕವಚದಂತೆ ಇದ್ದರೆ, ಮೂತ್ರಪಿಂಡಗಳನ್ನು ಆಘಾತದಿಂದ ರಕ್ಷಿಸುತ್ತದೆ. ಆದರೆ, ಇದು ಅತಿಯಾಗಿ ಶೇಖರವಾಗುವುದು ಕೂಡ ಅಪಾಯಕಾರಿ. ಮುಖ್ಯವಾಗಿ ಹೃದಯ ಮತ್ತು ಶ್ವಾಸಕೋಶಗಳ ಸುತ್ತ ಶೇಖರವಾಗುವುದರಿಂದ ಅವುಗಳಿಗೆ ಭಾರವಾಗಿ, ಅವುಗಳ ಚಲನೆಗೆ ಅಡ್ಡಿಪಡಿಸಬಹುದು.

**ADJUVANT** (ಅಡ್ಜುವಂಟ್): ನೆರವಿಕ; ಅನುಪಾನ; ಔಷಧಿ ಅಥವಾ ರಕ್ತಸಾರ (ಸೀರಮ್)ಗಳಿಗೆ ಅವುಗಳ ಕ್ರಿಯೆಗೆ ಸಹಾಯ ಮಾಡಲಿ ಅಥವಾ ಕ್ರಿಯೆಯನ್ನು ಹೆಚ್ಚು ಮಾಡಲಿ ಎಂದು ಸೇರಿಸುವ ಪದಾರ್ಥ.

**ADRENAL GLAND** (ಅಡ್ರಿನಲ್ ಗ್ಲ್ಯಾಂಡ್): ಅಡ್ರಿನಲ್ ಗ್ರಂಥಿ; ಒಂದೊಂದು ಮೂತ್ರಪಿಂಡದ ಮೇಲೂ ಒಂದೊಂದು ಗ್ರಂಥಿ ಇರುತ್ತವೆ. ಒಟ್ಟು ಎರಡು ಗ್ರಂಥಿಗಳಿರುತ್ತವೆ. ದೇಹದ ಕೆಲ ಚಟುವಟಿಕೆಗಳನ್ನು ನಿಯಂತ್ರಿಸುವಂತಹ ಹಾರ್ಮೋನುಗಳನ್ನು ಇದು ಉತ್ಪಾದಿಸುತ್ತದೆ.

ಅಡ್ರಿನಲ್ ಗ್ರಂಥಿಯಿಂದ ಉತ್ಪತ್ತಿಯಾಗುವ ಹಾರ್ಮೋನುಗಳು ದೇಹದ ದ್ರಾವಣ ಸಮತೋಲನವನ್ನು ನಿಯಂತ್ರಿಸಲು, ಒತ್ತಡಕ್ಕೆ ಹೊಂದಾಣಿಕೆಯಾಗುವ ದೇಹದ ಸಾಮರ್ಥ್ಯವನ್ನು ಹೆಚ್ಚಿಸಲು ಮತ್ತು ದೇಹದ–

ಚಯಾಪಚಯ (ಮೆಟಬಾಲಿಸಂ) ಮತ್ತು ಲೈಂಗಿಕ ಕ್ರಿಯೆಗೆ ಬೇಕಾದಂತವು ಗಳಾಗಿವೆ.

**ADRENALECTOMY** (ಅಡ್ರಿನಲೆಕ್ಟಮಿ): ಅಡ್ರಿನಲ್ ಕೊಯ್ತೆಗೆತ; ಶಸ್ತ್ರಚಿಕಿತ್ಸೆಯ ಮೂಲಕ ಒಂದು ಇಲ್ಲವೆ ಎರಡೂ ಅಡ್ರಿನಲ್ ಗ್ರಂಥಿಗಳನ್ನು ದೇಹದಿಂದ ತೆಗೆದು ಹಾಕುವುದು.

**ADULT** (ಅಡಲ್ಟ್): 18 ವರ್ಷ ತುಂಬಿದ ದೈಹಿಕ ಮತ್ತು ಭಾವನಾತ್ಮಕವಾಗಿ ಸಂಪೂರ್ಣವಾಗಿ ಬೆಳವಣಿಗೆ ಹೊಂದಿದ ಅಥವಾ ಪ್ರಬುದ್ಧ ವ್ಯಕ್ತಿ.

**AEROBE** (ಏರೋಬ್): ಗಾಳಿಜೀವಿ; ಬದುಕುಳಿಯಲು ಆಮ್ಲಜನಕದ ಅವಶ್ಯಕತೆಯಿರುವ ಸೂಕ್ಷ್ಮಾಣುಜೀವಿ.

**AEROBIC** (ಏರೋಬಿಕ್): ಗಾಳಿಜೀವಿಕ; ಆಮ್ಲಜನಕ ಪ್ರಸ್ತುತೆಯಲ್ಲಿ ಮಾತ್ರ ನಡೆಯುವ ಉದಾ.: ಜೀವಿಸಲು ಆಮ್ಲಜನಕವನ್ನು ಅವಲಂಬಿಸಿರುವ ಜೀವಿ.

**AEROBICS, AEROBIC EXERCISE** (ಏರೋಬಿಕ್ಸ್, ಏರೋಬಿಕ್ ಎಕ್ಸರ್‌ಸೈಜ್): ಮಾಂಸಖಂಡಗಳು ಆಮ್ಲಜನಕವನ್ನು ಬಳಸಿಕೊಂಡು, ಸಮರ್ಪಕವಾಗಿ ಕಾರ್ಯ ನಿರ್ವಹಿಸುವಂತೆ ದೇಹವನ್ನು ಪ್ರಚೋದಿಸುವ ಸ್ಥಿತಿಗಾಗಿ ರಚಿತವಾದ ವ್ಯಾಯಾಮಗಳು.

ಬಿರುಸು ನಡಿಗೆಯಿಂದ ಹಿಡಿದು ಆಯಾಸದಾಯಕ ಕ್ರಿಯೆಗಳಾದ ಜಾಗಿಂಗ್, ಜಂಪಿಂಗ್‌ನಂತಹ ಚಟುವಟಿಕೆಗಳು ಇದರಲ್ಲಿರುತ್ತವೆ. ಎಲ್ಲ ವ್ಯಾಯಾಮಗಳಂತೆ ಇದನ್ನು ಕೂಡ ನಿಧಾನಗತಿಯಲ್ಲಿ ಪ್ರಾರಂಭಿಸಿ ಕ್ರಮೇಣ ಹೆಚ್ಚಿಸುತ್ತ ಸಾಗಬೇಕು. ತುಂಬಾ ದಿನಗಳಿಂದ ವ್ಯಾಯಾಮ ಮಾಡದ ಅಥವಾ ತಪ್ಪು ವ್ಯಾಯಾಮ ಕ್ರಮದಿಂದಾಗಿ ಸ್ಥಿತಿ ಮತ್ತಷ್ಟು ಹದಗೆಟ್ಟಿರುವಂತಹ ಸಂದರ್ಭಗಳಲ್ಲಿ ವೈದ್ಯರ ಸಲಹೆಯನ್ನು ಪಡೆಯುವುದು ಉತ್ತಮ.

**AFEBRILE** (ಎಫೆಬ್ರೈಲ್): ಜ್ವರವಿರದ ಸ್ಥಿತಿ.

**AFTER CARE** (ಆಫ್ಟರ್ ಕೇರ್): ಆರೈಕೆ: ಕಾಯಿಲೆ, ಶಸ್ತ್ರಚಿಕಿತ್ಸೆ ಮುಂತಾದವುಗಳಿಂದ ಗುಣಮುಖರಾಗುತ್ತಿರುವವರಿಗೆ ನೀಡುವ ಆರೈಕೆ ಅಥವಾ ಚಿಕಿತ್ಸೆ.

**AGORAPHOBIA** (ಅಗೋರಫೋಬಿಯ): ಬಯಲಂಜಿಕೆ; ಮುಕ್ತ ಅಥವಾ ಸಾರ್ವಜನಿಕ ಸ್ಥಳ, ಸಭೆಗಳ ಬಗೆಗಿನ ಅತಿಯಾದ ಭಯ. ತನಗೆ

ಸುರಕ್ಷಿತವಾಗಿದೆ ಎನಿಸುವ ಸ್ಥಳವನ್ನು (ಉದಾ.: ಮನೆಯನ್ನು ಬಿಟ್ಟು) ಬರಲು ಉಂಟಾಗುವ, ತೀವ್ರ ಹೃದಯಬಡಿತ, ಬೆವರುವಿಕೆ ಮತ್ತು ನಡುಕಗಳಂತಹ ಲಕ್ಷಣಗಳನ್ನು ಒಳಗೊಂಡ ಭಯ.

**AGUE** (ಆಗ್ಯು): ಜಡ್ಡು; ಚಳಿಜ್ವರ; ಜ್ವರ ಮತ್ತು ಚಳಿಯ ಲಕ್ಷಣಗಳು ಅನುಕ್ರಮವಾಗಿ ನಿಯಮಿತ ಅವಧಿಗಳ ಅಂತರದಲ್ಲಿ ಕಾಣಿಸಿಕೊಳ್ಳುವುದು.

**AIDS** (ಏಡ್ಸ್): ಅಕ್ವೈರ್ಡ್ ಇಮ್ಯುನೋ ಡಿಫಿಷಿಯನ್ಸ್ ಸಿಂಡ್ರೋಮ್, ದೇಹದ ರೋಗನಿರೋಧಕ ಶಕ್ತಿಯ ಮೇಲೆ ಆಕ್ರಮಣ ಮಾಡಿ, ಕಾಯಿಲೆಯ ವಿರುದ್ಧ ಹೋರಾಡುವ ದೇಹದ ಶಕ್ತಿಯನ್ನು ಕುಗ್ಗಿಸುವ ಕಾಯಿಲೆ.

ಹ್ಯೂಮನ್ ಇಮ್ಯುನೋಡಿಫಿಷಿಯನ್ಸಿ ವೈರಸ್ (ಹೆಚ್.ಐ.ವಿ.) ಎಂಬ ಸೂಕ್ಷ್ಮಾಣು ಜೀವಿಯಿಂದ ಬರುವ ಈ ಕಾಯಿಲೆಯು, ಅಸುರಕ್ಷಿತ ಲೈಂಗಿಕ ಸಂಪರ್ಕ, ಅಸುರಕ್ಷಿತ ಚುಚ್ಚುಮದ್ದುಗಳು ಮತ್ತು ಸೋಂಕಿತ ರಕ್ತದೊಂದಿಗಿನ ಸಂಪರ್ಕದಿಂದ ಹರಡುತ್ತದೆ. ಸೋಂಕಿತ ಗರ್ಭಿಣಿ ಸ್ತ್ರೀ ತನ್ನ ಶಿಶುವಿಗೆ ಈ ಕಾಯಿಲೆಯನ್ನು ಹರಡಬಲ್ಲಳು.

**ಪ್ರಾರಂಭಿಕ ಲಕ್ಷಣಗಳು:** ಜ್ವರ, ಗ್ರಂಥಿಗಳ ಊತ, ಆಯಾಸ, ದೇಹದ ತೂಕದಲ್ಲಿ ಇಳಿಮುಖ ಮತ್ತು ಅತಿಸಾರ ಬೇಧಿ. ಸೋಂಕಿತ ವ್ಯಕ್ತಿಯಲ್ಲಿ ರೋಗ ನಿರೋಧಕ ಶಕ್ತಿಯು ಕಡಿಮೆಯಾಗಿರುವುದರಿಂದ ಕ್ಯಾನ್ಸರ್, ಚರ್ಮ ಸೋಂಕು ಗಳು ಮತ್ತು ಫಂಗಲ್ (ಶಿಲೀಂದ್ರ) ಸೋಂಕುಗಳಂತಹ ಕಾಯಿಲೆ ಗಳು ಕಾಣಿಸಿಕೊಳ್ಳುವ ಅವಕಾಶ ಹೆಚ್ಚಿರುತ್ತದೆ. ನೇರಳೆ ಬಣ್ಣದ ಚರ್ಮದ ಗುಳ್ಳೆ ಯಂತಹ ಆಕಾರದ ಲಕ್ಷಣಗಳನ್ನು ಹೊಂದಿರುವ ಕಪೋಸಿಸ್ ಸಾರ್ಕೋಮ ಎಂಬ ಕ್ಯಾನ್ಸರ್ ಈ ರೋಗಿಗಳಲ್ಲಿ ತೀರ ಸಾಮಾನ್ಯವಾಗಿ ಕಂಡು ಬರುತ್ತದೆ. ಕೆಲ ರೋಗಿಗಳು ಯಾವುದೇ ಲಕ್ಷಣಗಳನ್ನು ಹೊಂದಿರದೆ, ತಮಗೆ ಏಡ್ಸ್ ರೋಗವಿದೆ ಎಂಬ ವಿಷಯವನ್ನು ಅರಿಯದಿದ್ದರೂ ಕೂಡ ಸೋಂಕನ್ನು ಬೇರೆಯವರಿಗೆ ಹರಡಬಹುದು. ರಕ್ತ ಪರೀಕ್ಷೆ ಮಾತ್ರ ಸೋಂಕನ್ನು ದೃಢಪಡಿಸಬಲ್ಲದು. ಕಾಂಡೋಮ್‌ಗಳ ಬಳಕೆ ಹಾಗೂ ಅಸುರಕ್ಷಿತ ಲೈಂಗಿಕ ಸಂಪರ್ಕ ಮತ್ತು ಸೋಂಕಿತ ಚುಚ್ಚುಮದ್ದು ಅಥವಾ ರಕ್ತದ ಸಂಪರ್ಕದಿಂದ ದೂರವಿರುವುದರಿಂದ ಹರಡುವಿಕೆಯನ್ನು ನಿಯಂತ್ರಿಸಬಹುದು.

**ALBINISM** (ಅಲ್ಬಿನಿಸಂ): ಚರ್ಮದಲ್ಲಿರುವ ಸ್ವಾಭಾವಿಕ ವರ್ಣದ್ರವ್ಯ (ಪಿಗ್ಮೆಂಟ್) ಕೊರತೆಯಿಂದಾಗಿ ಇಡೀ ಮೈ ಚರ್ಮ ಬೆಳ್ಳಗಿರುವುದು. ಕೂದಲುಗಳೂ ಬೆಳ್ಳಗಿರುತ್ತವೆ. ಇದೊಂದು ಆನುವಂಶಿಕವಾಗಿ ಬರುವ ಆಜನ್ಮ ನ್ಯೂನತೆ. ರೋಗವಲ್ಲ, ಇನ್ನೊಬ್ಬರಿಗೆ ಅಂಟುವ ರೋಗವಲ್ಲ. ಅಂತಹ ವ್ಯಕ್ತಿಗಳು ಸೂರ್ಯನ ಬಿಸಿಲನ್ನು ತಡೆಯಲಾರರು.

**ALBUMEN** (ಆಲ್ಬುಮೆನ್): ತತ್ತಿಲೋಳೆ; ಮೊಟ್ಟೆಯೊಳಗಿನ ಬಿಳಿ ಪದಾರ್ಥ.

**ALBUMIN** (ಆಲ್ಬುಮಿನ್): ರಕ್ತದಲ್ಲಿರುವ ಬಹುಮುಖ್ಯ ಪ್ರೋಟೀನು. ಸೇವಿಸಿದ ಆಹಾರದಿಂದ ಯಕೃತ್ತಿ (ಲಿವರ್)ನಲ್ಲಿ ಉತ್ಪತ್ತಿಯಾಗುತ್ತದೆ. ತರಕಾರಿ, ಮೊಟ್ಟೆಯ ಬಿಳಿ ಮುಂತಾದ ಪದಾರ್ಥಗಳಲ್ಲಿ ಇದು ದೊರಕುತ್ತದೆ.

**ALBUMINURIA** (ಅಲ್ಬುಮಿನ್ಯೂರಿಯ): ಮೂತ್ರಪಿಂಡಗಳ ತೊಂದರೆಯಿಂದಾಗಿ, ಮೂತ್ರದಲ್ಲಿ ಆಲ್ಬುಮಿನ್ ಯಥೇಚ್ಛವಾಗಿ ಕಾಣಿಸಿಕೊಳ್ಳುವ ಸ್ಥಿತಿ.

**ALCOHOL** (ಆಲ್ಕೋಹಾಲ್): ಮದ್ಯಸಾರ; ಒಂದು ಇಲ್ಲವೆ ಅನೇಕ ಹೈಡ್ರಾಕ್ಸಿಲ್ ಗುಂಪುಗಳನ್ನು ಹೊಂದಿರುವ ಯಾವುದೇ ರೀತಿಯ ಆರ್ಗ್ಯಾನಿಕ್ ಕಾಂಪೌಂಡ್ಸ್ (ಸಾವಯವ ಪದಾರ್ಥಗಳು) ಉದಾ.: ಈಥೈಲ್ ಆಲ್ಕೋಹಾಲ್ ಇದನ್ನು ಮದ್ಯ ಅಥವಾ ಔಷಧಗಳಲ್ಲಿ ಬಳಸಲಾಗುತ್ತದೆ. ಮಿಥೈಲ್ ಆಲ್ಕೋಹಾಲ್ ಇದನ್ನು ಇಂಧನ, ದ್ರಾವಕವಾಗಿ ಉಪಯೋಗಿಸ ಲಾಗುತ್ತದೆ. ಆಲ್ಕೋಹಾಲ್ ಪಾನೀಯಗಳನ್ನು ಬೀರ್, ಬ್ರಾಂದಿ, ವಿಸ್ಕಿ, ಜಿನ್, ರಮ್, ಹೆಂಡ ಸಾರಾಯಿಗಳನ್ನು ಕೆಲವು ಜನ ಸೇವಿಸುತ್ತಾರೆ.

**ALCOHOLISM** (ಆಲ್ಕೋಹಾಲಿಸಂ): ಮದ್ಯಸಾರ ವಿಷತೆ; ಅತಿಯಾದ ಆಲ್ಕೋಹಾಲ್ ಮದ್ಯ ಸೇವನೆಯಿಂದ ಉಂಟಾದ ಕಾಯಿಲೆ. ಇದನ್ನು ಆಲ್ಕೋಹಾಲ್ ಚಟವೆಂದೂ ಕರೆಯಬಹುದು.

ಸ್ವಲ್ಪ ಪ್ರಮಾಣದ ಮದ್ಯ ಸೇವನೆಯಿಂದ ರಿಲ್ಯಾಕ್ಸ್ (ವಿಶ್ರಾಂತಿ) ಆದಂತೆ, ನೋವು ನಿವಾರಣೆಯಾದಂತೆ, ಗ್ಯಾಸ್ಟ್ರಿಕ್ ಆಮ್ಲಗಳ ಉತ್ಪತ್ತಿ ಹೆಚ್ಚಿಗೆ ಆಗುವುದರಿಂದ ಹಸಿವಾದಂತೆ ಅನಿಸುತ್ತದೆ. ಅತಿಯಾದ ಸೇವನೆಯಿಂದ ಮಾತುಗಳು ಮತ್ತು ಮಾಂಸಖಂಡಗಳ ಹೊಂದಾಣಿಕೆಯಲ್ಲಿ ವ್ಯತ್ಯಯ ಉಂಟಾಗುವುದಲ್ಲದೆ, ಹೊಟ್ಟೆಯ (ಉದರ) ಕವಚ ಪದರಕ್ಕೆ ಕಿರಿಕಿರಿಯನ್ನು ಉಂಟುಮಾಡುತ್ತದೆ. ತುಂಬಾ ಅತಿಯಾದ ಪ್ರಮಾಣದ ಸೇವನೆಯಿಂದ ಕೇಂದ್ರ ನರಮಂಡಲ ವ್ಯವಸ್ಥೆಯೇ ಕ್ರಿಯಾಹೀನವಾಗಿ, ಪ್ರಾಣಾಂತಿಕವಾಗ ಬಹುದು. ಪ್ರತಿದಿವಸವು ಅದರ ಸೇವನೆಯ ದುಶ್ಚಟಕ್ಕೆ ದಾರಿ ಮಾಡಿಕೊಡಬಲ್ಲದಲ್ಲದೆ ದೇಹದ ಭಾಗಗಳಿಗೆ, ಮುಖ್ಯವಾಗಿ ಯಕೃತ್ (ಲಿವರ್)ಗೆ ಮಾರಕವಾಗುತ್ತದೆ. ಚಟನಿವಾರಿಸುವ ಚಿಕಿತ್ಸೆ ಇದೆ.

**ALGESIA** (ಅಲ್ಜೀಸಿಯಾ): ನೋವರಿವು; ನೋವಿಗೆ ತುಂಬಾ ಬೇಗ ಸ್ಪಂದಿಸುವುದು.

**ALIMENTARY** (ಅಲಿಮೆಂಟರಿ): ಪುಷ್ಟಿಕ; ಜೀರ್ಣಾಂಗಿಕ ಪೋಷಕಾಂಶಕ್ಕೆ ಸಂಬಂಧಿಸಿದ ಅಥವಾ ಆಹಾರವನ್ನು ಸೇವಿಸುವ, ಜೀರ್ಣಿಸುವ ಮತ್ತು ಹೊರ ಹಾಕುವ ದೇಹದ ವ್ಯವಸ್ಥೆಗೆ ಸಂಬಂಧಿಸಿದ್ದು.

**ALKALOSIS** (ಅಲ್ಕಲೋಸಿಸ್): ಕ್ಷಾರವಿಷತೆ: ದೇಹದ ಜಲಾಂಶಗಳಲ್ಲಿ ಬೈಕಾರ್ಬೋನೇಟ್ ಅಥವಾ ಪ್ರತ್ಯಾಮ್ಲಿಯ (ಅಲ್ಕಲಿ) ಪ್ರಮಾಣ ಹೆಚ್ಚಾಗುವುದು. ಅತಿಯಾದ ವಾಂತಿ ಅಥವಾ ಅತಿಯಾದ ಪ್ರಮಾಣದ ಆ್ಯಂಟಸಿಡ್ ಮಾತ್ರೆಗಳ ಸೇವನೆಯಿಂದಾಗಿ ದೇಹದ ಬಹುಪಾಲು ಹೈಡ್ರೋಕ್ಲೋರಿಕ್ ಆಮ್ಲ ನಷ್ಟವಾಗುವುದರಿಂದ ಮೆಟಾಬಾಲಿಕ್ ಅಲ್ಕಲೋಸಿಸ್ ಸ್ಥಿತಿ ಉಂಟಾಗುತ್ತದೆ. ಸಾಮಾನ್ಯವಾಗಿ ಮೂತ್ರಪಿಂಡಗಳು ಇಂತಹ ವ್ಯತ್ಯಯವನ್ನು ಸರಿ ಹೊಂದಿಸುತ್ತವೆ.

ರೆಸ್ಪಿರೇಟರಿ ಆಲ್ಕಲೋಸಿಸ್ (ಉಸಿರಾಟದ ಪ್ರತ್ಯಾಮ್ಲೀಯತೆ) ಸ್ಥಿತಿಯೂ ಹೆಚ್ಚಾಗಿ ಇಂಗಾಲದ ಡೈಆಕ್ಸೈಡನ್ನು ಹೊರ ಹಾಕುವುದರಿಂದ (ಉಸಿರಾಟದ ಮೂಲಕ) ಉಂಟಾಗುತ್ತದೆ. ಪ್ಲಾಸ್ಟಿಕ್ ಕವರ್‌ನ ಒಳಗೆ ಉಸಿರಾಡುವುದರ ಮೂಲಕ ಅದೇ ಇಂಗಾಲದ ಡೈಆಕ್ಸೈಡನ್ನು ಮತ್ತೆ ಸೇವಿಸಿ ಈ ಸ್ಥಿತಿಯನ್ನು ಕಡಿಮೆ ಮಾಡಿಕೊಳ್ಳಬಹುದು.

ಮಂಪರು ಮತ್ತು ಮಾಂಸಖಂಡಗಳ ಹಿಡಿಯುವಿಕೆ ಈ ಸ್ಥಿತಿಯ ಸಾಮಾನ್ಯ ಲಕ್ಷಣಗಳಾಗಿರುತ್ತವೆ.

**ALLERGEN** (ಅಲರ್ಜೆನ್): ಒಗ್ಗದಿಕೆ ಜನಕ; ದೇಹದ ರೋಗ ನಿರೋಧಕ ವ್ಯವಸ್ಥೆಯಲ್ಲಿ ಅಲರ್ಜಿ ಪ್ರತಿಕ್ರಿಯೆಯನ್ನು ಉಂಟು ಮಾಡುವ ಯಾವುದೇ ವಸ್ತು.

**ALLERGY** (ಅಲರ್ಜಿ): ಒಗ್ಗದಿರುವಿಕೆ; ಧೂಳು, ಕಣ, ರಾಸಾಯನಿಕ ವಸ್ತು, ಔಷಧ, ಸೌಂದರ್ಯವರ್ಧಕ, ಸಾಬೂನು ಮುಂತಾದ ಪದಾರ್ಥಗಳಿಗೆ ಅತಿಯಾದ ಸ್ಪಂದನೆ (ಪ್ರತಿಕ್ರಿಯೆ) ತೋರಿಸುವ ಗುಣ.

ಗಂದೆ, ತುರಿಕೆ, ಅಸ್ತಮ, ಎಗ್ಜಿಮಾ ಮತ್ತು ಸೈನಸೈಟಿಸ್‌ನಂತಹ ಅನೇಕ ಕಾಯಿಲೆಗಳಿಗೆ ಈ ಅಲರ್ಜಿಯು ಕಾರಣವಾಗಬಹುದು. ಸಾಮಾನ್ಯವಾಗಿ ಬಾಹ್ಯ ವಸ್ತುಗಳೊಂದಿಗೆ ಹೋರಾಡಲು ನಮ್ಮ ರೋಗ ನಿರೋಧಕ ವ್ಯವಸ್ಥೆಯು ಆ್ಯಂಟಿಬಾಡಿಗಳನ್ನು ಉತ್ಪಾದಿಸುತ್ತದೆ. ಅಲರ್ಜಿಯಲ್ಲೂ ಕೂಡ ಇದೇ ರೀತಿಯ ಕ್ರಿಯೆ ನಡೆಯುತ್ತದಾದರೂ, ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ನಡೆಯುವುದರಿಂದ ಇತರೆ ಅಡ್ಡಪರಿಣಾಮಗಳೂ ಉಂಟಾಗುತ್ತವೆ. ಉಸಿರಾಟನಾಳ ಮತ್ತು ಚರ್ಮದಲ್ಲಿ ಈ ಅಲರ್ಜಿ ಸ್ಥಿತಿಯನ್ನು ಸಾಮಾನ್ಯವಾಗಿ ಕಾಣಬಹುದು.

**ALLEVIATIVE** (ಅಲಿವಿಯೇಟಿವ್): ಕಾಯಿಲೆಯ ಅಸೌಖ್ಯತೆಯನ್ನು ಗುಣಪಡಿಸುತ್ತದೆ ಎಂಬುದನ್ನು ಸೂಚಿಸುವ ಪದ; ನಿವಾರಕ.

**ALOE** (ಅಲೋ): ಲೋಳೆಸರ; ಒಂದು ಜಾತಿಯ ಸಸ್ಯವಾಗಿದ್ದು, ಔಷಧೀಯ ಗುಣವನ್ನು ಹೊಂದಿರುತ್ತದೆ.

**ALOGIA** (ಅಲೋಗಿಯಾ): ಮಾತುಕಟ್ಟು; ಸ್ವಇಚ್ಛೆಯಿಂದ ಮಾತನಾಡಲು ಆಗದೆ ಇರುವುದು, ವಿಶೇಷವಾಗಿ ಮೆದುಳಿಗೆ ಆಘಾತವಾದಂತಹ ಸಂದರ್ಭದಲ್ಲಿ. (Abesence of Spontaneous Speech)

**ALVIOLITIS** (ಅಲ್ವಿಯೋಲೈಟಿಸ್): ಶ್ವಾಸಕೋಶದ ಗಾಳಿ ಚೀಲ (ಅಲ್ವಿಯೋಲೈ) ಗಳ ಸೋಂಕು.

**ALVEOLI** (ಅಲ್ವಿಯೋಲೈ): ದೇಹದಲ್ಲಿರುವ ಅತ್ಯಂತ ಚಿಕ್ಕ ಚಿಕ್ಕ ಪೊಳ್ಳು ಸ್ಥಳಗಳು (ಕ್ಯಾವಿಟೀಸ್) ಉದಾ: ಶ್ವಾಸಕೋಶದಲ್ಲಿರುವ ಗಾಳಿ ಕೋಶಗಳು.

**ALZHEIMER'S DISEASE** (ಅಲ್ಜೀಮೀರ್ಸ್ ಡಿಸೀಸ್): ಅಲ್ಜೀಮೀರ್ಸ್ ಕಾಯಿಲೆ; ವೃದ್ಧಾಪ್ಯಕ್ಕೂ ಮುಂಚಿನ ಮೆದುಳಿನ ಸವೆತ (ಆಟ್ರೋಫಿ)ದಿಂದಾಗಿ ಉಂಟಾದ ಕಾಯಿಲೆ. ಅಂಗವೈಕಲ್ಯ.

ಸಾಮಾನ್ಯವಾಗಿ ವಯಸ್ಸಾದವರಲ್ಲಿ ಅಂದರೆ, ವೃದ್ಧಾಪ್ಯದಲ್ಲಿ ಮೆದುಳಿನ ಕ್ಷೀಣಿಸುವಿಕೆ (ಕುಗ್ಗುವಿಕೆ)ಯನ್ನು ಕಾಣಬಹುದು. ಆದರೆ, ಈ ಕಾಯಿಲೆಯಲ್ಲಿ ವೃದ್ಧಾಪ್ಯಕ್ಕೂ ಮುನ್ನವೆ ಮೆದುಳಿನ ಕ್ಷೀಣಿಸುವಿಕೆ ಪ್ರಾರಂಭವಾಗಿ ಯೋಚನಾ ಶಕ್ತಿಯನ್ನು ಮೊಟಕುಗೊಳಿಸುತ್ತದೆ. ಮೊದಮೊದಲು ಮರೆಗುಳಿತನದಿಂದ ಪ್ರಾರಂಭವಾಗಿ, ಮನುಷ್ಯ ಅಸಂಬದ್ಧವಾಗಿ ವರ್ತಿಸುವ ಹಂತಕ್ಕೆ ಬಂದು ತಲುಪುತ್ತಾನೆ. ಕಾಯಿಲೆ ತೀವ್ರವಾದಂತೆ ವ್ಯಕ್ತಿ ತನ್ನ ಆಪ್ತಬಂಧು ಇಲ್ಲವೆ ಸ್ನೇಹಿತರ ಹೆಸರನ್ನು ಮರೆತು ಬಿಡಬಹುದು. ತೀರಾ ಪರಿಚಿತ ಸ್ಥಳಗಳ ನಡುವೆ ಪ್ರಯಾಣ ಮಾಡಲು ಮಾರ್ಗವೇ ಮರೆತು ಹೋಗಬಹುದು. ಒಂದೇ ಪ್ರಶ್ನೆಯನ್ನು ಪದೇ ಪದೇ ಕೇಳಬಹುದು. ತಾನು ಹೇಳಿದ್ದನ್ನೇ ಹೇಳುತ್ತಿರಬಹುದು. ತನ್ನ ಬೇಕು ಬೇಡಗಳನ್ನು ಗಮನಿಸಲಾರ.

**AMALGAM** (ಅಮಾಲ್ಗಮ್): ರಸಕಲಕ; ಹುಳುಕು ಹಲ್ಲಿನ ಬಂಧಕವಾಗಿ ಉಪಯೋಗಿಸುವ ಪಾದರಸದ ಮಿಶ್ರಲೋಹ.

**AMBIDEXTROUS** (ಆ್ಯಮ್ಬಿಡೆಕ್ಸ್‌ಟ್ರಸ್) : ಇಕ್ಕೈಚಳಕ; ಎರಡೂ ಕೈಗಳನ್ನು ಸಮನಾಗಿ ಮತ್ತು ಸಮರ್ಥವಾಗಿ ಉಪಯೋಗಿಸಬಲ್ಲ ಸಾಮರ್ಥ್ಯವಿರುವವರು.

**AMBLYOPIA** (ಆಂಬ್ಲಿಯೋಪಿಯಾ): ಯಾವುದೇ ರೀತಿಯ ಕಣ್ಣಿನ ಬಾಹ್ಯ ತೊಂದರೆ ಇರದಿದ್ದರೂ ಕೂಡ ಇರುವ ದೃಷ್ಟಿದೋಷ. ಈ ಸ್ಥಿತಿ ತಾತ್ಕಾಲಿಕ ಅಥವಾ ಶಾಶ್ವತವಾಗಿರಬಹುದು ಮತ್ತು ಸ್ವಲ್ಪ ಪ್ರಮಾಣದಲ್ಲಾಗಿರಬಹುದು ಇಲ್ಲವೆ ಸಂಪೂರ್ಣ ಕುರುಡುತನಕ್ಕೆ ಕಾರಣವಾಗಬಹುದು.

ಆಲ್ಕೋಹಾಲ್, ತಂಬಾಕು, ಸೀಸ, ಆರ್ಸೆನಿಕ್, ಪೆಟ್ರೋಲಿಯಂ ಉತ್ಪನ್ನಗಳಲ್ಲಿನ ವಿಷಯುಕ್ತ ಪದಾರ್ಥಗಳಿಂದ ಈ ಸ್ಥಿತಿ ಉಂಟಾಗಬಹುದು. ದೃಷ್ಟಿಯನ್ನು ನಿಯಂತ್ರಿಸುವ ಮೆದುಳಿನ ಭಾಗಕ್ಕೆ ಹಾನಿಯನ್ನು ಉಂಟು-ಮಾಡುವಂತಹ ಪಾರ್ಶ್ವವಾಯು ಕೂಡ ದೃಷ್ಟಿಹೀನತೆಗೆ ಕಾರಣವಾಗ-ಬಹುದು.

**AMENORRHEA** (ಅಮೆನೋರಿಯಾ): ಹೆಂಗಸರಲ್ಲಿ ಋತುಸ್ರಾವದ ಕೊರತೆ. ಒಮ್ಮೆಯೂ ಕೂಡ ಋತುಸ್ರಾವವೇ ಆಗದ ಸ್ಥಿತಿಯನ್ನು ಪ್ರೈಮರಿ ಅಮೆನೋರಿಯ (ಪ್ರಾಥಮಿಕ ಮುಟ್ಟುತಡೆ) ಎಂತಲೂ, ಹಿಂದೆ ಋತುಸ್ರಾವವಾಗುತ್ತಿದ್ದು ಈಗ ನಿಂತಿರುವ ಸ್ಥಿತಿಯನ್ನು ಸೆಕೆಂಡರಿ ಅಮೆನೋರಿಯಾ (ದ್ವಿತೀಯ ಮುಟ್ಟುತಡೆ) ಎನ್ನುತ್ತಾರೆ.

ಸೆಕೆಂಡರಿ ಅಮೆನೋರಿಯಾ ಸ್ಥಿತಿಯು ಸಾಮಾನ್ಯವಾಗಿ ಗರ್ಭಾವಸ್ಥೆ ಮತ್ತು ಎದೆ ಹಾಲುಣಿಸುವಿಕೆ ಸಂದರ್ಭದಲ್ಲಿ ಕಾಣಿಸುತ್ತದೆ. ಅಂಡಾಶಯ ಕಾರ್ಯ ವೈಫಲ್ಯತೆ, ಪಿಟ್ಯೂಟರಿ ಗ್ರಂಥಿಯ ಕಾಯಿಲೆಗಳು, ಭಾವನಾತ್ಮಕ ಸಮಸ್ಯೆ, ಹಿಂದಿನ ಋತುಸ್ರಾವದಲ್ಲಿ ಸಂಭವಿಸಿದ ಅತಿಯಾದ ರಕ್ತಸ್ರಾವದಿಂದ ಉಂಟಾದ ರಕ್ತಹೀನತೆಯಂತಹ ಕಾರಣದಿಂದಲೂ ಉಂಟಾಗಬಹುದು.

**AMENTIA** (ಅಮೆನ್ಷಿಯ): ಹುಟ್ಟು ಹೆಡ್ಡು; ತಬ್ಬಿಬ್ಬು ಮನೋಬೇನೆ; ಮಾನಸಿಕ ಕ್ಷೀಣತೆ (ಬುದ್ಧಿವೈಕಲ್ಯ), ಅನುವಂಶಿಕ ಮಾನಸಿಕ ಕೊರತೆ.

**AMINO ACID** (ಅಮೈನೋ ಆ್ಯಸಿಡ್): ಅಮೈನೊ ಆಮ್ಲ; ಪ್ರೊಟೀನಿನ ರಚನೆಗೆ ಕಾರಣವಾದ ಯಾವುದೇ ರೀತಿಯ ಮೂಲಭೂತ ಆರ್ಗ್ಯಾನಿಕ್ ಕಾಂಪೌಂಡ್ಸ್.

**AMINO ACIDEMIA** (ಅಮೈನೋ ಅಸಿಡೀಮಿಯ): ರಕ್ತದಲ್ಲಿ ಅಮೈನೋ ಆ್ಯಸಿಡ್‌ನ ಪ್ರಮಾಣ ಹೆಚ್ಚಾಗುವಿಕೆಯ ಗುಣ ಲಕ್ಷಣದ ಸ್ಥಿತಿ.

**AMINOACIDURIA** (ಅಮೈನೋ ಆ್ಯಸಿಡ್ಯೂರಿಯ): ಮೂತ್ರದಲ್ಲಿ ಅಮೈನೋ ಆ್ಯಸಿಡ್‌ನ ಪ್ರಮಾಣ ಹೆಚ್ಚಾಗುವಿಕೆಯ ಗುಣಲಕ್ಷಣದ ಸ್ಥಿತಿ.

**AMNESIA** (ಅಮ್ನೀಸಿಯ): ನೆನಪಿಲ್ಲದಿರುವುದು, ಮರೆವು; ಮಾನಸಿಕ ಪ್ರಕ್ರಿಯೆ ಅಥವಾ ಮೆದುಳಿನ ತೊಂದರೆಯ ಕಾರಣದಿಂದ ಉಂಟಾಗುವ ಶಾಶ್ವತ ಅಥವಾ ತಾತ್ಕಾಲಿಕ ನೆನಪಿನ ಶಕ್ತಿಹೀನತೆ.

ಪ್ರಜ್ಞಾಹೀನ ಸ್ಥಿತಿಗೆ ಕಾರಣವಾಗುವಂತಹ ತಲೆಯ ಏಟುಗಳು ಸ್ವಲ್ಪ ಪ್ರಮಾಣದ ನೆನಪಿನ ಶಕ್ತಿಹೀನತೆ ಉಂಟು ಮಾಡುತ್ತವೆ. ಆಘಾತದಿಂದ ಚೇತರಿಸಿಕೊಂಡಂತೆ ನೆನಪಿನ ಶಕ್ತಿ ಮರುಕಳಿಸುವುದಾದರು, ಕೆಲ ನೆನಪು ಮಾತ್ರ ಬಾರದೆ ಹೋಗಬಹುದು. ಇದೇ ತರಹದ ನೆನಪಿನ ಶಕ್ತಿಹೀನತೆ, ತಲೆಯನ್ನು ಒಳಗೊಳ್ಳದ ದೇಹದ ಬೇರೆ ಭಾಗಗಳಿಗೆ. ತೀವ್ರತೆರನಾದ ಆಘಾತಗಳಿಂದಲೂ ಉಂಟಾಗಬಹುದು.

ಕೆಲವೊಮ್ಮೆ ಮಾನಸಿಕ ಕ್ಲೇಶ–ತೊಂದರೆಯಿಂದಾಗಿ, ಯಾವುದೇ ರೀತಿಯ ದೈಹಿಕ ಅಪಘಾತಗಳ ಹೊರತಾಗಿಯು, ಮನುಷ್ಯ ತನ್ನ ನೆನಪಿನ ಶಕ್ತಿಯನ್ನು ಕಳೆದುಕೊಂಡು ಹೆಸರು ಮತ್ತು ವಿಳಾಸವನ್ನು ಮರೆತು ತಿರುಗಾಡಬಹುದು. ಈ ಸ್ಥಿತಿಯನ್ನು ಭಾವನಾತ್ಮಕ ಒತ್ತಡದಿಂದ ಉಂಟಾದ ಹಿಸ್ಟೀರಿಕಲ್ ಅಮ್ನೀಸಿಯ ಎನ್ನುತ್ತಾರೆ.

ಅಲ್ಪಾವಧಿ ಮರೆಗುಳಿತನವು ಕೆಲವೊಮ್ಮೆ ಅತಿಯಾದ ಮದ್ಯಪಾನ ಮತ್ತು ಅಲ್ಜಿಮೀರ್ಸ್‌ನಂತಹ ಮೆದುಳು ಸಂಬಂಧಿ ಕಾಯಿಲೆಗಳ ಕೊಡುಗೆಯಾಗಿರ ಬಹುದು.

**AMNIOCENTESIS** (ಆಮ್ನಿಯೋ ಸೆಂಟೆಸಿಸ್): ಪರೀಕ್ಷೆಗಾಗಿ ಗರ್ಭಿಣಿಯ ಗರ್ಭದಿಂದ ಆಮ್ನಿಯೋಟಿಕ್ ಜೀವ ದ್ರವವನ್ನು ಎಳೆದು ಶೇಖರಿಸುವುದು.

ಆಮ್ನಿಯೋಟಿಕ್ ದ್ರವ ಎಂದರೆ ತಾಯಿಯ ಗರ್ಭದ ಒಳಗೆ ಭ್ರೂಣ ಸುರಕ್ಷಿತವಾಗಿರಲು ಸಹಾಯ ಮಾಡುವ ಜೀವಜಲ ಮಾಧ್ಯಮ. ಇದರಲ್ಲಿ ಭ್ರೂಣದ ಕೆಲ ಕೋಶಗಳು ಇರುವುದರಿಂದ, ಬೆಳವಣಿಗೆ ವೈಪರೀತ್ಯವನ್ನು ಅಧ್ಯಯನ ಮಾಡಬಹುದು. ಆಜನ್ಮ ನ್ಯೂನತೆಗಳನ್ನು ಪತ್ತೆಮಾಡಬಹುದು.

**AMPUTATION** (ಆಂಪ್ಯುಟೇಷನ್): ಕೊಯ್ತೆಗೆತ; ತುಂಡರಿಸಿಕೆ ದೇಹದ ಯಾವುದೇ ಭಾಗ, ಮುಖ್ಯವಾಗಿ ಕೈಕಾಲು ಅಥವಾ ಕೈಕಾಲಿನ ಯಾವುದೇ ಭಾಗವನ್ನು ಕತ್ತರಿಸಿ ತೆಗೆದು ಹಾಕುವುದು.

ಈ ರೀತಿಯ ಬೇರ್ಪಡಿಸುವಿಕೆ (ಆಂಪ್ಯುಟೇಷನ್) ವಾಹನ ಇಲ್ಲವೆ ಕೈಗಾರಿಕಾ ಅಪಘಾತ ಪ್ರಕರಣಗಳಲ್ಲಿ ಆಗಬಹುದು ಅಥವಾ ರೋಗ ತಡೆಗಟ್ಟಲು ಶಸ್ತ್ರಚಿಕಿತ್ಸೆಯ ಮೂಲಕವಾದರೂ ಆಗಬಹುದು.

**ANABOLISM** (ಅನಾಬಾಲಿಸಂ): ಜೀವಸ್ತು ಚಯ; ಆಹಾರವನ್ನು ಜೀವಕಣವನ್ನಾಗಿ ಮಾರ್ಪಡಿಸುವ ದೇಹದ ಕ್ರಿಯೆ. ಸಂಪೂರ್ಣ ಚಯಾಪಚಯ (ಮೆಟಬಾಲಿಸಂ) ಕ್ರಿಯೆಯ ಒಂದು ಭಾಗ.

**ANAEROBIC** (ಅನೆರೋಬಿಕ್): ನಿರ್ಗಾಳಿ ಜೀವಿಕ; ಆಮ್ಲಜನಕವಿಲ್ಲದೆ ಬದುಕಬಲ್ಲ ಅಥವಾ ನಡೆಯಬಲ್ಲವು.

**ANALGESIA** (ಅನಾಲ್ಜೀಸಿಯ): ನೋವಳಿಕ, ನೋವು ನಿವಾರಕ; ಪ್ರಜ್ಞಾಹೀನರಾಗದೆ ನೋವಿನಿಂದ ಮುಕ್ತಿ ಹೊಂದುವುದು.

ಅನಾಲ್ಜಸಿಕ್ಸ್ (ನೋವು ನಿವಾರಕ ಔಷಧ) ಮೂರು ವಿಧದಲ್ಲಿವೆ.

* ನೋವಿಗೆ ಕಾರಣವಾದ ಅಂಶದ ಮೇಲೆ ನೇರವಾಗಿ ಕ್ರಿಯೆ ನಡೆಸುವವು.
* ಮೆದುಳಿನ ಮೇಲೆ ಪ್ರಭಾವ ಬೀರಿ ಕಾರ್ಯ ನಿರ್ವಹಿಸುವುವು.
* ಕೆಲ ವಿಶೇಷ ರೀತಿಯವು, ನಿಖರ ಕಾಯಿಲೆಗೆ ಮಾತ್ರ ಬಳಸುವವು.

ಸಾಮಾನ್ಯ ನೋವು ನಿವಾರಕ ಔಷಧಗಳು ಮೊದಲನೆ ಗುಂಪಿಗೆ ಸೇರುವವಾಗಿದ್ದು ಕೆಲವೊಂದು ನೋವಿನ ಜೊತೆಗೆ ಜ್ವರವನ್ನು ಕಡಿಮೆ ಮಾಡಬಹುದಾಗಿದೆ.

ಎರಡನೆ ಗುಂಪಿಗೆ ಸೇರುವ ಔಷಧಗಳು ತುಂಬ ಪ್ರಬಲವಾಗಿದ್ದು, ಜನರು ಅವುಗಳ ಬಳಕೆಯನ್ನು ದುಶ್ಚಟಗಳನ್ನಾಗಿ ಮಾಡಿಕೊಂಡು ಬಿಡುವ ಅಪಾಯವಿರುವುದರಿಂದ ವೈದ್ಯರ ನಿರ್ದೇಶನದಂತೆ ಮಾತ್ರ ಸೇವಿಸಬೇಕಾಗುತ್ತದೆ.
ಉದಾ.: ಮಾರ್ಫಿನ್, ಪೆತಿಡಿನ್ ಮತ್ತು ಕೋಡೀನ್.

ಮೂರನೆಯ ಗುಂಪಿಗೆ ಸೇರುವ ಔಷಧಗಳು ಮೈಗ್ರೇನ್ ಅಥವಾ ಕೆಲ ರೀತಿಯ ನ್ಯೂರಾಲ್ಜಿಯಾಗಳಿಗೆ ಮಾತ್ರ ಸೂಕ್ತವಾಗಿರುತ್ತವೆ.

**ANAPHYLACTIC SHOCK** (ಅನಾಫಿಲ್ಯಾಕ್ಟಿಕ್ ಶಾಕ್): ಸಂಪೂರ್ಣ ಶಕ್ತಿ ಹೀನತೆ ಅಥವಾ ಕುಸಿದು ಬೀಳುವಿಕೆಗೆ ಕಾರಣವಾಗುವಂತಹ ಕೆಲ ಚುಚ್ಚುಮದ್ದು, ಜೀವನಿರೋಧಕ ಔಷಧ, ಕೀಟಗಳ ವಿಷಗಳಿಗೆ ತೋರಿಸುವಂತಹ ತೀವ್ರ ತೆರನಾದ ದೇಹದ ಪ್ರತಿಕ್ರಿಯೆ.

ಸಾಮಾನ್ಯವಾಗಿ ನಮ್ಮ ದೇಹವು ಬಾಹ್ಯ ವಸ್ತುವಿಗೆ (ಆ್ಯಂಟಿಜೆನ್) ಪ್ರತಿರೋಧ ಜೀವಕಣ (ಆ್ಯಂಟಿಬಾಡಿ)ವನ್ನು ಉತ್ಪಾದಿಸಿ, ಆ ಬಾಹ್ಯ ವಸ್ತುವನ್ನು ತೊಂದರೆಹೀನವಾಗುವಂತೆ ಮಾಡುತ್ತದೆ. ಕೆಲ ವ್ಯಕ್ತಿಗಳಲ್ಲಿ ಕೆಲವೊಂದು ಬಾಹ್ಯ ವಸ್ತುಗಳಿಗೆ ಶುರುವಾಗುವ ಈ ಪ್ರಕ್ರಿಯೆಯೇ ಅಪಾಯಕಾರಿಯಾಗಿರುತ್ತದೆ.

ಉಸಿರಾಟದ ತೊಂದರೆ ಮತ್ತು ಚೇತರಿಸಿಕೊಳ್ಳಲು ಆಗದೆ ಇರುವಂತಹ ಲಕ್ಷಣಗಳನ್ನು ಹೊಂದಿರುವ ಈ ಅನಾಫಿಲ್ಯಾಕ್ಟಿಕ್ ಶಾಕ್ ಸ್ಥಿತಿಯು ಸೂಕ್ತ

ಸಮಯದಲ್ಲಿ ವೈದ್ಯಕೀಯ ಸೌಲಭ್ಯಗಳು ದೊರೆಯದೇ ಇದ್ದರೆ ಮಾರಣಾಂತಿಕವಾಗಬಹುದು.

**ANATOMY** (ಅನಾಟಮಿ): ಅಂಗರಚನೆಶಾಸ್ತ್ರ; ಜೀವಿಗಳ ದೇಹ ರಚನೆಯ ಅಧ್ಯಯನ ಶಾಸ್ತ್ರ.

**ANCILLARY** (ಆ್ಯನ್ಸಿಲರಿ): ಹೆಚ್ಚುವರಿಯಾದದ್ದು; ಯಾವುದೇ ವಸ್ತು ಅಥವಾ ಕ್ರಿಯೆಗೆ ಪೂರಕ ಅಥವಾ ಹೆಚ್ಚುವರಿಯಾದಂತದ್ದು.

**ANDROGEN** (ಆ್ಯಂಡ್ರೋಜನ್): ಗಂಡುಜನಕ; ದ್ವಿತೀಯ ಹಂತದ ಪುರುಷ ಲೈಂಗಿಕ ಗುಣಲಕ್ಷಣಗಳನ್ನು ಪ್ರಚೋದಿಸುವ ಹಾರ್ಮೋನು.

**ANEMIA** (ಅನೀಮಿಯ): ರಕ್ತಹೀನತೆ; ರಕ್ತಕೊರೆ; ಕೆಂಪು ರಕ್ತಕಣಗಳ ಕೊರತೆ ಅಥವಾ ಆಮ್ಲಜನಕದ ಸಾಗಾಣಿಕೆಗೆ ಅವಶ್ಯವಿರುವ ರಕ್ತದ ಪಿಗ್ಮೆಂಟ್-ಹಿಮೋಗ್ಲೋಬಿನ್‌ನ ಕೊರತೆ.

ರಕ್ತಹೀನತೆಯ ಲಕ್ಷಣಗಳು ವ್ಯತಿರಿಕ್ತವಾದವಲ್ಲದರಿಂದ, ಸ್ಥಿತಿ ತೀವ್ರ ತೆರವಾಗುವವರೆಗೆ ಗುರುತಿಸಲು ಕಷ್ಟಸಾಧ್ಯವಾಗಿರುತ್ತದೆ. ತೊಂದರೆಗೆ ಒಳಗಾದ ವ್ಯಕ್ತಿಯು ಆಯಾಸ, ತೀವ್ರ ಉಸಿರಾಟ, ಹೆಚ್ಚಿದ ಹೃದಯ ಬಡಿತ, ತಲೆನೋವು, ಹಸಿವಾಗದಿರುವಿಕೆ, ಮಂಪರು ಮತ್ತು ನಿಶ್ಶಕ್ತಿಯಂತಹ ಲಕ್ಷಣಗಳನ್ನು ಹೊಂದಿರುತ್ತಾನೆ. ಪರಿಸ್ಥಿತಿ ತೀವ್ರತೆರನಾಗಿದ್ದರೆ, ಪಾದದ ಕೀಲುಗಳು ಊದಿಕೊಂಡಿದ್ದು, ನಾಡಿಬಡಿತ ಕ್ಷೀಣವಾಗಿರುತ್ತದೆ ಮತ್ತು ಚರ್ಮ ಬಿಳುಚಿಕೊಂಡಿರುತ್ತದೆ. ಅನೀಮಿಯ ಮಕ್ಕಳಲ್ಲಿ, ವೃದ್ಧರಲ್ಲಿ, ಸ್ತ್ರೀಯರಲ್ಲಿ ಹೆಚ್ಚು.

ಈ ಸ್ಥಿತಿ ಉಂಟಾಗಲು ಕಾರಣಗಳು.

* ಕೆಂಪು ರಕ್ತಕಣಗಳ ಉತ್ಪಾದನೆಗೆ ಬೇಕಾಗುವ ಸಾಮಗ್ರಿಗಳ ಕೊರತೆ.
* ಮೂಳೆಮಜ್ಜೆ (ಬೋನ್ ಮ್ಯಾರೋ)ಯ ರಕ್ತಕಣ ಉತ್ಪಾದನ ಕಾರ್ಯವೈಫಲ್ಯತೆ.
* ಹೆಚ್ಚಾದ ರಕ್ತಕಣಗಳ ನಾಶ. ಪದೇ ಪದೇ ರಕ್ತಸ್ರಾವ.
* ಅನುವಂಶೀಯ ಅಪಸಾಮಾನ್ಯತೆ.

ಕಬ್ಬಿಣಾಂಶ, ವಿಟಮಿನ್ ಬಿ12 ಅಥವಾ ಫೋಲಿಕ್ ಆ್ಯಸಿಡ್‌ಗಳ ಕೊರತೆಯಿಂದಾಗಿ ಹಿಮೋಗ್ಲೋಬಿನ್‌ನ ಉತ್ಪಾದನೆ ಕುಂಠಿತಗೊಳ್ಳಬಹುದು. ಅತಿಯಾದ ರಕ್ತಸ್ರಾವ, ಕಬ್ಬಿಣಾಂಶ ಪೂರಿತ ಆಹಾರದ ಕೊರತೆ ಮತ್ತು ದೇಹದ ತೊಂದರೆಯಿಂದಾಗಿ ಆಹಾರದ ಕಬ್ಬಿಣಾಂಶದಲ್ಲಿ ಹೀರುವಿಕೆಯ ಕಾರ್ಯವೈಫಲ್ಯತೆಯಿಂದಾಗಿ ಕಬ್ಬಿಣಾಂಶ ಕಡಿಮೆಯಾಗಬಹುದು.

ಕೆಲ ಕಾಯಿಲೆ, ಅತಿಯಾದ ಕ್ಷಕಿರಣಗಳು ಮತ್ತು ಕೆಲವೊಂದು ಔಷಧಿಗಳಿಂದಾಗಿ ಮೂಳೆ ಮಜ್ಜೆ (ಬೋನ್ ಮ್ಯಾರೋ) ತನ್ನ ರಕ್ತಕಣ ಉತ್ಪಾದನೆಯಿಂದ ವಿಮುಖವಾಗಿರಬಹುದು.

ಕೆಲವೊಂದು ಅನುವಂಶಿಕ ಕಾಯಿಲೆ ಉದಾ.:- ಸಿಕಲ್‌ಸೆಲ್ ಅನೀಮಿಯದಲ್ಲಿ ಕೆಂಪು ರಕ್ತಕಣಗಳು ಅವಶ್ಯವಿರುವಷ್ಟು ಆಮ್ಲಜನಕವನ್ನು ಸಾಗಿಸುವ ಸಾಮರ್ಥ್ಯವನ್ನು ಕಳೆದುಕೊಂಡಿರುತ್ತವೆ.

**ANESTHESIA** (ಅನೆಸ್ತೀಷಿಯಾ): ಅರಿವಳಿಕೆ; ಸ್ಪಂದನೆಯ ಗುಣ ಮುಖ್ಯವಾಗಿ ಸ್ಪರ್ಶ ಮತ್ತು ನೋವು ನರಮಂಡಲದಲ್ಲಿ ಕಡಿಮೆಯಾಗಿರುವುದು ಅಥವಾ ಸಂಪೂರ್ಣ ಇಲ್ಲವಾಗುವುದು.

ಈ ರೀತಿಯ ಅರಿವಳಿಕೆಯ ಸ್ಥಿತಿಯು ಕಾಯಿಲೆಯಿಂದಾಗಿ, ಆಘಾತ-ದಿಂದಾಗಿ, ನರಮಂಡಲಕ್ಕೆ ಆದ ತೊಂದರೆಯಿಂದಾಗಿ ಅಥವಾ ಔಷಧಿ-ಗಳಿಂದಲೂ ಉಂಟಾಗಬಹುದು.

ಸಾಮಾನ್ಯವಾಗಿ ಅರಿವಳಿಕೆಯನ್ನು ಶಸ್ತ್ರಚಿಕಿತ್ಸೆಗಾಗಿ ಸ್ಪಂದನೆಯ ಗುಣವನ್ನು ಕಡಿಮೆ ಮಾಡಲು ಔಷಧದ ಮೂಲಕ ಸಾಧಿಸುವುದು ಎಂದೇ ಅರ್ಥೈಸಲಾಗುತ್ತದೆ.

**ANESTHESIOLOGY** (ಅನೆಸ್ತೀಷಿಯಾಲಜಿ): ಅರಿವಳಿಕೆ ಶಾಸ್ತ್ರ, ಸ್ಪಂದನೆಯ ಗುಣ ನಿಯಂತ್ರಿಸಲು ಅಥವಾ ಕಡಿಮೆ ಮಾಡಲು ಔಷಧಗಳನ್ನು ಬಳಕೆ ಮಾಡುವ ಅಧ್ಯಯನ ಶಾಸ್ತ್ರ.

ಅರಿವಳಿಕೆ ತಜ್ಞರು ಅನಿಸ್ತೀಶಿಯಾಲಜಿಸ್ಟ್ ದೇಹದ ಸ್ಪಂದನೆಯ ಗುಣವನ್ನು ನಿಯಂತ್ರಿಸುವ ಔಷಧಗಳ ಬಗ್ಗೆ ವಿಶೇಷ ಜ್ಞಾನವನ್ನು ಹೊಂದಿರುತ್ತಾರೆ.

**ANEURYSM** (ಅನ್ಯುರಿಸಂ): ಯಾವುದೇ ನ್ಯೂನತೆ ಅಥವಾ ತೊಂದರೆಯಿಂದಾಗಿ ನಿಶ್ಶಕ್ತಗೊಂಡ ರಕ್ತನಾಳದಲ್ಲಿ ಉಂಟಾದ ಊತ. ಉಬ್ಬು.

ಅನ್ಯುರಿಸಂನ ಬಹು ಮುಖ್ಯ ಸಮಸ್ಯೆಯೆಂದರೆ ರಕ್ತನಾಳವನ್ನು ಒಡೆದು ಮಾರಣಾಂತಿಕವಾದ ಆಂತರಿಕ ರಕ್ತಸ್ರಾವಕ್ಕೆ ಕಾರಣವಾಗಬಹುದು.

ಈ ಸಮಸ್ಯೆಯನ್ನು ಅಭಿಧಮನಿ (ಅಯೋರ್ಟ), ಮೊಣಕಾಲ ಹಿಂಭಾಗದ ರಕ್ತನಾಳ ಮತ್ತು ಮೆದುಳು ಬುಡದ ರಕ್ತನಾಳಗಳಲ್ಲಿ ಸಾಮಾನ್ಯವಾಗಿ ಕಾಣಬಹುದು.

ಈ ಸಮಸ್ಯೆಯು ಹೊಟ್ಟೆಯಲ್ಲಿ ನೋವು ಪೂರಿತ, ಬಡಿದುಕೊಳ್ಳುತ್ತಿರುವ ಗಡ್ಡೆಯಂತಹ ಆಕಾರವನ್ನು ಸೃಷ್ಟಿಸಿದರೆ, ಕತ್ತಿನ ಭಾಗದಲ್ಲಿ ದೃಷ್ಟಿ ನರಕ್ಕೆ ಅಡಚಣೆಯನ್ನು ಉಂಟುಮಾಡುವುದರಿಂದ ಒಂದು ವಸ್ತು ಎರಡೆರಡಾಗಿ ಕಾಣುವ ದೋಷವನ್ನು ಉಂಟುಮಾಡಬಹುದು.

**ANGINA PECTORIS** (ಆ್ಯಂಜಿನಾ ಪೆಕ್ಟೋರಿಸ್): ಎದೆ ಬಿಗಿತ; ಉರಿಯನ್ನು ಹೊಂದಿರುವ, ಎದೆಯ ಮಧ್ಯಭಾಗದಲ್ಲಿ ಕಾಣಿಸಿಕೊಳ್ಳುವ ಅಲ್ಪಕಾಲದ ಮಧ್ಯಮ/ತೀವ್ರವಾದ ಒತ್ತಡ ಅಥವಾ ನೋವು. ಈ ನೋವು ಎಡಗೈಗೂ ವಿಸ್ತರಿಸುವುದು. ಒತ್ತಡದ ಸಮಯದಲ್ಲಿ ಹೃದಯ ಮಾಂಸಖಂಡಗಳಿಗೆ ಅವಶ್ಯವಿರುವಷ್ಟು ಆಮ್ಲಜನಕ ದೊರಕುತ್ತಿಲ್ಲ ಎಂಬುದನ್ನು ಇದು ಸೂಚಿಸುತ್ತದೆ.

ಆ್ಯಂಜಿನಾ ಪೆಕ್ಟೋರಿಸ್‌ನಲ್ಲಿ ಉಂಟಾಗುವ ನೋವು, ಹೃದಯಾಘಾತದಲ್ಲಿ ಉಂಟಾಗುವ ನೋವಿನಷ್ಟು ತೀವ್ರವಾಗಿರುವುದಿಲ್ಲ ಮತ್ತು ಹೃದಯ ಮಾಂಸಖಂಡಗಳಿಗೆ ಯಾವ ರೀತಿ ನಷ್ಟವೂ ಆಗಿರುವುದಿಲ್ಲ. ನೋವು ಬಂದ ತಕ್ಷಣ ವ್ಯಕ್ತಿಯು ತನ್ನೆಲ್ಲ ಚಟುವಟಿಕೆಗಳನ್ನು ನಿಲ್ಲಿಸಿ, ವಿಶ್ರಾಂತಿ ಪಡೆದರೆ ನೋವು ತಕ್ಷಣವೆ ಉಪಶಮನವಾಗಿಬಿಡುತ್ತದೆ. ಆ್ಯಂಜಿನಾ ಆಘಾತವು, ಹೃದಯಾಘಾತ ಅಲ್ಲದಿದ್ದರೂ ಕೂಡ ಆ ವ್ಯಕ್ತಿಗೆ ಹೃದಯಾಘಾತ ಸಂಭವಿಸುವ ಅವಕಾಶ ಹೆಚ್ಚಿರುತ್ತದೆ ಎಂಬುದನ್ನು ಸಾರುತ್ತದೆ.

ಹೃದಯ ಮಾಂಸಖಂಡದ ಕಡಿಮೆ ರಕ್ತ ಸಂಚಾರಕ್ಕೆ ಅನೇಕ ಕಾರಣಗಳಿದ್ದರೂ ಕೂಡ ಅವುಗಳಲ್ಲಿ ಬಹುಮುಖ್ಯವಾದುದು ಹೃದಯ ರಕ್ತನಾಳ (ಕರೋನರಿ ಆರ್ಟರಿ)ಗಳ ಅಥಿರೋಸ್ಕ್ಲೀರೋಸಿಸ್.

ಹೃದಯಕ್ಕೆ ಒತ್ತಡ ಮತ್ತು ಆಯಾಸವನ್ನು ಉಂಟು ಮಾಡುವಂತಹ ಜೀವನ ಶೈಲಿಯನ್ನು ಬದಲಾಯಿಸಿಕೊಳ್ಳುವುದು ಉತ್ತಮ ಚಿಕಿತ್ಸೆ. ಧೂಮಪಾನ ಮತ್ತು ಅತಿಯಾಗಿ ತಿನ್ನುವುದು, ಅತಿಯಾಗಿ ಆಯಾಸ-ಗೊಳ್ಳುವಂತಹ ಕೆಲಸಗಳನ್ನು ನಿಯಂತ್ರಿಸಿಕೊಳ್ಳಬೇಕು.

**ANGIOCARDIOGRAPHY** (ಆ್ಯಂಜಿಯೋ ಕಾರ್ಡಿಯೋಗ್ರಫಿ): ಕ್ಷಕಿರಣಗಳು ಗುರುತಿಸುವಂತಹ ವಸ್ತುವನ್ನು ಸೇರಿಸಿ, ಹೃದಯ ಮತ್ತು ಹೃದಯ ರಕ್ತನಾಳಗಳನ್ನು ಕ್ಷ-ಕಿರಣಗಳ ಮೂಲಕ ಪರೀಕ್ಷಿಸುವುದು.

**ANGIOGRAPHY** (ಆ್ಯಂಜಿಯೋಗ್ರಫಿ): ರಕ್ತನಾಳ ಚಿತ್ರಣ; ಧಮನಿನಾಡಿ ಚಿತ್ರಣ; ರೇಡಿಯೋ ಒಪೆಕ್ (ಕ್ಷಕಿರಣ ಅಪಾರದರ್ಶಕ) ವಸ್ತುಗಳನ್ನು ಸೇರಿಸಿ ಕ್ಷಕಿರಣದ ಮೂಲಕ ರಕ್ತನಾಳಗಳನ್ನು ಪರೀಕ್ಷಿಸುವುದು.

ಈ ವಿಧಾನವನ್ನು ಗಡ್ಡೆಗಳನ್ನು, ಮುಖ್ಯವಾಗಿ ಮೆದುಳು ಗಡ್ಡೆಯನ್ನು ಕಂಡು ಹಿಡಿಯುವಲ್ಲಿಯೂ ಉಪಯೋಗಿಸುತ್ತಾರೆ.

**ANGIOMA** (ಆ್ಯಂಜಿಯೋಮ): ರಕ್ತನಾಳಗಂತಿ; ಬಹುತೇಕವಾಗಿ ರಕ್ತ ಮತ್ತು ದುಗ್ದರಸ ನಾಳಗಳಿಂದಲೇ ಉಂಟಾದ ಗಡ್ಡೆ.

**ANGIOPLASTY** (ಆ್ಯಂಜಿಯೋ ಪ್ಲಾಸ್ಟಿ): ರಕ್ತನಾಳ ಸುರೂಪಿಕೆ; ಘಾಸಿಗೊಂಡು ಹಾನಿಗೊಳಗಾದ ರಕ್ತನಾಳಗಳನ್ನು ಸರಿಪಡಿಸುವ ಯಾವುದೇ ರೀತಿಯ ಚಿಕಿತ್ಸೆಯ ವಿಧಾನ.

**ANKYLOSIS** (ಆಂಕೈಲೋಸಿಸ್): ಕೀಲುಗಟ್ಟು; ಶಸ್ತ್ರಚಿಕಿತ್ಸೆ ಅಥವಾ ಘಾಸಿ-ಯಿಂದಾಗಿ ಕೀಲಿನ ಕೆಲ ಭಾಗಗಳು ಅಂಟಿಕೊಳ್ಳುವುದರಿಂದ ಉಂಟಾಗುವ ಚಲನಾಹೀನತೆ ಅಥವಾ ಬಿರುಸುತನದ ಸ್ಥಿತಿ.

**ANOREXIA NERVOSA** (ಅನೊರೇಕ್ಸಿಯ ನರ್ವೋಸ): ಹಸಿವಿನ ನಾಶ; ಹಸಿವು ಇಲ್ಲದಿರುವುದು. ಆಹಾರವನ್ನು ತಿರಸ್ಕರಿಸುವಿಕೆಯ ಸ್ಥಿತಿ.

ಈ ಸ್ಥಿತಿಯು ಮೊದ ಮೊದಲಿಗೆ ತೂಕವನ್ನು ಕಳೆದುಕೊಳ್ಳುವ ಉದ್ದೇಶ-ದಿಂದಲೆ ಪ್ರಾರಂಭವಾದರೂ ಮುಂದೆ ವ್ಯಕ್ತಿ ತೂಕದ ಜೊತೆಗೆ ಪ್ರೊಟೀನ್, ವಿಟಮಿನ್ ಮತ್ತು ಲವಣಗಳ ಕೊರತೆಯನ್ನೂ ಅನುಭವಿಸಬೇಕಾಗುತ್ತದೆ. ವ್ಯಕ್ತಿ ವಿಪರೀತ ಸಣ್ಣಗಾಗಿ, ಹಾಸಿಗೆ ಹಿಡಿಯಬಹುದು. ಇದು ಹರೆಯದ ಹುಡುಗಿಯರಲ್ಲಿ, ಸೌಂದರ್ಯ ಸ್ಪರ್ಧೆಗಳಲ್ಲಿ ಭಾಗವಹಿಸುವವರಲ್ಲಿ ಹೆಚ್ಚು.

**ANTACID** (ಆ್ಯಂಟಾಸಿಡ್): ಆಮ್ಲರೋಧಕ; ಆ್ಯಸಿಡಿಟಿಯನ್ನು ತಟಸ್ಥಗೊಳಿಸಲು ಬಳಸುವ ಔಷಧ.

**ANTHRAX** (ಆಂಥ್ರ್ಯಾಕ್ಸ್): ನೆರಡಿ ರೋಗ: ದನ, ಕುರಿ ಮತ್ತು ಮೇಕೆಯಲ್ಲಿ ಕಾಣಿಸಿಕೊಳ್ಳುವ ಸೋಂಕುಪೂರಿತ ಕಾಯಿಲೆಯಾಗಿದ್ದು, ಮಾನವನಿಗೂ ಹರಡಬಹುದು. ಕಲುಷಿತಗೊಂಡ ಉಣ್ಣೆ, ಕೂದಲು, ಚರ್ಮದಲ್ಲಿರುವ ರೋಗಕಾರಕಗಳಿಂದ ಇದು ಮಾನವನಿಗೆ ಹರಡಬಹುದಾಗಿದ್ದು, ಸ್ವಚ್ಛತೆಯ ವಿಧಾನದಿಂದ ಈ ವಸ್ತುಗಳೊಂದಿಗೆ ವ್ಯವಹರಿಸಿದರೆ ರೋಗ ಹರಡುವಿಕೆಯನ್ನು ತಡೆಗಟ್ಟಬಹುದು.

ಚರ್ಮದ ಮೇಲೆ ಒಂದು ರೀತಿಯ ತುರಿಕೆಯ ಗಾಯದಂತೆ ಕಾಣಿಸಿ-ಕೊಳ್ಳುವ ಇದು ನಂತರ ಶ್ವಾಸಕೋಶಕ್ಕೆ ಹರಡುತ್ತದೆ.

**ANTIBIOTIC** (ಆ್ಯಂಟಿಬಯೋಟಿಕ್): ಜೀವಿರೋಧಕ; ಜೀವಿಯೊಂದರ ಬೆಳವಣಿಗೆಯನ್ನು ನಿಯಂತ್ರಿಸಲು ಇಲ್ಲವೆ ನಾಶಪಡಿಸಲು ತಯಾರಿಸಿದ ಔಷಧ. ಇದು ನಮ್ಮ ದೇಹದಲ್ಲಿರುವ ಸೋಂಕನ್ನು ತಡೆದು, ನಮಗೆ ಜೀವದಾನ ಮಾಡುತ್ತದೆ.

**ANTIBODY** (ಆ್ಯಂಟಿಬಾಡಿ): ರೋಧವಸ್ತು; ದೇಹವನ್ನು ಪ್ರವೇಶಿಸುವ ಆ್ಯಂಟಿಜೆನ್ ಎಂಬ ಬಾಹ್ಯವಸ್ತುವೊಂದಿಗೆ ಸೇರಿ ಅದನ್ನು ತಟಸ್ಥಗೊಳಿಸುವುದಕ್ಕೋಸ್ಕರ ದೇಹದಲ್ಲಿ ಉತ್ಪತ್ತಿಯಾಗುವ ರಾಸಾಯನಿಕ ಸಂಕೀರ್ಣ ಪದಾರ್ಥ.

ಉತ್ಪತ್ತಿಯಾಗುವ ಆ್ಯಂಟಿಬಾಡಿಗಳು ತುಂಬಾ ನಿಖರವಾಗಿದ್ದು ಆ ಆ್ಯಂಟಿಜೆನ್‌ನಿಂದ ಮಾತ್ರ ರಕ್ಷಣೆ ನೀಡುತ್ತವೆ. ಇವುಗಳ ಮುಖ್ಯ ಉದ್ದೇಶ ದೇಹಕ್ಕೆ ಸೋಂಕಿನಿಂದ ರಕ್ಷಣೆ ನೀಡುವುದು ಮತ್ತು ಭವಿಷ್ಯದಲ್ಲಿ ಉಂಟಾಗಬಹುದಾದ ದಾಳಿಯನ್ನು ಎದುರಿಸುವುದು.

**ANTICOAGULANT** (ಆ್ಯಂಟಿ ಕೋಆಗುಲೆಂಟ್): ಗರಣೆರೋಧಕ; ರಕ್ತದ ಹೆಪ್ಪುಗಟ್ಟುವಿಕೆಯನ್ನು ಕಡಿಮೆ ಮಾಡುವ ಔಷಧ.

**ANTIDOTE** (ಆ್ಯಂಟಿಡೋಟ್): ವಿಷಮುರಿ; ಕಟ್ಟುಮದ್ದು; ವಿಷದ ಪರಿಣಾಮವನ್ನು ನಿಷ್ಕ್ರಿಯಗೊಳಿಸಬಲ್ಲ ವಸ್ತು.

**ANTIFUNGAL** (ಆ್ಯಂಟಿ ಫಂಗಲ್): ಅಣಬೆರೋಧಕ; ಶಿಲೀಂಧ್ರ ಅಥವಾ ಬೂಸ್ಟಿನ ಬೆಳವಣಿಗೆಯನ್ನು ನಿಯಂತ್ರಿಸುವ ವಸ್ತು.

**ANTIGEN** (ಆ್ಯಂಟಿಜೆನ್): ರೋಧಜನಕ; ದೇಹದ ರೋಗ ನಿರೋಧಕ ವ್ಯವಸ್ಥೆಯು ಅಪಾಯಕಾರಿ ಎಂದು ಗುರುತಿಸಿ, ಸೂಕ್ತ ಆ್ಯಂಟಿಬಾಡಿಗಳ ಉತ್ಪಾದನೆಯನ್ನು ಮಾಡುವಂತಹ ಯಾವುದೇ ವಸ್ತು.

**ANTIHISTAMINE** (ಆ್ಯಂಟಿ ಹಿಸ್ಟಮೈನ್): ಹಿಸ್ಟಮೀನ್ ರೋಧಿ; ಹಿಸ್ಟಮೈನ್‌ನ ಕ್ರಿಯೆಯನ್ನು ತಡೆಹಿಡಿಯಬಲ್ಲ ಔಷಧ. ಉದಾ.: ನೆಗಡಿ ಮತ್ತು ಜ್ವರಕ್ಕೆ ಬಳಸುವಂತಹ ಔಷಧಗಳು.

**ANTIPYRETIC** (ಆ್ಯಂಟಿ ಪೈರೆಟಿಕ್): ಜ್ವರವನ್ನು ಕಡಿಮೆ ಮಾಡುವಂತಹ ಔಷಧಿ. ಉದಾ.: ಪ್ಯಾರಾಸಿಟಮಾಲ್.

**ANTISEPTIC** (ಆ್ಯಂಟಿಸೆಪ್ಟಿಕ್): ನಂಜುರೋಧಕ; ಬ್ಯಾಕ್ಟೀರಿಯಾದ ಕಾರ್ಯಕ್ಷಮತೆಯನ್ನು ಕುಗ್ಗಿಸುವ ಯಾವುದೇ ವಸ್ತು.

**ANTITOXIN** (ಆ್ಯಂಟಿ ಟಾಕ್ಸಿನ್): ಜೀವಿಷರೋಧಕ; ಬ್ಯಾಕ್ಟೀರಿಯಾದಿಂದ ಬಿಡುಗಡೆಗೊಂಡ ನಿಖರ ವಿಷವಸ್ತುವನ್ನು ತಟಸ್ಥಗೊಳಿಸುವ ವಸ್ತು.

**ANURIA** (ಅನ್ಯೂರಿಯಾ): ಮೂತ್ರಕಟ್ಟು; ಮೂತ್ರಪಿಂಡದ ವೈಫಲ್ಯತೆ ಅಥವಾ ನಾಳ ಮುಚ್ಚುವಿಕೆಯಿಂದಾಗಿ ಉಂಟಾಗುವ ಮೂತ್ರ ವಿಸರ್ಜನೆಯ ಕೊರತೆ. ಮೂತ್ರ ಹೊರ ಬರುವುದಿಲ್ಲ.

**ANXIETY** (ಆ್ಯಂಕ್ಸೈಟಿ): ಆತಂಕ; ಕಳವಳ. ಭವಿಷ್ಯದ ಕೆಲ ವಿಷಯಗಳ ಬಗ್ಗೆ ಇರುವ ಭಯ ಅಥವಾ ಗಾಬರಿ. ಮನಸ್ಸಿಗೆ ಇಷ್ಟವಾಗದ ಫಲಿತಾಂಶವನ್ನು ಹೊರ ಹಾಕುವ ಯಾವುದೇ ಸಂಬಂಧಪಟ್ಟ ವಿಷಯಗಳ ಬಗ್ಗೆ ಆತಂಕ ಇರುವುದು ಸಹಜ. ಈ ಸ್ಥಿತಿ ಅತಿ ಮತ್ತು ಅಸಮಂಜಸವಾದರೆ ಆರೋಗ್ಯಕರವಲ್ಲ. ಆಗ ಅದನ್ನು ANXIETY DISORDER ಎಂದು ಕರೆಯಲಾಗುತ್ತದೆ.

**AORTA** (ಅಯೋರ್ಟ): ಮಹಾಧಮನಿ; ದೇಹದ ಅತ್ಯಂತ ಮುಖ್ಯ ಮತ್ತು ದೊಡ್ಡ ಶುದ್ಧ ರಕ್ತನಾಳ. ಹೃದಯದ ಎಡಹೃತ್ಕುಕ್ಷಿಯಿಂದ ಪ್ರಾರಂಭವಾಗಿ ದೇಹದ ಇತರ ಭಾಗಕ್ಕೆ ರಕ್ತ ಸರಬರಾಜು ಮಾಡುತ್ತದೆ.

**APHAGIA** (ಅಫೇಜಿಯ): ನುಂಗಲಾಗದಿಕೆ; ನುಂಗಲು ಆಗದೆ ಇರುವುದು.

**APHASIA** (ಅಫೇಸಿಯ): ಮೂಕತನ; ಮಾತುಕಟ್ಟು; ಪಾರ್ಶ್ವವಾಯು ಮತ್ತು ಇತರೆ ಕಾಯಿಲೆಗಳಿಂದಾಗಿ, ಯೋಚನೆ ಮತ್ತು ಪದಗಳನ್ನು ಪರಸ್ಪರ ಸರಿಯಾಗಿ ಹೊಂದಿಸಿಕೊಂಡು, ಸ್ಫುಟವಾಗಿ (ಸ್ವಚ್ಛ) ಮಾತನಾಡಲು ಆಗದೆ ಇರುವ ಸ್ಥಿತಿ.

**APHRASIA** (ಅಫ್ರೇಸಿಯ): ವಾಕ್ಯದಲ್ಲಿನ ಪದಗಳನ್ನು ಅರ್ಥಗರ್ಭಿತವಾಗಿ ಜೋಡಿಸಿ ಮಾತನಾಡಲು ಆಗದೆ ಇರುವುದು.

**APLASIA** (ಅಪ್ಲೇಶಿಯ): ನ್ಯೂನತೆಗೊಂಡ ಅಥವಾ ಅಪರಿಪೂರ್ಣವಾಗಿ ಬೆಳವಣಿಗೆಗೊಂಡ ಅಂಗ.

**APNOEA** (ಅಪ್ನೀಯ): ಕಟ್ಟುಸಿರು; ಉಸಿರ್ಗಟ್ಟು; ತಾತ್ಕಾಲಿಕ ಉಸಿರಾಟದ ನಿಲ್ಲುವಿಕೆ.

**APPENDAGE** (ಅಪೆಂಡೇಜ್): ವಾಳ; ಕೂಡುಭಾಗ; ಅಧಿಕ ಅಥವಾ ಹೆಚ್ಚುವರಿ ಭಾಗ, ಹೊರ ಬೆಳವಣಿಗೆ.

**APPENDECTOMY** (ಅಪೆಂಡೆಕ್ಟಮಿ): ಅಪೆಂಡಿಕ್ಸ್ ಎಂಬ ಕರುಳಿನ ನಿರುಪಯುಕ್ತ ಅಂಗವನ್ನು ಶಸ್ತ್ರಚಿಕಿತ್ಸೆಯ ಮೂಲಕ ತೆಗೆದು ಹಾಕುವುದು.

**APPENDICITIS** (ಅಪೆಂಡಿಸೈಟಿಸ್): ಕರುಳು ಥಾಳುರಿತ; ಅಪೆಂಡಿಕ್ಸ್‌ನ ಉರಿಯೂತ (ಅಪೆಂಡಿಕ್ಸ್ ಎಂದರೆ, ದೊಡ್ಡ ಮತ್ತು ಸಣ್ಣಕರುಳು ಒಂದುಗೂಡುವ ಜಾಗದಲ್ಲಿ ಇರುವ ಸಣ್ಣ ನಿರುಪಯುಕ್ತ ಕಿರು ಅಂಗ).

ಅಪೆಂಡಿಕ್ಸ್‌ಗೆ ಯಾವುದೇ ಉಪಯುಕ್ತ ಕೆಲಸ ಇಲ್ಲದರಿಂದ ಅದನ್ನು ಶಸ್ತ್ರ ಚಿಕಿತ್ಸೆಯ ಮೂಲಕ ತೆಗೆದು ಹಾಕುವುದು ಸೂಕ್ತ. ಇಲ್ಲವೆಂದರೆ ಸೋಂಕು ಗೊಂಡ ಅದು ಒಡೆದು ಹೋಗಿ ಅಪಾಯಕಾರಿಯಾಗಬಹುದು.

ಅಪೆಂಡಿಸೈಟಿಸ್‌ನಲ್ಲಿ ತೀವ್ರ ಅಥವಾ ಮಂದವಾದ ನೋವು ಹೊಟ್ಟೆಯಲ್ಲಿ ಕಾಣಿಸಿಕೊಂಡು, ಕೆಮ್ಮಿದಾಗ, ಸೀನಿದಾಗ ಹೆಚ್ಚಾಗುತ್ತಿರುತ್ತದೆ. ವಾಕರಿಕೆ ಮತ್ತು ಬೇಧಿಯಂತಹ ಲಕ್ಷಣಗಳು ಕೂಡ ಗೋಚರಿಸಬಹುದು. ಹೊಟ್ಟೆಯ ಬಲಭಾಗದ  ಕೆಳಗಡೆ ಮೂಲೆಯಲ್ಲಿ ಕಾಣಿಸಿಕೊಂಡ ನೋವು ಬೆನ್ನಿಗೂ ಹರಡಬಹುದು.

**APPLIANCE** (ಅಪ್ಲಯನ್ಸ್): ಸಾಧನ; ನಿಖರವಾದ ಉದ್ದೇಶಕ್ಕಾಗಿ ದೇಹಕ್ಕೆ ಅಳವಡಿಸಲಾದ ಉಪಕರಣ. ಉದಾ:– ಕೃತಕ ದಂತಪಂಕ್ತಿ.

**APYRETIC** (ಅಪೈರಿಟಿಕ್): ಜ್ವರವನ್ನು ಸೂಚಿಸುವ ಲಕ್ಷಣಗಳ ಕೊರತೆ.

**AQUEOUS** (ಅಕ್ವೇಯಸ್): ನೀರಿನ; ನೀರಾಗಿರುವ; ನೀರನ್ನು ಹೊಂದಿರುವ ಅಥವಾ ಹೋಲುವ ದ್ರವ.

**ARBOVIRUS** (ಆರ್ಬೋವೈರಸ್): ಕೀಟದಿಂದ ಹರಡಲ್ಪಡುವ ಯಾವುದೇ ರೀತಿಯ ಅನೇಕ ವೈರಸ್‌ಗಳು.

**ARRHYTHMIA** (ಅರಿಥ್ಮಿಯ): ತಾಳಗತಿಗೇಡು; ಅನಿಯಮಿತವಾದ ಹೃದಯಬಡಿತ.

**ARTERIOLE** (ಆರ್ಟಿರಿಯೋಲ್): ಕಿರುಧಮನಿ; ಕ್ಯಾಪಿಲರಿಗೆ ಸೇರಿಸುವ ಶುದ್ಧ ರಕ್ತನಾಳದ, ರಕ್ತನಾಳ ತಂತು.

**ARTERIOSCLEROSIS** (ಆರ್ಟಿರಿಯೋಸ್ಕ್ಲೀರೋಸಿಸ್): ಶುದ್ಧ ರಕ್ತನಾಳದ ಒಳಪದರು ಗಟ್ಟಿಗೊಂಡು, ಬಿರುಸಾಗಿ ರಕ್ತಸಂಚಾರಕ್ಕೆ ಅಡ್ಡಿಯಾಗುವಂತಹ ಯಾವುದೇ ಸ್ಥಿತಿ.

**ARTERY** (ಆರ್ಟರಿ): ಧಮನಿ; ಹೃದಯದಿಂದ ಹೊರ ಬರುವ ಶುದ್ಧ ರಕ್ತವನ್ನು ದೇಹದ ತುಂಬೆಲ್ಲ ಸರಬರಾಜು ಮಾಡುವ ರಕ್ತನಾಳ.

**ARTHRALGIA** (ಆರ್ಥ್ರಾಲ್ಜಿಯ): ಕೀಲುನೋವು; ಕೀಲಿನಲ್ಲಿರುವ ನೋವು.

**ARTHRECTOMY** (ಆರ್ಥ್ರೆಕ್ಟಮಿ): ಕೀಲು ಕೊಯ್ತೆಗೆತ; ಶಸ್ತ್ರಚಿಕಿತ್ಸೆಯ ಮೂಲಕ ಕೀಲನ್ನು ತೆಗೆದು ಹಾಕುವುದು ಅಥವಾ ಬದಲಾಯಿಸುವುದು.

**ARTHRITIS** (ಆರ್ಥ್ರೈಟಿಸ್): ಸಂಧಿವಾತ; ಕೀಲುನೋವು; ಕೀಲಿನ ಯಾವುದೇ ರೀತಿಯ ಉರಿಯೂತ.

ಇದರಿಂದ ಕೀಲು ಊದಿಕೊಂಡು ನೋವುಪೂರಿತ ಮತ್ತು ಬಿರುಸಾಗುತ್ತದೆ. ಒದ್ದೆ ವಾತಾವರಣ, ಭಾವನಾತ್ಮಕ ಒತ್ತಡ, ಅತಿಯಾದ ದೇಹತೂಕ ಮತ್ತು ಕೆಲಸ ಹಾಗೂ ಆಟಗಳಲ್ಲಿ ಕೀಲನ್ನು ಅತಿಯಾಗಿ ಬಳಸುವುದು ಕೂಡ ಸ್ಥಿತಿಯನ್ನು ಮತ್ತಷ್ಟು ಹದಗೆಡುವಂತೆ ಮಾಡುತ್ತದೆ.
ತುಂಬಾ ಸಾಮಾನ್ಯವಾದ ಕಾರಣವೆಂದರೆ ರ್‍ಯುಮಟಾಯ್ಡ್ ಆರ್ಥ್ರೈಟಿಸ್ (ಕೀಲನ್ನು ಸುತ್ತುವರೆದು ಜಾರುವಂತೆ ಸಹಾಯ ಮಾಡುವ ಸೈನೋವಿಯಂ ಎಂಬ ಪದರದ ಉರಿಯೂತದಿಂದ ಇದು ಪ್ರಾರಂಭವಾಗುತ್ತದೆ.) ಈ ಉರಿಯೂತ ಕಾರ್ಟಿಲೇಜ್ ಅಂಗಾಂಶವನ್ನು ನಾಶಪಡಿಸಿ, ಅದರ ಜಾಗದಲ್ಲಿ 'ಸ್ಕಾರ್' ಅನ್ನು ಬದಲಾಯಿಸಿಬಿಡುವುದರಿಂದ ಕೀಲು ಊದಿಕೊಂಡು, ನೋವಾಗಿ ಬಿಡುತ್ತದೆ.

ಈ ಆರ್ಥ್ರೈಟಿಸ್‌ಗೆ ಮುಖ್ಯವಾದ ಚಿಕಿತ್ಸೆಗಳೆಂದರೆ, ಔಷಧ, ವ್ಯಾಯಾಮ, ವಿಶ್ರಾಂತಿ ಹಾಗೂ ಮಾನಸಿಕ ನೆಮ್ಮದಿ.

**ARTHROLOGY** (ಆರ್ಥ್ರಾಲಜಿ): ಕೀಲುಶಾಸ್ತ್ರ; ಕೀಲಿನ ರಚನೆ ಮತ್ತು ರೋಗಗಳ ಬಗ್ಗೆ ಅಧ್ಯಯನ ಮಾಡುವ ವೈದ್ಯಶಾಸ್ತ್ರದ ವಿಭಾಗ.

**ARTHROPLASTY** (ಆರ್ಥ್ರೋಪ್ಲಾಸ್ಟಿ): ಕೀಲು ಸುರೂಪಿಕೆ; ಶಸ್ತ್ರಚಿಕಿತ್ಸೆಯ ಮೂಲಕ ಕೀಲನ್ನು ಬದಲಾಯಿಸುವುದು ಅಥವಾ ಸರಿಪಡಿಸುವುದು.

**ARTICULATE** (ಆರ್ಟಿಕ್ಯುಲೇಟ್): ಅಕ್ಷರ–ಪದಗಳ ಉಚ್ಚಾರಣೆ ಸ್ಫುಟವಾಗಿ ಮಾತನಾಡುವ ಸಾಮರ್ಥ್ಯ.

ಸೇರಿಸುವುದು ಅಥವಾ ಸಂಧಿಯ ಮೂಲಕ ಒಂದು ಮಾಡುವುದು.

**ARTICULATION** (ಆರ್ಟಿಕ್ಯುಲೇಷನ್): ಕೀಲುಗೂಡಿಕೆ; ಕೀಲು; ಸ್ವಚ್ಛವಾಗಿ ಮಾತನಾಡುವುದು.

ವಿವಿಧ ಭಾಗಗಳನ್ನು ಜಾಯಿಂಟ್ ಮೂಲಕ ಸೇರಿಸುವ ಬಗೆ.

**ARTIFICIAL INSEMINATION** (ಆರ್ಟಿಫಿಶಿಯಲ್ ಇನ್‌ಸಮ್ಮೈನೇಶನ್): ಕೃತಕ ಗರ್ಭಧಾರಣೆ; ಲೈಂಗಿಕ ಸಂಪರ್ಕವಿಲ್ಲದೆ ಗರ್ಭಧರಿಸುವಂತೆ ಮಾಡುವ ಪ್ರಯತ್ನ. ಪುರುಷನಿಂದ ವೀರ್ಯವನ್ನು ಸಂಗ್ರಹಿಸಿ, ಸ್ತ್ರೀ ಫಲವಂತೆ-ಯಾಗುವ ಸಮಯದಲ್ಲಿ ಸ್ತ್ರೀಯ ಗರ್ಭಾಶಯ ಅಥವಾ ಗರ್ಭಕಂಠದಲ್ಲಿ ಸೇರಿಸುವುದು.

**ASBESTOSIS** (ಅಸ್ಬೆಸ್ಟೋಸಿಸ್): ಪುಪ್ಪುಸ ಕಲ್ನಾರುಬೇನೆ; ಆಸ್ಬೆಸ್ಟೋಸ್ ಕಣಗಳನ್ನು ಉಸಿರಾಟದ ಮೂಲಕ ಸೇವಿಸುವುದರಿಂದ ಉಂಟಾಗುವ ಶ್ವಾಸಕೋಶದ ಉರಿಯೂತ.

ಅಸ್ಬೆಸ್ಟೋಸಿಸ್‌ನ ಸೂಕ್ಷ್ಮಕಣಗಳು ಶ್ವಾಸಕೋಶಕ್ಕೆ ಕಿರಿಕಿರಿಯನ್ನು ಉಂಟು ಮಾಡುವುದಲ್ಲದೆ ಉಸಿರಾಟವನ್ನು ಅಲ್ಪಾವಧಿಗೊಳಿಸಿ, ಕೆಮ್ಮನ್ನು ಉಂಟು ಮಾಡುತ್ತವೆ. ವ್ಯಕ್ತಿಯು ಹಸಿವಾಗದಿರುವಿಕೆ, ತೂಕ ಕಳೆದುಕೊಳ್ಳುವಿಕೆ ಮತ್ತು ಆಯಾಸಗೊಳ್ಳುವಿಕೆಯಂತಹ ಲಕ್ಷಣಗಳನ್ನೂ ಹೊಂದಿರುತ್ತಾನೆ.

**ASCORBIC ACID** (ಆಸ್ಕಾರ್ಬಿಕ್ ಆ್ಯಸಿಡ್): ವಿಟಮಿನ್ 'ಸಿ' ನೋಡಿ ಸ್ಕರ್ವಿರೋಧಕ.

**ASEPSIS** (ಏಸೆಪ್ಸಿಸ್): ರೋಗಾಣುಗಳಿಲ್ಲದ: ನಂಜುನಿರೋಧ; ರೋಗಾಣು ಗಳಿಂದ ಸಂಪೂರ್ಣವಾಗಿ ಮುಕ್ತವಾದ ಸ್ಥಿತಿ.

**ASPARTAME** (ಆಸ್ಪರ್ಟೇಮ್): ಸಕ್ಕರೆಯ ಬದಲಿ ಪದಾರ್ಥ. ಸಿಹಿರುಚಿ ಕೊಡುವುದು.

**ASPERMATISM, ASPERMIA** (ಎಸ್ಪೆರ್ಮೇಟಿಸಂ, ಎಸ್ಪರ್ಮಿಯ): ವೀರ್ಯಧಾತು ವನ್ನು ಉತ್ಪಾದಿಸಲು ಅಸಮರ್ಥತೆ. ವೀರ್ಯ ಚಿಮ್ಮದಿಕೆ. ವೀರ್ಯದಲ್ಲಿ ವೀರ್ಯಾಣುವಿಲ್ಲ.

**ASPHYXIA** (ಆಸ್ಫಿಕ್ಸಿಯ): ಉಸಿರ್ಗಟ್ಟು; ಉಸಿರಾಟದ ಅಡಚಣೆಯಿಂದಾಗಿ ರಕ್ತದಲ್ಲಿ ಆಮ್ಲಜನಕ ಪ್ರಮಾಣ ಕಡಿಮೆಯಾಗುವುದು. ಇದು ಮಿದುಳಿಗೆ ಹಾನಿಯುಂಟುಮಾಡುತ್ತದೆ. ಸಾವನ್ನೂ ತರುತ್ತದೆ.

ನೀರಿನಲ್ಲಿ ಮುಳುಗುವುದು ಇದಕ್ಕೆ ಸೂಕ್ತ ಉದಾಹರಣೆಯಾಗಿದ್ದು, ನೀರು ಗಾಳಿಯ ನಾಳದ್ವಾರಗಳನ್ನು ಮುಚ್ಚುವುದರಿಂದ ಹೀಗಾಗುತ್ತದೆ. ಆಕಸ್ಮಿಕವಾಗಿ ಆಹಾರ ಶ್ವಾಸನಾಳ ಸೇರಿದಾಗ, ಕುತ್ತಿಗೆಯ ಗಡ್ಡೆಯಿಂದಾಗಿ ಗಂಟಲನ್ನು ಹಿಸುಕಿದಂತಾದಾಗಲೂ ಕೂಡ ಈ ಸ್ಥಿತಿ ಉಂಟಾಗುತ್ತದೆ.

**ASPIRATE** (ಆಸ್ಪಿರೇಟ್): ಹೊರಗೆಳೆ; ಹೀರುವುದರ ಮೂಲಕ ದ್ರವ (ಕಫ)ವನ್ನು ಹೊರಗಳೆಯುವುದು.

**ASSIMILATE** (ಅಸ್ಸಿಮಿಲೇಟ್): ಮೈಗೂಡಿಕೆ, ಒಳಸೇರಿಕೆ; ವ್ಯವಸ್ಥೆಯಿಂದ ಒಳ ತೆಗೆದುಕೊಂಡು, ಹೀರಿಕೊಳ್ಳುವುದು. ಉದಾ:- ಆಹಾರದ ಪೋಷಕಾಂಶ ಮತ್ತು ಔಷಧಿಯನ್ನು ದೇಹ ಹೀರಿಕೊಂಡಂತೆ.

**ASTHENIA** (ಅಸ್ತೀನಿಯ): ನಿತ್ರಾಣ; ದೇಹದ ಶಕ್ತಿ ಅಥವಾ ತ್ರಾಣದ ಕೊರತೆ ಇಲ್ಲವೆ ನಷ್ಟ.

**ASTHMA** (ಅಸ್ತಮ): ಉಬ್ಬಸ; ಗೂರಲು; ಉಸಿರಾಡಲು ಕಷ್ಟವಾಗುವ ಗುಣಲಕ್ಷಣಗಳನ್ನು ಹೊಂದಿರುವ ಉಸಿರಾಟದ ತೊಂದರೆ.

ಅಲರ್ಜಿ, ಸೋಂಕು, ಅತಿ ಆಯಾಸ, ತಂಪುಗಾಳಿಯ ಸೇವನೆ ಅಥವಾ ಒತ್ತಡದಿಂದ ಅಸ್ತಮ ಶುರುವಾಗಬಹುದು. ಸಾಮಾನ್ಯವಾಗಿ ಉಸಿರಾಡುವಾಗ ಒಳತೆಗೆದುಕೊಂಡ ಗಾಳಿ ಶಾಸಕೋಶ

**ATHEROMA** (ಅಥೆರೋಮ): ಅಂಬಲಿಗಂತಿ, ಮೈಜಿಡ್ಡು ಜಿಟ್ಟಿ; ರಕ್ತನಾಳಗಳಲ್ಲಿ ಕೊಬ್ಬಿನ ಶೇಖರಣೆ.

**ATHEROSCLEROSIS** (ಅಥಿರೋಸ್ಕ್ಲೀರೋಸಿಸ್): ಅಂಬಲಿಪೆಡಸಣೆ; ಕೊಬ್ಬುಗಟ್ಟುವಿಕೆಯಿಂದ ರಕ್ತನಾಳಗಳಲ್ಲಿ ರಕ್ತದ ಹರಿವು ಕಡಿಮೆಯಾಗುವ/ ನಿಂತು ಹೋಗುವ ಸ್ಥಿತಿ.

ಆರ್ಟಿರಿಯೋಸ್ಕ್ಲೀರೋಸಿಸ್‌ನ ಒಂದು ಸಾಮಾನ್ಯ ಕಾರಣ ಇದಾಗಿದ್ದು ಹೃದಯಾಘಾತ ಮತ್ತು ಪಾರ್ಶ್ವವಾಯು ಸಮಸ್ಯೆಗಳಿಗೆ ಮೂಲವಾಗಿದೆ.

ದೇಹದ ಸಾಮಾನ್ಯ ಕ್ರಿಯೆಗೆ ಅವಶ್ಯಕವಾಗಿರುವ ಮತ್ತು ರಕ್ತದಲ್ಲಿ ಸಾಮಾನ್ಯವಾಗಿರುವ ಕೊಬ್ಬಿನ ಅಂಶ ಅಗತ್ಯಕ್ಕಿಂತ ಹೆಚ್ಚಾಗಿ ಶೇಖರಣೆಗೊಳ್ಳುತ್ತಾ ಸಾಗಿದಾಗ ಈ ಪರಿಸ್ಥಿತಿ ಉಂಟಾಗುತ್ತದೆ.

**ATHLETE'S FOOT** (ಅಥ್ಲೀಟ್ಸ್ ಫೂಟ್): ಅಂಗಸಾಧಕನ ಪಾದ; ಪಾದದ ಹುಳುಕಡ್ಡಿ; ಪಾದದ ಶಿಲೀಂದ್ರಕಾರಕ (ಫಂಗಲ್) ಸೋಂಕು. ಕಾಲಿನ ಬೆರಳುಗಳ ನಡುವೆ ಕಡಿತ, ಉರಿತ, ಜೋಮುಗಟ್ಟುವಿಕೆ ಮತ್ತು ಬಿರುಕುಗಳಂತಹ ಲಕ್ಷಣಗಳನ್ನು ಇದು ಹೊಂದಿರುತ್ತದೆ. ಆ ಜಾಗದಲ್ಲಿ ಚರ್ಮ ಸಿಪ್ಪೆ ಸಿಪ್ಪೆಯಾಗಿ ಸುಲಿಯುವ ಸಾಧ್ಯತೆಯೂ ಇರುತ್ತದೆ. ಇದಕ್ಕೆ ಕೆಸರು ಹುಣ್ಣು ಎಂದೂ ಕರೆಯುತ್ತಾರೆ.

**ATOMIZER** (ಆಟೊಮೈಜರ್): ತುಂತುರಿಕ; ದ್ರವದ ಸೂಕ್ಷ್ಮಕಣಗಳನ್ನು ಸಿಂಪಡಿಸುವಂತಹ ಸಾಧನ.

**ATROPHY** (ಅಟ್ರೋಫಿ): ಸವೆತ; ಕಾಯಿಲೆ ಅಥವಾ ದುರ್ಬಳಕೆಯಿಂದಾಗಿ ಅಥವಾ ಉಪಯೋಗಿಸದೇ ದೇಹದ ಅಂಗ ಅಥವಾ ಭಾಗ ಕ್ಷೀಣಿಸುವ ಸ್ಥಿತಿ.

**ATTENUATE** (ಅಟೆನ್ಯುಏಟ್): ದುರ್ಬಲಗೊಳಿಸುವಿಕೆ; ಕಾಯಿಲೆ ಅಥವಾ ರೋಗಲಕ್ಷಣದಗಳಂತಹವುಗಳ ತೀವ್ರತೆಯನ್ನು ಕಡಿಮೆ ಮಾಡುವುದು.

**ATYPICAL** (ಏಟಿಪಿಕಲ್): ಮಾದರಿಗೆಟ್ಟ; ನಿರ್ದಿಷ್ಟ ಕಾಯಿಲೆಗೆ ಸಂಬಂಧಿಸಿದ ಸಾಮಾನ್ಯ ರೋಗಲಕ್ಷಣ ಇಲ್ಲದೇ ಇರುವುದು.

**AUDIBLE** (ಆಡಿಬಲ್): ಕೇಳಿಸುವಂತಹುದು; ಆಲಿಸಬಲ್ಲ; ಮಾನವನ ಕಿವಿಗೆ ಕೇಳಿಸುವಂತಹುದು.

**AUDIOLOGY** (ಆಡಿಯಾಲಜಿ): ಆಲಿಕೆಶಾಸ್ತ್ರ; ಶ್ರವಣಕ್ಕೆ ಸಂಬಂಧಿಸಿದ ಮತ್ತು ಶ್ರವಣ ದೋಷಗಳ ಸರಿಪಡಿಸುವಿಕೆಗೆ ಸಂಬಂಧಿಸಿದ ವೈದ್ಯಕೀಯ ಶಾಖೆ.

**AUDITORY** (ಆಡಿಟರಿ): ಶ್ರವಣಕ್ಕೆ ಸಂಬಂಧಿಸಿದ.

**AUSCULTATION** (ಆಸ್ಕಲ್ಟೇಷನ್): ಕಿವಿಗೇಳಿಕೆ; ಸ್ಟೆತಸ್ಕೋಪ್ ಅನ್ನು ಬಳಸಿ ದೇಹದಲ್ಲಿ ಉಂಟಾಗುವ ಶಬ್ಧಗಳನ್ನು ಆಲಿಸುವುದು; ಆ ಶಬ್ಧಗಳ ಅಧ್ಯಯನವನ್ನು ನಡೆಸುವುದು.

ಹೃದಯ ಮತ್ತು ಶ್ವಾಸಕೋಶಗಳು ಇಂತಹ ಶಬ್ದಗಳನ್ನು ಉಂಟುಮಾಡುವ ದೇಹದ ಮುಖ್ಯ ಅಂಗಗಳು. ಇವುಗಳನ್ನು ಆಲಿಸುವುದರ ಮೂಲಕ ದೇಹದ ಸಾಮಾನ್ಯವಾದ ಅಸಮಾನ್ಯತೆಗಳನ್ನು ಗುರುತಿಸಬಹುದು.

**AUTISM** (ಆಟಿಸಂ): ತನ್ನಲ್ಲಿ ತಾನು ಮಗ್ನನಾಗಿರುವ ಕಾಯಿಲೆ; ವಾಸ್ತವಿಕತೆಗೆ ಸಂಬಂಧದ ಕೊರತೆ ಮತ್ತು ಕಲ್ಪನತೆಯಲ್ಲೆ (ಭ್ರಮೆ) ತಲ್ಲೀನರಾಗುವ ಸ್ಥಿತಿ.

3ರಿಂದ 5 ವರ್ಷ ಮಕ್ಕಳಲ್ಲಿ ಈ ಸ್ಥಿತಿಯನ್ನು ಕಾಣಬಹುದಾಗಿದ್ದು, ಕಲಿಯಲು ಯಾವುದೇ ಕಷ್ಟ ಇರದಿದ್ದರೂ ನಡೆದಾಡಲು, ಮಾತನಾಡಲು, ಊಟ ಮಾಡುವುದನ್ನು ಕಲಿಯಲು ಈ ಮಕ್ಕಳು ಆಸಕ್ತಿಯನ್ನೇ ತೋರಿಸುವುದಿಲ್ಲ. ಯಾರೊಂದಿಗೂ ಸ್ನೇಹ ಸಂಪರ್ಕ ಇಟ್ಟುಕೊಳ್ಳುವುದಿಲ್ಲ. ಕೆಲವು ವರ್ತನೆಗಳನ್ನು ಯಾಂತ್ರಿಕವಾಗಿ ಮತ್ತೆ ಮತ್ತೆ ಮಾಡುತ್ತಿರುತ್ತಾರೆ.

**AUTOIMMUNE DISEASE** (ಆಟೋ ಇಮ್ಯೂನ್ ಡಿಸೀಸ್): ದೇಹದ ರೋಗ ನಿರೋಧಕ ವ್ಯವಸ್ಥೆಯನ್ನು ಪ್ರಚೋದಿಸಿ, ಆರೋಗ್ಯವಂತ ಅಂಗಾಂಶದ ವಿರುದ್ಧವೂ ಕೂಡ ಪ್ರತಿಕಾಯ (ಆ್ಯಂಟಿಬಾಡಿ)ಗಳನ್ನು ಸೃಷ್ಟಿಸುವಂತಹ ರೋಗಗಳು.

**AUTONOMIC** (ಆಟೋನೋಮಿಕ್): ಸ್ವಾಯತ್ತ; ಸ್ವಚೋದಿತ; ಅನೈಚ್ಛಿಕವಾಗಿ ಕಾರ್ಯ ನಿರ್ವಹಿಸುವಂತಹ, ಉಸಿರಾಟ ಮತ್ತು ಜೀರ್ಣಾಂಗದಂತಹ ಕಾರ್ಯಗಳು. ಇವುಗಳು ಆಟೋನೋಮಿಕ್ ನರ್ವಸ್ ಸಿಸ್ಟಮ್‌ನಿಂದ ನಿಯಂತ್ರಿಸಲ್ಪಟ್ಟಿರುತ್ತವೆ.

**AUTOPSY** (ಆಟೋಪ್ಸಿ): ಶವದ ಪರೀಕ್ಷೆ; ಮರಣ ನಂತರದ ದೇಹವನ್ನು ಕೊಯ್ದು ಪರೀಕ್ಷೆ.

ಇದನ್ನು ಪೋಸ್ಟ್‌ಮಾರ್ಟಮ್ (Postmortem) ಎಂತಲೂ ಕರೆಯುತ್ತಾರೆ. ಸಾವಿಗೆ ಕಾರಣವನ್ನು ಕಂಡು ಹಿಡಿಯಲು ಇದನ್ನು ನಡೆಸಲಾಗುತ್ತದೆ.

**AZT** (ಎ.ಝಡ್.ಟಿ): ಅಜಿಡೋ ಥೈಮಿಡಿನ್ (Azidothymidine). ಏಡ್ಸ್‌ನ ಚಿಕಿತ್ಸೆಯಲ್ಲಿ ಬಳಸುವ ಒಂದು ಔಷಧ. ಇದು ರೋಗವನ್ನು ಸಂಪೂರ್ಣವಾಗಿ ಗುಣಪಡಿಸದಿದ್ದರೂ, ವೈರಸ್‌ನ ಬೆಳವಣಿಗೆಯ ವೇಗವನ್ನು ನಿಧಾನಗೊಳಿಸುತ್ತದೆ.

# B

**BACTERIA** (ಬ್ಯಾಕ್ಟೀರಿಯಾ): ಸೂಕ್ಷ್ಮಜೀವಿ; ಏಕಾಣುಜೀವಿ; ವಿಭಜನಾ ಸಾಮರ್ಥ್ಯವನ್ನು ಹೊಂದಿದ ಕೋಶ ಕೇಂದ್ರವನ್ನು ಹೊಂದಿರುವ ಮತ್ತು ಜೀವಂತ ಕೋಶದ ಹೊರಗಡೆಯೂ ವೃದ್ಧಿಸಬಲ್ಲ ಸಾಮರ್ಥ್ಯವನ್ನು ಹೊಂದಿರುವ, ಶಿಲೀಂದ್ರಗಳಿಗಿಂತ ದೊಡ್ಡದಾದ ಮತ್ತು ವೈರಸ್‌ಗಳಿಗಿಂತ ಚಿಕ್ಕದಾದ ಏಕಕೋಶೀಯ ಸೂಕ್ಷ್ಮಜೀವಿಗಳು.

ಎಲ್ಲ ಬ್ಯಾಕ್ಟೀರಿಯಾಗಳು ಅಪಾಯಕಾರಿಯಲ್ಲ, ಕೆಲವು ನಮಗೆ ಉಪಯುಕ್ತವೂ ಕೂಡ ಆಗಿವೆ. ಉದಾ :- ಕರುಳಿನಲ್ಲಿದ್ದು ಜೀರ್ಣಕ್ರಿಯೆಗೆ ಸಹಾಯ ಮಾಡುವ E.coli (ಇ.ಕೋಲೈ) ಹಾಲನ್ನು ಮೊಸರು ಮಾಡುವ ಬ್ಯಾಕ್ಟೀರಿಯಾಗಳು.

ರೋಗಕಾರಕ ಬ್ಯಾಕ್ಟೀರಿಯಾಗಳನ್ನು ಪೆಥೋಜೆನಿಕ್ (Pathogenic) ಎಂದು ಕರೆಯುತ್ತಾರೆ.

**BACTERIOLOGY** (ಬ್ಯಾಕ್ಟೀರಿಯಾಲಜಿ): ಏಕಾಣುಜೀವಿಶಾಸ್ತ್ರ; ಬ್ಯಾಕ್ಟೀರಿಯಾಗಳ ಉತ್ಪತ್ತಿ ವಿಧ ಮತ್ತು ಕ್ರಿಯೆಗಳ ಬಗ್ಗೆ ಅಧ್ಯಯನ ನಡೆಸುವ ವೈದ್ಯಕೀಯ ವಿಜ್ಞಾನದ ಶಾಖೆ.

**BALM** (ಬಾಮ್): ಲೇಪ; ಶಾಮಲೇಪ; ನೋವು ನಿವಾರಿಸುವಂತಹ ಮುಲಾಮು.

**BARBITURATE** (ಬಾರ್ಬಿಚುರೇಟ್): ನಿದ್ರಾಜನಕ ಮತ್ತು ಮೂರ್ಛೆ ಕಾಯಿಲೆಯನ್ನು ನಿಯಂತ್ರಿಸುವ ಔಷಧ (ಗಾರ್ಡಿನಾಲ್-ಫೀನೋ ಬಾರ್ಬಿಟೋನ್)

**BARIATRICS** (ಬೇರಿಯಾಟ್ರಿಕ್ಸ್): ಏರುತೂಕ ವೈದ್ಯಶಾಸ್ತ್ರ; ಬೊಜ್ಜಿನ ಕುರಿತಾದ ಅಧ್ಯಯನ ಮತ್ತು ಚಿಕಿತ್ಸೆ.

**BATTERED-CHILD SYNDROME** (ಬ್ಯಾಟರ್ಡ್ ಚೈಲ್ಡ್ ಸಿಂಡ್ರೋಮ್): ತಂದೆ-ತಾಯಿ, ಪೋಷಕರು/ಪಾಲಕರು, ಗುರುಗಳು ಅಥವಾ ನಂಬಿಕೆಯ

ಸ್ಥಾನದಲ್ಲಿರುವಂತಹ ಮತ್ತಾವುದೇ ವ್ಯಕ್ತಿಯಿಂದ ಮಗು ದೈಹಿಕ ಶಿಕ್ಷೆ-ಹಿಂಸೆ-ದುರುಪಯೋಗಕ್ಕೆ ಒಳಗಾಗುವುದು.

ದೈಹಿಕ ಹಾನಿಯ ಜೊತೆಗೆ ಮಗು, ಆಹಾರ ಅಥವಾ ಕಾಳಜಿಯಿಂದ ವಂಚಿತವಾಗಿರಬಹುದು ಮತ್ತು ದುರುಪಯೋಗದಿಂದಾಗಿ ಮಾನಸಿಕವಾಗಿಯೂ ಘಾಸಿಗೊಳಗಾಗಿರಬಹುದು.

**BED SORES** (ಬೆಡ್‌ಸೋರ್ಸ್): ಒತ್ತುಣ್ಣು; ಕುಂಟುಹುಣ್ಣು; ದೀರ್ಘ ಅವಧಿಯವರೆಗೆ ಹಾಸಿಗೆಯಲ್ಲಿ ಮಲಗಿದ ವ್ಯಕ್ತಿಯ ದೇಹದಲ್ಲಿ ಕಾಣಿಸಿಕೊಳ್ಳುವ ಹುಣ್ಣಿನಂತಹ ಗಾಯಗಳು.

ಚರ್ಮ ಮತ್ತು ಅದರ ಕೆಳಗಿರುವ ಅಂಗಾಂಶಕ್ಕೆ ರಕ್ತವನ್ನು ಒದಗಿಸುವ ಸಣ್ಣ ರಕ್ತನಾಳಗಳು ದೀರ್ಘ ಅವಧಿಯವರೆಗೆ ಒತ್ತಡಕ್ಕೊಳಪಟ್ಟಾಗ ಅವುಗಳಲ್ಲಿ ರಕ್ತ ಸಂಚಾರ ನಿಂತು ಹೋಗುತ್ತದೆ. ಆಗ ಅಂಗಾಂಶದ ಕೋಶಗಳು ಪೋಷಕಾಂಶದ ಕೊರತೆಯಿಂದಾಗಿ ಸಾವನ್ನಪ್ಪುವುದರಿಂದ ಈ ಸ್ಥಿತಿ ಉಂಟಾಗುತ್ತದೆ. ಹಾಸಿಗೆ ಹಿಡಿದ ವ್ಯಕ್ತಿಯನ್ನು ಅತ್ತಿತ್ತ ತಿರುಗಿಸಿ, ನೀರು ತುಂಬಿದ ಚೀಲದ ಮೇಲೆ ಮಲಗಿಸಿ, ಮಸಾಜ್ ಮಾಡಿ. ಬೆಡ್ ಸೋರ್ ಆಗದಂತೆ ನೋಡಿಕೊಳ್ಳಬೇಕು.

**BELL'S PALSY** (ಬೆಲ್ಸ್ ಪಾಲ್ಸಿ): ಮುಖದ ಒಂದು ಭಾಗದ ಸ್ವಲ್ಪ ಅಥವಾ ಸಂಪೂರ್ಣ ಪಾರ್ಶ್ವವಾಯು ಸ್ಥಿತಿ. ಮುಖದ ಮಾಂಸಖಂಡಗಳನ್ನು ನಿಯಂತ್ರಿಸುವ ನರದ ಉರಿಯೂತದಿಂದಾಗಿ ಈ ಸ್ಥಿತಿ ಉಂಟಾಗಬಹುದು. ರಾತ್ರಿ ಹೊತ್ತು ಹೊರಗಡೆ, ಕಿಟಕಿ ಬಳಿ, ರಾತ್ರಿ ಬಸ್‌ನಲ್ಲಿ ಪ್ರಯಾಣ ಬೆಲ್ಸ್‌ಪಾಲ್ಸಿಯನ್ನುಂಟು ಮಾಡಬಹುದು. ತತ್‌ಕ್ಷಣ ಸ್ಟೀರಾಯಿಡ್ಸ್, ಅಂಗಮರ್ದನ ಚಿಕಿತ್ಸೆ ಪರಿಣಾಮಕಾರಿ.

**BENDS** (ಬೆಂಡ್ಸ್): ಮುರಿಶೂಲೆ; ಗಾಳಿಗುಳ್ಳೆಶೂಲೆ; ರಕ್ತದಲ್ಲಿ ಉಂಟಾಗುವ ಸಾರಜನಕದ ವಾಯುಗುಳ್ಳೆಗಳಿಂದಾಗಿ ಅಂಗಾಂಶಗಳಿಗೆ ರಕ್ತ ಸಂಚಾರ ನಿಂತು ಹೋಗುವುದರಿಂದ ಉಂಟಾಗುವ ನೋವುಪೂರಿತ ಸ್ಥಿತಿ.

ಅಧಿಕ ಒತ್ತಡದ ಪ್ರದೇಶಗಳಿಂದ ಕಡಿಮೆ ಒತ್ತಡದ ಪ್ರದೇಶಗಳಿಗೆ ಇದ್ದಕ್ಕಿದ್ದಂತೆ ವರ್ಗಾವಣೆಯಾಗುವ ವ್ಯಕ್ತಿಗಳಲ್ಲಿ ಈ ತೊಂದರೆ ಕಾಣಿಸಿಕೊಳ್ಳುತ್ತದೆ.

ವಾತಾವರಣದಲ್ಲಿರುವ ಸಾರಜನಕ ರಕ್ತದಲ್ಲಿ ಕರಗುತ್ತದೆ. ಶ್ವಾಸಕೋಶದಿಂದ ರಕ್ತದಲ್ಲಿ ಕರಗುವ ಸಾರಜನಕದ ಪ್ರಮಾಣ ಒತ್ತಡ ಹೆಚ್ಚಾದಂತೆ ಹೆಚ್ಚಾಗುತ್ತಿರುತ್ತದೆ. ಅದರಂತೆಯೇ ಒತ್ತಡ ಕಡಿಮೆಯಾದಂತೆ ಸಾರಜನಕದ ಕರಗುವಿಕೆಯ ಪ್ರಮಾಣವೂ ಕಡಿಮೆಯಾಗುತ್ತಿರುತ್ತದೆ. ಕಡಿಮೆ ಒತ್ತಡದಲ್ಲಿ

ಮೊದಲೇ ರಕ್ತದಲ್ಲಿ ಕರಗಿದ್ದ ಸಾರಜನಕ ವಾಪಸ್ಸು ಹೊರಬಂದು ಶ್ವಾಸಕೋಶವನ್ನು ಸೇರುತ್ತದೆ ಮತ್ತು ಈ ಪ್ರಕ್ರಿಯೆ ತುಂಬಾ ನಿಧಾನವಾದದ್ದು. ವ್ಯಕ್ತಿ ಕಡಿಮೆ ಸಮಯದ ಅವಧಿಯಲ್ಲೇ ಈ ರೀತಿಯ ಒತ್ತಡದ ಏರುಪೇರಿಗೆ ಒಳಗಾದಾಗ ಸಾರಜನಕದ ವಾಯುಗುಳ್ಳೆಗಳು ರಕ್ತದಲ್ಲೇ ಉಳಿದು ನೋವನ್ನು ಉಂಟುಮಾಡುತ್ತವೆ.

**BENIGN** (ಬಿನೈನ್): ಸಾಧು; ಗುಣವಾಗುವ; ಮ್ಯಾಲಿಗ್ನೆಂಟ್ (ತೀವ್ರತೆರನಾದ) ಅಲ್ಲದ ಗಡ್ಡೆಗಳನ್ನು ಬಿನೈನ್ ಎನ್ನುತ್ತಾರೆ. ಅಂದರೆ, ತುಂಬಾ ಚಿಕ್ಕದಾದ ನಿಧಾನವಾಗಿ ಬೆಳೆಯುವ ಅಥವಾ ಆ ಸಂದರ್ಭದಲ್ಲಿ ದೇಹಕ್ಕೆ ಮಾರಕವಲ್ಲದ ಗಡ್ಡೆ ಎಂದರ್ಥ. ಬಿನೈನ್‌ಗೆಡ್ಡೆಗಳು, ಕ್ಯಾನ್ಸರ್ ಗೆಡ್ಡೆಗಳಲ್ಲ.

**BERIBERI** (ಬೆರಿಬೆರಿ): ಥೈಯಮಿನ್ ಜೀವಸತ್ವ (ವಿಟಮಿನ್ 'ಬಿ') ಜೀವಸತ್ವದ ಕೊರತೆಯಿಂದ ಉಂಟಾಗುವ ಒಂದು ರೋಗ.

ರಕ್ತ ಸಂಚಾರ ಮತ್ತು ನರವ್ಯೂಹ ವ್ಯವಸ್ಥೆಯನ್ನು ಇದು ಘಾಸಿಗೊಳಿಸ-ಬಹುದಾಗಿದ್ದು, ತೀವ್ರವಾದ ಸ್ಥಿತಿಯಲ್ಲಿ ಹೃದಯಾಘಾತವನ್ನು ಉಂಟು ಮಾಡಬಹುದು.

**BILE** (ಬೈಲ್): ಪಿತ್ತರಸ; ಜೀರ್ಣಕ್ರಿಯೆಗೆ ಅನುಕೂಲವಾಗಲು ಯಕೃತ್ (Liver) ನಿಂದ ಬಿಡುಗಡೆಯಾಗುವ ಹಳದಿ ಬಣ್ಣದ ದ್ರವ.

ಕರುಳಿನಲ್ಲಿ ಕಾರ್ಯಪ್ರವೃತ್ತವಾಗುವ ಇದು ಆಹಾರದಲ್ಲಿರುವ ಕೊಬ್ಬಿನ ಮೇಲೆ ಕಾರ್ಯಪ್ರವೃತ್ತವಾಗಿ, ಸಣ್ಣಕರುಳಿನ ಪೊರೆಯ ಮೂಲಕ ಹಾದು ರಕ್ತವನ್ನು ಸೇರಬಲ್ಲಂತಹ ಸಣ್ಣಕಣಗಳನ್ನಾಗಿ ಮಾಡುತ್ತದೆ.

Bilepigments ಪಿತ್ತರಸದಲ್ಲಿ ಬೈಲ್‌ಪಿಗ್‌ಮೆಂಟ್‌ಗಳು ಹೆಚ್ಚಾದರೆ, ಚರ್ಮ ಮತ್ತು ಕಣ್ಣು ಹಳದಿ ಬಣ್ಣಕ್ಕೆ ತಿರುಗುವಂತಹ ಕಾಮಾಲೆ (ಜಾಂಡೀಸ್) ಉಂಟಾಗುತ್ತದೆ. ವೈರಸ್ ಸೋಂಕು ಇದಕ್ಕೆ ಸಾಮಾನ್ಯ ಕಾರಣ.

**BILIOUS** (ಬಿಲೀಯಸ್): ಬೈಲ್ ಅನ್ನು ಅಧಿಕವಾಗಿ ಉತ್ಪಾದಿಸುವಂತಹ ಯಕೃತ್ತಿನ ತೊಂದರೆ.

**BIO-FEED-BACK** (ಬಯೋಫೀಡ್‌ಬ್ಯಾಕ್): ದೇಹದ ಕಾರ್ಯಚಟುವಟಿಕೆಗಳ ಬಗ್ಗೆ ಅರಿವು; ಅನೈಚ್ಛಿಕ ದೇಹದ ಕ್ರಿಯೆಗಳ ಬಗ್ಗೆ ನಮಗೆ ಎಚ್ಚರಿಕೆಯನ್ನು ನೀಡಿ, ಅವುಗಳನ್ನು ನಿಯಂತ್ರಿಸುವಂತೆ ಮಾಡುವ ಯಾವುದೇ ವಿಧಾನಗಳು.

**BIOLOGIC, BIOLOGICAL** (ಬಯೋಲಾಜಿಕ್, ಬಯೋಲಾಜಿಕಲ್): ಜೀವನ ಮತ್ತು ಜೀವಂತ ಪ್ರಾಣಿಗಳ ಕ್ರಿಯಾವಿಧಾನಕ್ಕೆ ಸಂಬಂಧಿಸಿದ.

**BIOLOGY** (ಬಯಾಲಜಿ): ಜೀವಶಾಸ್ತ್ರ; ಜೀವಿಗಳ ಬಗ್ಗೆ ಅಧ್ಯಯನ ನಡೆಸುವ ವಿಜ್ಞಾನ.

**BIOPSY** (ಬಯಾಪ್ಸಿ): ಜೀವುಂಡಿಗೆ, ಚೂರುಂಡಿಗೆ; ಪರೀಕ್ಷೆ ಮತ್ತು ರೋಗ ನಿರ್ಧಾರದ ಕಾರಣಕ್ಕಾಗಿ ಅಂಗಾಂಶದ ಸ್ವಲ್ಪ ಭಾಗವನ್ನು ತೆಗೆದು- ಕೊಳ್ಳುವುದು ಮತ್ತು ಪರೀಕ್ಷಿಸುವುದು.

**BIORHYTHM** (ಬಯೋರಿದಂ): ಜೀವಿತಾಳಗತಿ; ಸಮಯಕ್ಕನುಗುಣವಾಗಿ ದೇಹದ ಕ್ರಿಯೆಗಳಲ್ಲಿ ಕಂಡುಬರುವ ಒಂದು ನಿಗದಿತ ರೀತಿಯ ಬದಲಾವಣೆಗಳು.

**BIRTH DEFECT** (ಬರ್ಥ್ ಡಿಫೆಕ್ಟ್): ಆಜನ್ಮ ನ್ಯೂನತೆ; ಹುಟ್ಟುವಾಗಲೆ ಇರುವ ದೇಹದ ನ್ಯೂನತೆಗಳು.

ಈ ನ್ಯೂನತೆ ಅನುವಂಶಿಕವಾಗಿರಬಹುದು ಅಥವಾ ಗರ್ಭಧಾರಣೆಯ ಅವಧಿ ಅಥವಾ ಪ್ರಸವ ಸಮಯದಲ್ಲಿ ಉಂಟಾಗಿದ್ದಿರಬಹುದು.

**BLEEDER** (ಬ್ಲೀಡರ್): ಕುಸುಮರೋಗ, ರಕ್ತಸುರುಕ; ತುಂಬಾ ಚಿಕ್ಕದಾದ ಗಾಯಗಳಿಂದಲೂ ಕೂಡ ಅಧಿಕ ರಕ್ತಸ್ರಾವವಾಗುವ ವ್ಯಕ್ತಿ.

ಹಿಮೋಫಿಲಿಯಾ ಮತ್ತು ಕೆಲವೊಂದು ಔಷಧಗಳ ಸೇವನೆಯ ಅಡ್ಡಪರಿಣಾಮದಂತಹ ಸಂದರ್ಭದಲ್ಲಿ ಸಾಮಾನ್ಯ ರಕ್ತ ಹೆಪ್ಪುಗಟ್ಟುವಿಕೆ ಕ್ರಿಯೆ ನಡೆಯದೆ ವಿಪರೀತ ರಕ್ತಸ್ರಾವವಾಗುತ್ತದೆ.

**BLISTER** (ಬ್ಲಿಸ್ಟರ್): ಬೊಬ್ಬೆ; ಹೊಪ್ಪಳೆ; ನೀರ್ಗುಳ್ಳೆ; ಚರ್ಮದ ಹೊರ ಪದರದ ಕೆಳಗೆ, ರಕ್ತ ಅಥವಾ ಸೀರಮ್‌ನ ದ್ರವಗಳು ಶೇಖರಣೆಗೊಳ್ಳುವುದು.

ಇದು ಸಾಮಾನ್ಯವಾಗಿ ಎರಡು ಮೇಲ್ಮೈಗಳ ತಿಕ್ಕಾಟದಿಂದ ಉಂಟಾಗಬಹುದು. ಉದಾ:– ಚಪ್ಪಲಿ ಅಥವಾ ಷೂಗಳಿಂದಾಗಿ ಪಾದದಲ್ಲಿ ಉಂಟಾಗುವ ಬೊಬ್ಬೆ. ಕೊಡಲಿ/ಗುದ್ದಲಿ ಕೆಲಸ ಮಾಡುವಾಗ ಅಂಗೈಯಲ್ಲಿ ಉಂಟಾಗುವ ಬೊಬ್ಬೆ.

**BLOOD** (ಬ್ಲಡ್): ರಕ್ತ, ನೆತ್ತರು; ರಕ್ತನಾಳಗಳ ಮೂಲಕ ದೇಹದ ತುಂಬ ಸಂಚರಿಸುವ ದ್ರಾವಣ. ಜೀವದ್ರವ.

ಇದರಲ್ಲಿ ಪ್ಲಾಸ್ಮಾ, ಕೆಂಪುರಕ್ತಕಣ, ಬಿಳಿರಕ್ತಕಣ ಮತ್ತು ಪ್ಲೇಟ್‌ಲೆಟ್‌ಗಳು

ಇರುತ್ತವೆ. ಕೆಂಪುರಕ್ತಕಣ ರಕ್ತಕ್ಕೆ ಕೆಂಪು ಬಣ್ಣವನ್ನು ಕೊಡುವುದರ ಜೊತೆಗೆ, ಅಂಗಾಂಶಗಳಿಗೆ ಆಮ್ಲಜನಕವನ್ನು ಸರಬರಾಜು ಮಾಡುತ್ತವೆ. ಬಿಳಿರಕ್ತಕಣಗಳು ಸೋಂಕಿನ ವಿರುದ್ಧ ಹೋರಾಡಲು ದೇಹಕ್ಕೆ ಸಹಾಯ ಮಾಡುತ್ತವೆ. ಪ್ಲೇಟ್‌ಲೆಟ್‌ಗಳು ರಕ್ತಸ್ರಾವದ ಸಮಯದಲ್ಲಿ ರಕ್ತ ಹೆಪ್ಪುಗಟ್ಟಲು ಸಹಾಯ ಮಾಡುತ್ತವೆ.

**BLOOD CLOT** (ಬ್ಲಡ್ ಕ್ಲಾಟ್): ರಕ್ತ ಗರಣೆ; ರಕ್ತಹೆಪ್ಪುಗಟ್ಟುವುದು; ರಕ್ತನಾಳಗಳು ಗಾಯಗೊಂಡು ರಕ್ತಸ್ರಾವವಾಗುತ್ತಿರುವ ಸಂದರ್ಭದಲ್ಲಿ ರಕ್ತದ ಹರಿವನ್ನು ತಡೆಯುವುದಕ್ಕಾಗಿ ನೈಸರ್ಗಿಕವಾಗಿ ನಿರ್ಮಾಣವಾಗುವಂತಹ ಅಂಟಿನಂತಹ ರಕ್ತಗರಣೆ.

ರಕ್ತನಾಳಗಳು ಗಾಯಗೊಂಡಂತಹ ಸಂದರ್ಭದಲ್ಲಿ ರಕ್ತವು ಬಾಹ್ಯ ಅಂಗಾಂಶ ಅಥವಾ ವಸ್ತುಗಳೊಂದಿಗೆ ಸಂಪರ್ಕ ಹೊಂದುವುದರಿಂದ ದೇಹದ ರಕ್ಷಣಾ ವ್ಯವಸ್ಥೆಯು ಕಾರ್ಯಪ್ರವೃತ್ತವಾಗಿ ಪ್ಲೇಟ್‌ಲೆಟ್‌ಗಳು ಒಂದು ರೀತಿಯ ರಾಸಾಯನಿಕವನ್ನು ಬಿಡುಗಡೆ ಮಾಡುತ್ತವೆ. ಅವುಗಳಿಂದಾಗಿ ಫೋಪ್ರೈಬ್ರಿನೋಜಿನ್ ಸರಪಣಿಯಂತಹ ರಚನೆ ಉಂಟಾಗುತ್ತದೆ. ಇಂತಹ ಬಲೆಯಂತಹ ರಚನೆಯೊಳಗೆ ಪ್ಲೇಟ್‌ಲೆಟ್‌ಗಳೂ ಸೇರಿದಂತೆ ಕೆಂಪು ಮತ್ತು ಬಿಳಿ ರಕ್ತಕಣಗಳು ಬಂಧಿಯಾಗುವುದರಿಂದ ಬ್ಲಡ್‌ಕ್ಲಾಟ್ ಉಂಟಾಗುತ್ತದೆ.

**BLOOD VESSEL** (ಬ್ಲಡ್ ವೆಸೆಲ್): ರಕ್ತನಾಳ; ರಕ್ತವನ್ನು ಸರಬರಾಜು ಮಾಡುವಂತಹ ಯಾವುದೇ ರೀತಿಯ ಸಂಪರ್ಕ ನಾಳಗಳು. ಉದಾ:- ಶುದ್ಧ ರಕ್ತನಾಳ, ಅಶುದ್ಧ ರಕ್ತನಾಳ ಮತ್ತು ಸೂಕ್ಷ್ಮ ರಕ್ತನಾಳ (ಕ್ಯಾಪಿಲರೀಸ್). ಕೈಗಳ ಮೇಲೆ, ಕೆಲವರ ಕಾಲುಗಳ ಮೇಲೆ ಅಶುದ್ಧ ರಕ್ತನಾಳಗಳನ್ನು ಕಾಣಬಹುದು.

ಆಮ್ಲಜನಕವನ್ನು ಹೊಂದಿದ ಶುದ್ಧ ರಕ್ತವನ್ನು, ಮುಖ್ಯ ಅಭಿಧಮನಿಯು (ಅಯೋರ್ಟ) ಹೃದಯದಿಂದ ಕೊಂಡೊಯ್ಯುತ್ತದೆ. ಮುಂದೆ ಇದು ಹಲವು ಭಾಗಗಳಾಗಿ ವಿಭಜನೆ ಹೊಂದಿ ದೇಹದ ಎಲ್ಲ ಅಂಗಾಂಶಗಳಿಗೂ ರಕ್ತ ಸರಬರಾಜು ಮಾಡುತ್ತವೆ. ಇವು ಮತ್ತಷ್ಟೂ ಸೂಕ್ಷ್ಮನಾಳಗಳಾಗಿ ವಿಭಜನೆಗೊಂಡು ಕ್ಯಾಪಿಲರಿ (ಸೂಕ್ಷ್ಮರಕ್ತನಾಳ)ಗಳಾಗಿ ವಿಭಾಗವಾಗುತ್ತವೆ. ದೇಹದ ಚಯಾಪಚಯ ಕ್ರಿಯೆಯ ಮುಖ್ಯ ತ್ಯಾಜ್ಯವಾದ ಇಂಗಾಲದ ಡೈಆಕ್ಸೈಡನ್ನು ಹೊಂದಿರುವ ಅಶುದ್ಧ ರಕ್ತವು ಸೂಕ್ಷ್ಮ ರಕ್ತನಾಳಗಳಿಂದ ಒಗ್ಗೂಡಿ ಉಂಟಾದ ಅಶುದ್ಧ ರಕ್ತನಾಳಗಳ ಮೂಲಕ ಹೃದಯದೆಡೆಗೆ ಸಾಗಿ, ಅಪಧಮನಿಯ ಮೂಲಕ ಹೃದಯವನ್ನು ಪ್ರವೇಶಿಸುತ್ತದೆ.

**BOIL** (ಬಾಯಿಲ್): ಕೀವುಗುಳ್ಳೆ, ಕಿಗ್ಗುರು, ಕುರು; ಬ್ಯಾಕ್ಟೀರಿಯಾದ ಸೋಂಕಿನಿಂದಾಗಿ ಉಂಟಾಗುವ ಚರ್ಮದ ನೋವು ಮತ್ತು ಕೀವು ಪೂರಿತ ಉರಿಯೂತ.

ಬ್ಯಾಕ್ಟೀರಿಯಾಗಳು ಕೂದಲು ರಂಧ್ರದ ಮೂಲಕ ಚರ್ಮವನ್ನು ಪ್ರವೇಶಿಸಿ ನಂಜುಕಾರಕ (ಟಾಕ್ಸಿನ್)ಗಳನ್ನು ಬಿಡುಗಡೆ ಮಾಡಿ ಸೋಂಕನ್ನು ಉಂಟುಮಾಡುವಂತಹ ಸಂದರ್ಭದಲ್ಲಿ, ಅದನ್ನು ತಡೆಗಟ್ಟುವುದಕ್ಕಾಗಿ ಬಿಳಿರಕ್ತಕಣಗಳು ಈ ಬ್ಯಾಕ್ಟೀರಿಯಾಗಳ ಮೇಲೆ ಆಕ್ರಮಣ ಮಾಡಿ ಸೋಂಕನ್ನು ತಡೆಗಟ್ಟಲು ಪ್ರಯತ್ನಿಸುತ್ತವೆ. ಸತ್ತ ಈ ಬ್ಯಾಕ್ಟೀರಿಯಾಗಳು ಮತ್ತು ಬಿಳಿರಕ್ತಕಣಗಳು ಕೂದಲು ರಂಧ್ರದಲ್ಲಿ ಸಿಲುಕಿ ಹಾಕಿಕೊಳ್ಳುವುದರಿಂದ ಕೀವು ಉಂಟಾಗಿ ಚರ್ಮದಲ್ಲಿ ಈ ರೀತಿಯ ಬಾಯಿಲ್ (ಬೊಕ್ಕೆ)ಗಳು ಕಾಣಿಸಿಕೊಳ್ಳುತ್ತವೆ.

ಈ ರೀತಿಯ ಸುಮಾರಷ್ಟು ಬೊಕ್ಕೆಗಳ ಗುಂಪು ಚರ್ಮದ ಕೆಳ ಪದರದಲ್ಲಿ ಒಮ್ಮೆಲೇ ಕಾಣಿಸಿಕೊಂಡರೆ ಆ ಸ್ಥಿತಿಯನ್ನು Carbuncle (ಕ್ಯಾರ್ಬಂಕಲ್) ಎನ್ನುತ್ತಾರೆ.

**BOTULISM** (ಬಾಟ್ಯುಲಿಸಂ): ಊರು ಬಾಡುಬೇನೆ; ಸರಿಯಾಗಿ ಬೇಯಿಸದ ಅಥವಾ ಸರಿಯಾಗಿ ಸಂಗ್ರಹಿಸದ ಆಹಾರದಲ್ಲಿರುವ ಬ್ಯಾಕ್ಟೀರಿಯಾಗಳಿಂದ ಉಂಟಾಗುವ ವಿಷಾಹಾರ ಸ್ಥಿತಿ.

**BREAST BONE** (ಬ್ರೆಸ್ಟ್ ಬೋನ್): ಎದೆಯ ಮೂಳೆ; ಮೊಲೆಯ ಮೂಳೆ; ಕುತ್ತಿಗೆಯ ಮೂಳೆಯಿಂದ ಕೆಳಗೆ ಚಲಿಸಿ, ಎದೆಯ ಮುಂಭಾಗದಲ್ಲಿರುವ ಮತ್ತು ಪಕ್ಕೆಲುಬುಗಳು ಅಂಟಿಕೊಂಡಿರುವ ಗಟ್ಟಿ ಮೂಳೆ : Sternum.

**BREAST CANCER** (ಬ್ರೆಸ್ಟ್ ಕ್ಯಾನ್ಸರ್): ಸ್ತನ ಕ್ಯಾನ್ಸರ್; ಮೊಲೆಯಲ್ಲಿ ಕಾಣಿಸಿಕೊಳ್ಳುವ, ತೀವ್ರ ತೆರನಾದ ಬೆಳವಣಿಗೆಯನ್ನು ಹೊಂದಿರುವ ಗಡ್ಡೆ. ಇದು ಸಾಮಾನ್ಯವಾಗಿ 40 ವರ್ಷಕ್ಕಿಂತ ಹೆಚ್ಚಿಗೆ ವಯಸ್ಸಾದ ಹೆಂಗಸರಲ್ಲಿ ಕಾಣಿಸಿಕೊಳ್ಳುತ್ತದೆ.

**BRONCHITIS** (ಬ್ರೋಂಕೈಟಿಸ್): ಪಂಗುಸಿರ್ನಾಳುರಿತ, ಒಣಗೆಮ್ಮು ಉರಿತ. ಶ್ವಾಸಕೋಶದ ಶ್ವಾಸನಾಳಗಳ ಉರಿಯೂತ;

ಶ್ವಾಸನಾಳ ಮತ್ತು ಶ್ವಾಸಕೋಶವನ್ನು ಸಂಪರ್ಕಿಸುವ ಶ್ವಾಸಕೋಶದ ಶ್ವಾಸನಾಳ (ಬ್ರೋಂಕೈ)ಗಳ ಉರಿಯೂತ ಉಂಟಾದಾಗ, ಅವುಗಳ ಮ್ಯೂಕಸ್ ಪದರದಲ್ಲಿರುವ ಕೋಶಗಳು ತಮ್ಮ ಮ್ಯೂಕಸ್ ಉತ್ಪಾದನೆಯನ್ನು ಹೆಚ್ಚಿಗೆ

ಮಾಡುತ್ತವೆ. ಈ ಕಫವನ್ನು ಹೊರ ಹಾಕುವುದಕ್ಕಾಗಿ ಕೆಮ್ಮು ಹೆಚ್ಚಾಗುತ್ತದೆ. ಈ ಸ್ಥಿತಿ ಉಲ್ಬಣಗೊಂಡರೆ ಶ್ವಾಸಕೋಶಕ್ಕೆ ಸೋಂಕು ಹರಡಿ ಬ್ರೋಂಕೋ ನ್ಯುಮೋನಿಯಾವನ್ನು ಉಂಟುಮಾಡುತ್ತದೆ.

**BRUCELLOSIS** (ಬ್ರುಸೆಲ್ಲೋಸಿಸ್): ಬ್ರೂಸೆಲ್ಲ ಬೇನೆ, ಮಾಲ್ಟಜ್ವರ, ದನಕರು, ಹಂದಿ ಅಥವಾ ಮೇಕೆಗಳಿಂದ ಹರಡುವ ಬ್ರುಸೆಲ್ಲಾ ಎಂಬ ಬ್ಯಾಕ್ಟೀರಿಯಾದಿಂದ ಉಂಟಾಗುವ ಸೋಂಕು.

ಇದನ್ನು Undulant Fever (ಅಂಡ್ಯುಲೆಂಟ್ ಫೀವರ್) ಅಥವಾ Malta Fever (ಮಾಲ್ಟಾ ಫೀವರ್) ಎಂತಲೂ ಕರೆಯುತ್ತಾರೆ. ಜ್ವರ, ತಲೆನೋವು, ನಡುಕ ಮತ್ತು ಇತರೆ ಶೀತಜ್ವರದ ಲಕ್ಷಣಗಳನ್ನು ಇದು ಹೊಂದಿರುತ್ತದೆ. ಪ್ರಾಣಿಗಳ ಸಂಪರ್ಕದಲ್ಲಿರುವ ಅಥವಾ ಪ್ರಾಣಿ ಮಾಂಸಗಳ ವ್ಯಾಪಾರದಲ್ಲಿ ತೊಡಗಿರುವವರಲ್ಲಿ ಈ ರೋಗ ಸಾಮಾನ್ಯವಾಗಿ ಕಾಣಿಸಿಕೊಳ್ಳಬಹುದಾದರೂ ಕೆಲವೊಮ್ಮೆ ಪಾಶ್ಚರೀಕರಿಸದ ಹಾಲಿನಿಂದಲೂ ಉಂಟಾಗುತ್ತದೆ.

**BUBONIC PLAGUE** (ಬುಬೋನಿಕ್ ಪ್ಲೇಗ್): ಗಡ್ಡೆಯ ಪ್ಲೇಗ್; ಸೋಂಕಿತ ಇಲಿ ಚಿಗಟಗಳ ಕಚ್ಚುವಿಕೆಯಿಂದ ಉಂಟಾಗುವ ಅಗಾಧ ಪ್ರಮಾಣದ ಸಾಂಕ್ರಾಮಿಕ ರೋಗ.

ಈ ರೋಗದಲ್ಲಿ, ಕಂಕುಳು ಅಥವಾ ತೊಡೆಸಂದಿಯಲ್ಲಿ ಕಾಣಿಸಿಕೊಳ್ಳುವ ದುಗ್ಧರಸಗ್ರಂಥಿಗಳ ಊದುವಿಕೆ (Bubo)ಯಿಂದಾಗಿ ಇದಕ್ಕೆ ಬುಬೋನಿಕ್ ಎಂಬ ಹೆಸರು ಬಂದಿದೆ. ಹಾಗೆಯೇ, ಚರ್ಮದೊಳಗೇ ಉಂಟಾಗುವ ರಕ್ತಸ್ರಾವದಿಂದಾಗಿ ಕಾಣಿಸಿಕೊಳ್ಳುವ ಚರ್ಮದ ಕಪ್ಪು ಕಲೆಗಳಂತಹ ಈ ರೋಗದ ವಿಶೇಷ ಲಕ್ಷಣದಿಂದಾಗಿ ಇದನ್ನು Black Death (ಬ್ಲ್ಯಾಕ್ ಡೆಥ್) ಎಂತಲೂ ಕರೆಯುತ್ತಾರೆ.

**BULIMIA** (ಬುಲೀಮಿಯಾ): ಹಸಿವು ಹೆಚ್ಚಾಗುವ ರೋಗ, ಇತಿಮಿತಿ ಇಲ್ಲದೆ ಆಹಾರವನ್ನು ಸೇವಿಸುತ್ತಾನೆ. ವಿಪರೀತ ತಿಂದು, ಬೊಜ್ಜು ಬರುತ್ತದೆ. ತಿನ್ನದೇ ಇರಲು ವ್ಯಕ್ತಿಗೆ ಆಗುವುದೇ ಇಲ್ಲ.

**BUNION** (ಬುನಿಯನ್): ಬೀಗು ಕೀಲೋಲು; ಕಾಲ ಹೆಬ್ಬೆರಳಿನ ಮೊದಲನೆ ಕೀಲಿನಲ್ಲಿರುವ ಬುರ್ಸಾ (Bursa)ದ ಉರಿಯೂತ, ಬಿಗಿಯಾದ ಶೂಗಳನ್ನು ಹಾಕುವುದರಿಂದಾಗಿ ಹೆಬ್ಬೆರಳು ಸ್ವಾಭಾವಿಕ ಸ್ಥಳದಿಂದ ಜರುಗಿ, ಪಕ್ಕದ ಬೆರಳಿನ ಮೇಲೆ ಒತ್ತಡವನ್ನು ಹಾಕುವುದರಿಂದಾಗಿ ಈ ಸ್ಥಿತಿ ಉಂಟಾಗುತ್ತದೆ.

**BURSA** (ಬುರ್ಸಾ): ದಿಂಚೀಲ; ಮೂಳೆಯಂತಹ ದೇಹದ ಚಲನಾ ಭಾಗಗಳನ್ನು ಒಟ್ಟಾಗಿ ಸೇರಿಸುವ ಕೀಲುಚೀಲ. ಇದರಲ್ಲಿ ಕೀಲುಗಳ ನಡುವೆ

ಉಂಟಾಗಬಹುದಾದಂತಹ ಘರ್ಷಣೆಯನ್ನು ತಡೆಯಲು ಜಾರುದ್ರವ (Lubricating Gel) ಇರುತ್ತದೆ.

**BYPASS** (ಬೈ-ಪಾಸ್): ಅಡ್ಡದಾರಿ; ಬಳಸು ದಾರಿ; ರಕ್ತದ ಹರಿವಿಗೆ ಅಡ್ಡಿಯನ್ನುಂಟುಮಾಡುವ ರಕ್ತನಾಳಗಳ ಗರಣೆ ಇರುವ ಸ್ಥಳದಲ್ಲಿ, ದೇಹದ ಇನ್ನೊಂದು ಭಾಗದಿಂದ ರಕ್ತನಾಳ ತೆಗೆದು, ಕಟ್ಟಿಕೊಂಡ ನಾಳಕ್ಕೆ ಸೇರಿಸಿ, ರಕ್ತಸಂಚಾರ ಸುಗಮವಾಗಿ ನಡೆಯುವಂತೆ ಮಾಡುವ ಶಸ್ತ್ರಚಿಕಿತ್ಸೆ.

# C

**CACHEXIA** (ಕ್ಯಚೆಕ್ಸಿಯಾ): ದೇಹ ಸೊರಗುವುದು, ಅತಿ ತೆಳ್ಳಗಾಗುವುದು; ದೀರ್ಘಕಾಲದ ಬೇನೆಯಿಂದಾಗಿ ಉಂಟಾದ ದೇಹದ ಅಶಕ್ತ, ಕೃಶ ಸ್ಥಿತಿ.

**CALCIFICATION** (ಕ್ಯಾಲ್ಸಿಫಿಕೇಷನ್): ಸುಣ್ಣಗೂಡಿಕೆ; ದೇಹದ ಅಂಗಾಂಶಗಳಲ್ಲಿ ಕ್ಯಾಲ್ಸಿಯಂ ಲವಣ ವಿಪರೀತವಾಗಿ ಶೇಖರಣೆಗೊಳ್ಳುವುದು.

**CALCULUS** (ಕ್ಯಾಲ್ಕುಲಸ್): ಕಲ್ಲು; ಮೂತ್ರಪಿಂಡ, ಪಿತ್ತಕೋಶ ಅಥವಾ ದೇಹದ ಇತರೆ ಭಾಗಗಳಲ್ಲಿ ಉಂಟಾಗುವ ಕಲ್ಲಿನಂತಹ ಘನೀಕೃತ ರಾಶಿ.

**CALLUS** (ಕ್ಯಾಲಸ್): ಗೋಟ್ಮೊಳೆ, ಗಡಸುಗಂತಿ; ದಪ್ಪವಾದ ಚರ್ಮದ ಬೆಳವಣಿಗೆ : Callosity.

ಅತಿಯಾದ ಘರ್ಷಣೆ ಮತ್ತು ಒತ್ತಡಕ್ಕೆ ಒಳಗಾಗುವಂತಹ ಚರ್ಮವು ರಕ್ಷಣೆಗಾಗಿ ಈ ರೀತಿಯಾಗಿ ದಪ್ಪ ಮತ್ತು ಗಡಸು ರಚನೆಯನ್ನು ಹೊಂದುತ್ತದೆ.

**CANCER** (ಕ್ಯಾನ್ಸರ್): ಕ್ಯಾನ್ಸರ್, ಅರ್ಬುದರೋಗ; ಸಾಮಾನ್ಯವಲ್ಲದ, ನಿಯಂತ್ರಿಸಲಾಗದ ಅಂಗಾಂಶಗಳ ಬೆಳವಣಿಗೆಯಿಂದ ಉಂಟಾಗುವ ಅಪಾಯಕಾರಿ ಗಡ್ಡೆ/ಹುಣ್ಣು.

ಕ್ಯಾನ್ಸರ್ ಕೋಶಗಳು ತಾವು ಉತ್ಪತ್ತಿಯಾದ ಅಂಗದಿಂದ ಹೊರಬಂದು ರಕ್ತ ಅಥವಾ ದುಗ್ಧರಸದ ಮೂಲಕ ದೇಹದ ಇತರೆ ಭಾಗಗಳಿಗೂ ಹರಡುವಂತಹ ಸಾಮರ್ಥ್ಯವನ್ನು ಹೊಂದಿವೆ.

**CANDIDA** (ಕ್ಯಾಂಡಿಡ): ಕಾಂತಿಕ; ದೇಹದ ಸ್ವಾಭಾವಿಕ ಶಿಲೀಂಧ್ರ (ಫಂಗಸ್)ಗಳ

ಅಸಮತೋಲನದಿಂದಾಗಿ ಬಾಯಿ, ಚರ್ಮ, ಕರುಳು ಅಥವಾ ಯೋನಿಯಲ್ಲಿ ಉಂಟಾಗುವ ಶಿಲೀಂದ್ರಗಳ ಸೋಂಕು.

**CANKER SORE** (ಕ್ಯಾಂಕರ್ ಸೋರ್): ನೂಲೆ, ಬಾಯಿಹುಣ್ಣು, ತುಟಿಹುಣ್ಣು; ಮುಖ್ಯವಾಗಿ ತುಟಿ ಅಥವಾ ಬಾಯಿಯ ಒಳಪದರಗಳಲ್ಲಿ ಕಾಣಿಸಿಕೊಳ್ಳುವ ಹುಣ್ಣು ಪೂರಿತ ಗಾಯ.

ಜ್ವರ, ಅಲರ್ಜಿ ಅಥವಾ ಬಾಯಿಗೆ ಉಂಟಾಗುವ ಗಾಯಗಳಿಂದಾಗಿ ಇವು ಕಾಣಿಸಿಕೊಳ್ಳಬಹುದಾಗಿದೆ.

**CAPILLARIES** (ಕ್ಯಾಪಿಲರೀಸ್): ಲೋಮನಾಳಗಳು, ನವಿರ್ನಾಳಗಳು; ಶುದ್ಧ ರಕ್ತನಾಳ ಮತ್ತು ಅಶುದ್ಧ ರಕ್ತನಾಳಗಳನ್ನು ಬೆಸೆಯುವ ಅತಿ ಸೂಕ್ಷ್ಮ ರಕ್ತನಾಳಗಳು.

**CARBOHYDRATE** (ಕಾರ್ಬೋಹೈಡ್ರೇಟ್): ಶರ್ಕರಪಿಷ್ಟ; ಚಯಾಪಚಯ ಕ್ರಿಯೆಯಿಂದಾಗಿ ಶಾಖ ಮತ್ತು ಶಕ್ತಿಯನ್ನು ಬಿಡುಗಡೆ ಮಾಡುವಂತಹ ಸ್ವಾಭಾವಿಕ ಆಹಾರ ಘಟಕಗಳು. (ಅಕ್ಕಿ, ಗೋಧಿ, ರಾಗಿ, ಆಲೂಗೆಡ್ಡೆ ಇತ್ಯಾದಿ)

**CARBUNCLE** (ಕಾರ್ಬಂಕಲ್): ಹಕ್ಕಳುಣ್ಣು, ಬೆನ್ನುಫಣಿ; ಅನೇಕ ಸಣ್ಣ ಸಣ್ಣ ಬೊಕ್ಕೆಗಳು ಸೇರಿಕೊಂಡು ಉಂಟಾಗುವ ದೊಡ್ಡ ಬೊಕ್ಕೆ.

**CARCINOGEN** (ಕಾರ್ಸಿನೋಜೆನ್): ಕ್ಯಾನ್ಸರ್‌ಜನಕ; ಕ್ಯಾನ್ಸರ್ ಬೆಳವಣಿಗೆಯನ್ನು ಪ್ರಚೋದಿಸುವಂತಹ ಯಾವುದೇ ವಸ್ತು ಅಥವಾ ಅಂಶ.

**CARCINOMA** (ಕಾರ್ಸಿನೋಮ): ವೇಗವಾಗಿ ಬೆಳೆಯುವ ಕ್ಯಾನ್ಸರ್‌ಗಂತಿ; ದೇಹದ ಅಂಗಗಳನ್ನು ಕವಚದಂತೆ ಸುತ್ತುವರೆದಿರುವ ಕೋಶಗಳಲ್ಲಿ ಕಾಣಿಸಿಕೊಳ್ಳುವ ತೀವ್ರತರನಾದ ಕ್ಯಾನ್ಸರ್ ಬೆಳವಣಿಗೆ.

**CARDIOLOGY** (ಕಾರ್ಡಿಯೋಲಜಿ): ಹೃದಯಶಾಸ್ತ್ರ; ಹೃದಯ ಮತ್ತು ರಕ್ತ ಪರಿಚಲನಾ ವ್ಯವಸ್ಥೆ ಕುರಿತಂತೆ ರೋಗಪತ್ತೆ ಮತ್ತು ಚಿಕಿತ್ಸೆಗಳ ಬಗ್ಗೆ ನಡೆಸುವ ಅಧ್ಯಯನ.

**CARDIO VASCULAR SYSTEM** (ಕಾರ್ಡಿಯೋ ವ್ಯಾಸ್ಕುಲಾರ್ ಸಿಸ್ಟಮ್): ಹೃದಯ ರಕ್ತನಾಳದ ವ್ಯೂಹ; ತಲೆಯಿಂದ ಪಾದದ ಬೆರಳುಗಳವರೆಗೆ ರಕ್ತವನ್ನು ಪ್ರತಿಯೊಂದು ಕೋಶಕ್ಕೂ ಸರಬರಾಜು ಮಾಡುವ ಸಂಕೀರ್ಣ ವ್ಯವಸ್ಥೆ.

**CARPAL TUNEL SYNDROME** (ಕಾರ್ಪಲ್ ಟನೆಲ್ ಸಿಂಡ್ರೋಮ್): ಮಣಿಕಟ್ಟಿನ ತೊಂದರೆ; ಕೈಮಣಿಕಟ್ಟಿನ ಭಾಗದಲ್ಲಿ Median Nerve (ಮೀಡಿಯನ್ ನರ)ನ ಒತ್ತುವಿಕೆಯಿಂದಾಗಿ ಉಂಟಾಗುವ ಜೋಮುಗಟ್ಟುವಿಕೆ, ನೋವು ಮತ್ತು ಅಶಕ್ತತೆ. ಟೆನಿಸ್ ಅಂತಹ ಆಟವಾಡುವವರಲ್ಲಿ ಕೈ ಮೇಲೆ ಭಾರ ಹಾಕಿ ಬಿದ್ದಾಗ ಈ ಸಮಸ್ಯೆ ಸಾಮಾನ್ಯ.

**CARRIER** (ಕ್ಯಾರಿಯರ್): ವಾಹಕ; ಬೇರೆಲ್ಲ ರೀತಿಯಿಂದಲೂ ಆರೋಗ್ಯ-ವಾಗಿದ್ದು, ಸೋಂಕುಕಾರಕ ಜೀವಿಯನ್ನು ದೇಹದಲ್ಲಿ ಹೊಂದಿದ್ದರೂ ಅದಕ್ಕೆ ಸಂಬಂಧಿಸಿದ ರೋಗಲಕ್ಷಣಗಳು ಕಾಣಿಸಿಕೊಳ್ಳದೆ, ಬೇರೆಯವರಿಗೆ ಆ ಸೋಂಕನ್ನು ಹರಡಬಲ್ಲಂತಹ ವ್ಯಕ್ತಿ.

**CARTILAGE** (ಕಾರ್ಟಿಲೇಜ್): ಮೆಲ್ಲೆಲುಬು, ಮೃದು ಎಲುಬು; ಮೂಳೆಗಳ ನಡುವೆ ಇರುವ ಗಡುಸಾದ ಅಂಗಾಂಶ. ಮೃದ್ವಸ್ಥಿ.

ಭ್ರೂಣಾವಸ್ಥೆಯಲ್ಲಿ ದೇಹದ ಅಸ್ಥಿಯು ಇದೇ ಕಾರ್ಟಿಲೇಜ್‌ನಿಂದ ಉಂಟಾಗಿರುತ್ತದೆ. ಮುಂದೆ ಇವು ಮೂಳೆಗಳಾಗಿ ಪರಿವರ್ತನೆಗೊಳ್ಳುತ್ತವೆ.

**CATABOLISM** (ಕ್ಯಾಟಬಾಲಿಸಂ): ಜೀವವಸ್ತುಲಯ; ಶಕ್ತಿಯ ಪೂರೈಕೆಗಾಗಿ ಸಂಕೀರ್ಣ ವಸ್ತುಗಳನ್ನು ವಿಭಜಿಸುವ ದೇಹದ ಕ್ರಿಯೆ.

**CATALEPSY** (ಕ್ಯಾಟಲೆಪ್ಸಿ): ಬಿಗುಸನ್ನಿ; ಮಾಂಸಖಂಡಗಳ ಗಡಸುತನ (ಬಿಗಿತ), ಎಚ್ಚರಿಕೆಯ ಅತಿಯಾದ ಭಾವನೆ, ಕೆಲವೊಮ್ಮೆ ಪ್ರಜ್ಞಾಹೀನತೆಯ ಸ್ಥಿತಿಯ ಲಕ್ಷಣಗಳನ್ನು ಒಳಗೊಂಡ ಚಲನಾಹೀನತೆಯ ಸಮಸ್ಯೆಯನ್ನು ವ್ಯಕ್ತಿ ಆಗಿಂದಾಗ್ಗೆ ಎದುರಿಸುತ್ತಿರುವ ಬೇನೆ.

**CATAPHASIA** (ಕ್ಯಾಟಫೇಸಿಯ): ಒಂದುತ್ತರ ನೀಡಿಕೆ; ಒಂದೇ ಶಬ್ದ ಅಥವಾ ವಾಕ್ಯವನ್ನು ಪದೇ ಪದೇ ಉಪಯೋಗಿಸುವಂತಹ ಅಭ್ಯಾಸವನ್ನು ಹೊಂದಿರುವ ಸ್ಥಿತಿ.

**CATARACT** (ಕ್ಯಾಟರ್‍ಯಾಕ್ಟ್): ಮೋತಿಬಿಂದು, ಕಣ್ಣುಪೊರೆ; ಕಣ್ಣಿನ ಮಸೂರಗಳು ಮಂಜುಗಟ್ಟಿದಂತಾಗಿ ದೃಷ್ಟಿ ಸಾಮರ್ಥ್ಯ ಕುಗ್ಗುವ ಸ್ಥಿತಿ. ಇದನ್ನು ಸರಳ ಶಸ್ತ್ರಚಿಕಿತ್ಸೆಯಿಂದ ಸರಿಪಡಿಸಬಹುದಾಗಿದೆ.

**CATHETER** (ಕ್ಯಾಥೇಟರ್): ತೂರ್ನಳಿಕೆ; ದ್ರಾವಣಗಳನ್ನು ದೇಹದ ಒಳಗೆ ಸೇರಿಸಲು ಅಥವಾ ಹೊರಗೆ ಎಳೆಯಲು ದೇಹದೊಳಕ್ಕೆ ತೂರಿಸುವಂತಹ ಸಣ್ಣ ಕೊಳವೆಗಳು.

**CAT SCRATCH FEVER** (ಕ್ಯಾಟ್ ಸ್ಕ್ರ್ಯಾಚ್ ಫೀವರ್): ಸಣ್ಣ ಪ್ರಾಣಿಗಳು ತಮ್ಮ ಕಾಲಿನ ಉಗುರುಗಳಿಂದ ಪರಚಿದಾಗ ಉಂಟಾಗುವ ಜ್ವರ, ನಡುಕ ಮತ್ತು ದುಗ್ಧರಸ ಗ್ರಂಥಿಗಳ ಊತದಂತಹ ಲಕ್ಷಣಗಳನ್ನು ಹೊಂದಿರುವ ಸೋಂಕು.

**CERBRAL PALSY** (ಸೆರೆಬ್ರಲ್ ಪಾಲ್ಸಿ): ಅಸಮತೋಲಿತ ಮಾಂಸಖಂಡಗಳ ನಿಯಂತ್ರಣದಿಂದಾಗಿ ಕಾಣಿಸಿಕೊಳ್ಳುವ ಅನೇಕ ಸ್ಥಿತಿಗಳ ಸಮೂಹ.

ಜನನ ಸಮಯದಲ್ಲಿ ನರ ಅಥವಾ ಮೆದುಳಿಗೆ ಆಗುವ ತೊಂದರೆಯಿಂದ ಈ ಸ್ಥಿತಿ ಉಂಟಾಗಬಹುದಾಗಿದೆ. ಮೊದಮೊದಲಿಗೆ ನಡುಕ ಪಾರ್ಶ್ವಿಕ, ಮುಖದ ಮಾಂಸಖಂಡಗಳ ಪಾರ್ಶ್ವವಾಯುವಿನಂತಹ ಲಕ್ಷಣಗಳು ಕಾಣಿಸಿಕೊಂಡು ನಂತರದಲ್ಲಿ ಸರಾಗವಾಗಿ ನಡೆದಾಡಲು ಕಷ್ಟವಾಗುತ್ತದೆ.

**CHARLEY HORSE** (ಚಾರ್ಲಿ ಹಾರ್ಸ್): ಮಾಂಸಖಂಡಗಳನ್ನು ಇದ್ದಕ್ಕಿದ್ದಂತೆ ಹಿಗ್ಗಿಸುವುದರಿಂದ ಉಂಟಾಗುವ ನೋವುಪೂರಿತ ಸೆಳೆತ ಅಥವಾ ಉಳುಕು.

**CHEMOTHERAPHY** (ಕೀಮೋಥೆರಪಿ): ರಾಸಾಯನಿಕ ಔಷಧಗಳ ಮೂಲಕ ರೋಗಕ್ಕೆ ಚಿಕಿತ್ಸೆ ನೀಡುವುದು.

**CHEST** (ಚೆಸ್ಟ್): ಎದೆ; ಎದೆಗೂಡು; ಎದೆಯು 24 ಪಕ್ಕೆಲುಬುಗಳಿಂದ ಮಾಡಲ್ಪಟ್ಟಿದ್ದು, ಎರಡು ಬದಿಯಲ್ಲಿ ಹನ್ನೆರಡರಂತೆ ಹಂಚಿವೆ. ಹಿಂದೆ ಬೆನ್ನುಹುರಿಯೊಂದಿಗೆ ಸಂಪರ್ಕ ಹೊಂದಿವೆ. ಮೇಲಿನ ಏಳು ಜೊತೆ ಪಕ್ಕೆಲುಬುಗಳು ಎದೆಮೂಳೆಗೆ ಅಂಟಿಕೊಂಡಿದ್ದರೆ, ನಂತರ ಮೂರು ಜೊತೆ ಪಕ್ಕೆಲುಬುಗಳು ಎದೆ ಮೂಳೆಗೆ ಬದಲಾಗಿ ಏಳನೆ ಪಕ್ಕೆಲುಬಿಗೆ ಅಂಟಿಕೊಂಡಿವೆ. ಕೆಳಗಿನ ಎರಡು ಜೊತೆಯ ಮೂಳೆಗಳು ಮುಂದುಗಡೆ ಯಾವುದಕ್ಕೂ ಅಂಟಿಕೊಳ್ಳದೆ ಸ್ವತಂತ್ರವಾಗಿವೆ, ಇವುಗಳನ್ನು ತೇಲಾಡುವ ಪಕ್ಕೆಲುಬು (ಫ್ಲೋರಿಬ್ಸ್) ಎನ್ನುತ್ತಾರೆ.

**CHICKEN POX** (ಚಿಕನ್ ಪಾಕ್ಸ್): ಸೀತಾಳೆ ಸಿಡುಬು, ಗಣಜಿಲೆ; ಮೈಮೇಲೆ ಗುಳ್ಳೆಗಳು ಏಳುವಂತಹ ತೀವ್ರತೆರನಾದ ಸಾಂಕ್ರಾಮಿಕ ವೈರಸ್ ರೋಗ.

ಮಕ್ಕಳಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಈ ರೋಗ ಒಬ್ಬರಿಂದ ಒಬ್ಬರಿಗೆ ಬೇಗ ಹರಡುತ್ತದೆ. ಪ್ರಾರಂಭದಲ್ಲಿ ಸಣ್ಣ ಸಣ್ಣ ಕೆಂಪು ದಂದೆಯಂತಹ ಗುಳ್ಳೆಗಳು ಕಾಣಿಸಿಕೊಂಡು ಸ್ವಲ್ಪ ಸಮಯದಲ್ಲೇ ಕೀವು ತುಂಬಿಕೊಂಡು ದೇಹದ ತುಂಬೆಲ್ಲ ಹರಡುತ್ತವೆ.

ಒಬ್ಬ ವ್ಯಕ್ತಿಗೆ ಒಮ್ಮೆ ಈ ರೋಗ ಬಂದರೆ, ಆ ವೈರಸ್‌ನ ವಿರುದ್ಧ ರೋಗ ನಿರೋಧಕ ಶಕ್ತಿ ಬೆಳವಣಿಗೆ ಹೊಂದುವುದರಿಂದ ಮತ್ತೆ ಆತ ಇದೇ ರೋಗಕ್ಕೆ ತುತ್ತಾಗುವುದು ತುಂಬಾ ಕಡಿಮೆ.

**CHILBLAIN** (ಚಿಲ್‌ಬ್ಲೈನ್): ಚಳಿಗುಳ್ಳೆ, ಕಾಲಹುಗಳು; ಶೀತ (ತಂಪು) ವಾತಾವರಣದಿಂದಾಗಿ ಚರ್ಮ ಊದಿಕೊಳ್ಳುವುದು.

**CHILL** (ಚಿಲ್): ಚಳಿ, ನಡುಕ, ಶೀತ, ತಂಡಿ; ದೇಹದ ಉಷ್ಣತೆ ಇದ್ದಕ್ಕಿದ್ದಂತೆ ಕಡಿಮೆಯಾಗುವುದರ ಜೊತೆಗೆ ನಡುಕ ಮತ್ತು ಚಳಿಯಂತಹ ಅನುಭವವಾಗುವ ಸ್ಥಿತಿ.

**CHIROPODY** (ಕೈರೊಪೊಡಿ): ಪಾದ ಚಿಕಿತ್ಸೆ; ಪಾದಕ್ಕೆ ಸಂಬಂಧಪಟ್ಟ ಕಾಯಿಲೆ, ಕ್ರಮವಲ್ಲದ ಬೆಳವಣಿಗೆ ಮತ್ತು ಗಾಯ (ತೊಂದರೆ)ಗಳ ಬಗ್ಗೆ ಅಧ್ಯಯನ ನಡೆಸುವ ವಿಜ್ಞಾನ ಶಾಖೆ.

**CHOLERA** (ಕಾಲೆರಾ): ಕಾಲರಾ; ಕಲುಷಿತ ನೀರು ಅಥವಾ ಆಹಾರದಿಂದಾಗಿ ಕಾಣಿಸಿಕೊಳ್ಳುವ ಜ್ವರ, ವಾಂತಿ, ಅತಿಸಾರ ಬೇಧಿ, ನಿರ್ಜಲೀಕರಣ ಸ್ಥಿತಿಯಂತಹ ಲಕ್ಷಣಗಳುಳ್ಳ ಕರುಳುಬೇನೆ. ಕಾಲೆರಾವಿಬ್ರಿಯೋ ಎಂಬ ರೋಗಾಣು ಇದಕ್ಕೆ ಕಾರಣ.

**CHOLESTEROL** (ಕೊಲೆಸ್ಟಿರಾಲ್): ಘನಪಿತ್ತ; ನರ ಅಂಗಾಂಶ ಮತ್ತು ಪಿತ್ತರಸದಲ್ಲಿರುತ್ತದೆ. ಆರೋಗ್ಯವಂತ ದೇಹಕ್ಕೆ ಇದರ ಅವಶ್ಯಕತೆಯಿದೆ, ಅತಿಯಾದರೆ ಅಪಾಯಕಾರಿಯಾಗುವ ಸಂಭವವಿರುತ್ತದೆ. ಕೆಟ್ಟ ಕೊಲೆಸ್ಟೆರಾಲ್ (ಎಲ್‌ಡಿಎಲ್) ಹೆಚ್ಚು ಅಪಾಯಕಾರಿ.

**CHOREA** (ಕೋರಿಯ): ಕಂಪವಾತ; ದೇಹ ಮತ್ತು ಕೈಕಾಲುಗಳ ನಿಯಂತ್ರಿಸಲಾಗದ ಅನೈಚ್ಛಿಕ ಕ್ರಿಯೆಗಳ ರೋಗಲಕ್ಷಣವನ್ನು ಹೊಂದಿರುವ ನರರೋಗ.

**CHROMOSOMES** (ಕ್ರೋಮೋಸೋಮ್ಸ್): ಬಣ್ಣ ದಂಡಗಳು; ಆನುವಂಶಿಕ ಗುಣಗಳನ್ನು ನಿರ್ಧರಿಸುವ, ಕೋಶಕೇಂದ್ರದಲ್ಲಿರುವ ಬಹು ಮುಖ್ಯ ಭಾಗ. ಈ ವರ್ಣತಂತುಗಳು 'ಜೀನ್ಸ್' ಅನ್ನು ಹೊಂದಿದ್ದು, ಇವು ಪೋಷಕರಿಂದ ಮಗುವಿಗೆ ಗುಣ ಮತ್ತು ರಚನೆಯ ನಿರ್ದೇಶನಗಳನ್ನು ಕೊಂಡೊಯ್ಯುತ್ತವೆ. ಮನುಷ್ಯನಲ್ಲಿ 23 ಜೊತೆ ಬಣ್ಣ ದಂಡಗಳಿರುತ್ತವೆ.

**CICATRIX** (ಸಿಕ್ಯಾಟ್ರಿಕ್ಸ್): ಕಲೆಗಟ್ಟು, ಗಾಯಕಲೆ; ಗಾಯ ವಾಸಿಯಾದ ನಂತರವು ಆ ಜಾಗದಲ್ಲಿ ಉಳಿಯುವ ಪೈಬ್ರಸ್ ಅಂಗಾಂಶ ಕಲೆ.

**CIRRHOSIS** (ಸಿರೋಸಿಸ್): ನಾರುಗಟ್ಟು; ಆರೋಗ್ಯವಂತ ಕೋಶಗಳೆಲ್ಲ ನಾಶವಾಗಿ ಅವುಗಳ ಜಾಗದಲ್ಲಿ ನಾರಿನಂತಹ ಅಂಗಾಂಶ ಉತ್ಪತ್ತಿಯಾಗುವ ಪಿತ್ತಕೋಶದ ಕಾಯಿಲೆ.

ಹೆಪಟೈಟಿಸ್, ಅತಿಯಾದ ಮತ್ತು ದೀರ್ಘಕಾಲ ಮದ್ಯ ಸೇವನೆ ಸಾಮಾನ್ಯ ಕಾರಣಗಳು.

**CLAUSTROPHOBIA** (ಕ್ಲಾಸ್ಟ್ರೋಫೋಬಿಯ): ಇಕ್ಕಟ್ಟಂಜಿಕೆ, ಕೋಣೆಯಂಜಿಕೆ; ಹೊರ ಹೋಗಲು ಮಾರ್ಗವಿಲ್ಲದ ಚಿಕ್ಕ ಪ್ರದೇಶ ಅಥವಾ ಸಂಪೂರ್ಣ ಮುಚ್ಚಲ್ಪಟ್ಟ ಸ್ಥಳದಲ್ಲಿರಲು ಭಯ. ಉದಾ: ಗುಹೆ, ಲಿಫ್ಟ್, ಟೆಲಿಫೋನ್ ಬೂತ್.

**CLEFT LIP, CLEFT PALATE** (ಕ್ಲೆಫ್ಟ್ ಲಿಪ್, ಕ್ಲೆಫ್ಟ್ ಪ್ಯಾಲೆಟ್): ಸೀಳುದುಟಿ; ಬಾಯಿಯ ಮೇಲ್ಭಾಗದ ಸ್ವಲ್ಪ ಅಥವಾ ಸಂಪೂರ್ಣ ಭಾಗ ಜನನ ಸಮಯದಲ್ಲೆ ಸೀಳಿಕೊಂಡಿರುವುದು.

ಮಾತನಾಡಲು, ನುಂಗಲು, ಕೇಳಿಸಿಕೊಳ್ಳಲು ಇದರಿಂದ ತೊಂದರೆಯಾಗ-ಬಹುದಾಗಿದ್ದು ಚಿಕ್ಕವಯಸ್ಸಿನಲ್ಲಿ ಶಸ್ತ್ರಚಿಕಿತ್ಸೆ ಮಾಡುವುದರಿಂದ ಅವುಗಳ ಪ್ರಮಾಣವನ್ನು ಕಡಿಮೆ ಮಾಡಬಹುದಾಗಿದೆ.

**CLUB FOOT** (ಕ್ಲಬ್ ಫೂಟ್): ಲಟ್ಟಗಾಲು, ಮೆಟ್ಟುಗಾಲು; ಜನನ ಸಮಯದಲ್ಲೆ ಪಾದವು ಹಿಮ್ಮುಖವಾಗಿ ತಿರುಗಿರುವಂತಹ ಅಥವಾ ತಿರುಚಿಕೊಂಡಿರು-ವಂತಹ ಸ್ಥಿತಿ.

**COAGULATION** (ಕೋ-ಆಗ್ಯುಲೇಷನ್): ಮುದ್ದೆಗಟ್ಟಿಕೆ, ಗರಣೆ ಗಟ್ಟಿಕೆ; ದ್ರವವು ಮೃದುವಾದ ಹರಿದಾಡಲಾರದಂತಹ ದ್ರವ್ಯವಾಗಿ ಬದಲಾಗುವುದು.

**COCAINE** (ಕೋಕೇನ್): ಸಣ್ಣ ಪ್ರಮಾಣದಲ್ಲಿ ಸ್ಥಳೀಯ ಅರಿವಳಿಕೆಯ ಔಷಧೀಯ ಗುಣವನ್ನು ಹೊಂದಿದ್ದು, ಬಹುಬೇಗನೆ ವ್ಯಸನವನ್ನುಂಟು-ಮಾಡುವ ಒಳಪಡಿಸಿಕೊಳ್ಳುವ ಸಾಮರ್ಥ್ಯವಿರುವ ಮಾದಕ ದ್ರವ್ಯ.

**COD-LIVER OIL** (ಕಾಡ್-ಲಿವರ್ ಆಯಿಲ್): ಕಾಡ್‌ಲಿವರ್ ಎಣ್ಣೆ. ವಿಟಮಿನ್ 'ಎ' ಮತ್ತು 'ಡಿ'ಗಳನ್ನು ಅಧಿಕವಾಗಿ ಹೊಂದಿರುವ ಮತ್ಸ್ಯತೈಲ.

**COLOSTOMY** (ಕೊಲೊಸ್ಟೊಮಿ): ಹೊಟ್ಟೆಯ ಭಾಗದಲ್ಲಿ ರಂಧ್ರವನ್ನು ಮಾಡಿ ಅದರ ಮೂಲಕ ದೊಡ್ಡ ಕರುಳನ್ನು ತಲುಪಿ, ಅಲ್ಲಿಯೂ ರಂಧ್ರ

ಮಾಡುವುದರ ಮೂಲಕ ದೇಹದ ತ್ಯಾಜ್ಯ ಹೊರಹೋಗಲು ಅನುವು ಮಾಡಿಕೊಡುವ ಶಸ್ತ್ರಚಿಕಿತ್ಸೆ.

**COMPULSION** (ಕಂಪಲ್ಶನ್): ಒಂದು ಕೆಲಸವನ್ನು ಪದೇ ಪದೇ ಮಾಡುವಂತಹ ಹತ್ತಿಕ್ಕಲಾಗದ ಇಚ್ಛೆ.

**CONCRETION** (ಕಾಂಕ್ರೀಷನ್): ಗಟ್ಟಿ, ಕಲ್ಲುಗಂಟು, ಅಂಟಿಕೆ; ದೇಹದ ಒಳಗಿರುವ ಗಟ್ಟಿಯಾದ ಅಜೈವಿಕ ರಾಶಿ ಉದಾ:- ಮೂತ್ರಪಿಂಡದ ಕಲ್ಲುಗಳು, ಗಾರೆಗಟ್ಟಿದ ದಂತಕೊಳೆ.

**CONCUSSION** (ಕಂಕಷನ್): ತಲೆಗೆ ತಗುಲುವ ಏಟಿನಿಂದ ಉಂಟಾಗುವ ಮೆದುಳಿಗೆ ಆಗುವ ಅಲ್ಪಮಟ್ಟದ ಹಾನಿ. ಮಿದುಳಿನ ವಸ್ತು ಹರಿಯುವುದಿಲ್ಲ. ಕಾಲಕ್ರಮೇಣ ಹಾನಿ ಸರಿಹೋಗುತ್ತದೆ.

**CONGENITAL** (ಕಾಂಜೆನೈಟಲ್): ಹುಟ್ಟಿನಿಂದ ಬಂದ, ಸ್ವಾಭಾವಿಕ; ಹುಟ್ಟುವಾಗಲೆ ಇರುವ; ಆದರೆ ಆನುವಂಶಿಕವಲ್ಲದ.

**CONGESTION** (ಕಂಜೇಷನ್): ರಕ್ತಗಟ್ಟು, ರಕ್ತುಂಬಿಕೆ; ದೇಹದ ದ್ರಾವಣಗಳು ಅಪಸಾಮಾನ್ಯವಾಗಿ ದೇಹದ ಅಂಗಗಳಲ್ಲಿ ಶೇಖರಗೊಳ್ಳುವುದು.

**CONJUNCTIVITIS** (ಕಂಜಂಕ್ಟಿವೈಟಿಸ್): ಕೂಡ್ಪರೆಯುರಿತ; ಕಣ್ಣುಗುಡ್ಡೆಯ ಹೊರಭಾಗವನ್ನು, ಕಣ್ಣುರೆಪ್ಪೆಗಳ ಒಳಪದರವನ್ನು ಆವೃತವಾಗಿರುವ ಕಂಜಂಕ್ಟಿವ್‌ನ ಉರಿಯೂತ.

ಬ್ಯಾಕ್ಟೀರಿಯಾ, ವೈರಸ್‌ಗಳಂತಹ ಸೂಕ್ಷ್ಮಜೀವಿಗಳು, ಧೂಳು, ಹೊಗೆ ಅಥವಾ ರಾಸಾಯನಿಕಗಳು ಕಣ್ಣುಗಳನ್ನು ಸೇರಿಕೊಳ್ಳುವುದರಿಂದ ಈ ತೊಂದರೆ ಉಂಟಾಗಬಹುದು. ಕಣ್ಣು ಕೆಂಪಗಾಗಿ, ಉರಿ ಉಂಟಾಗುತ್ತದೆ ಮತ್ತು ಬೆಳಕಿಗೆ ತೀವ್ರವಾಗಿ ಪ್ರತಿಕ್ರಿಯಿಸುವ ಕಣ್ಣಿನಿಂದ ಆಗಿಂದಾಗ್ಗೆ ನೀರಿನ ಧಾರೆ ಇಳಿಯುತ್ತಿರುತ್ತದೆ. ಬೇಗ ವೈದ್ಯರಲ್ಲಿಗೆ ಹೋಗಬೇಕು.

ಇಂತಹ ಸಮಯದಲ್ಲಿ ಆದಷ್ಟು ಕಣ್ಣನ್ನು ಪ್ರಖರ ಬೆಳಕಿಗೆ ತೆರೆಯುವುದನ್ನು ತಡೆಯಬೇಕು. ಗಟ್ಟಿ ವಸ್ತುವೇನಾದರೂ ಕಣ್ಣನ್ನು ಸೇರಿದ್ದರೆ ನೀರಿನಿಂದ ತೊಳೆಯುವುದರಿಂದ ಹೊರ ತೆಗೆಯಬೇಕು. ಯಾವುದೇ ಕಾರಣಕ್ಕೂ ಉಜ್ಜಬಾರದು.

**CONNECTIVE TISSUE** (ಕನೆಕ್ಟಿವ್ ಟಿಶ್ಯು): ಕೂಡಕ ಅಂಗಾಂಶ; ಕೋಶಗಳನ್ನು ಸೇರಿಸುವ (ಬಂಧಿಸುವ) ನಾರು ಅಂಗಾಂಶ.

**CONTACT DERMATITIS** (ಕಾಂಟ್ಯಾಕ್ಟ್ ಡರ್ಮಟೈಟಿಸ್): ಸಂಪರ್ಕ ಚರ್ಮದುರಿತ; ನಂಜುಕಾರಕ (ಇರಿಟೆಂಟ್)ಗಳ ನೇರ ಸಂಪರ್ಕದಿಂದಾಗಿ ಕಾಣಿಸಿಕೊಳ್ಳುವ ಚರ್ಮದ ಉರಿಯೂತ.

ಡಿಟರ್ಜೆಂಟ್, ಕೂದಲು ಬಣ್ಣ, ಸೌಂದರ್ಯವರ್ಧಕ, ಮನೆ ಸ್ವಚ್ಛಕ ರಸಾಯನಿಕಗಳಿಂದ ಈ ಸ್ಥಿತಿ ಉಂಟಾಗಬಹುದು. ಪೀಡನೆಗೆ ಒಳಗಾದ ಭಾಗ ಕೆಂಪಗಾಗಿ ಊದಿಕೊಂಡು, ಉರಿತ ಅಥವಾ ಕೆರೆತಕ್ಕೆ ಒಳಗಾಗುತ್ತದೆ.

**CONTAGION** (ಕಾಂಟ್ಯಾಜಿಯನ್): ಸೋಂಕುರೋಗ, ಸೋಂಕುಜೀವಿ; ಅಂಟುಜಾಡ್ಯ; ವ್ಯಕ್ತಿಯಿಂದ ವ್ಯಕ್ತಿಗೆ, ನೇರವಾಗಿ ಇಲ್ಲವೆ ಪರೋಕ್ಷವಾಗಿ ಕಾಯಿಲೆ ಹರಡುವಿಕೆ.

**CONTAMINATED** (ಕಂಟ್ಯಾಮಿನೇಟೆಡ್): ಕಲುಷಿತತೆ; ಮಾಲಿನ್ಯತೆಯಿಂದ ಕೂಡಿದೆ ಎಂಬುದನ್ನು ಸೂಚಿಸುತ್ತದೆ. ಬಹುಮುಖ್ಯವಾಗಿ ನೀರು ಅಥವಾ ಆಹಾರಗಳು ರೋಗಾಣುಗಳಿಂದ ಸೋಂಕಿತಗೊಂಡಿದ್ದರೆ ಈ ಪದ ಬಳಸಲಾಗುತ್ತದೆ.

**CONTUSION** (ಕಂಟ್ಯೂಸನ್): ಮೂಕಪೆಟ್ಟು; ಚರ್ಮ ಹರಿದು ಹೋಗದಂತೆ ಉಂಟಾದ ಗಾಯ ಅಥವಾ ತರಚು.

**CONVULSION** (ಕನ್ವಲ್ಷನ್): ಸೆಳವು, ಎಳವು; ಇದ್ದಕ್ಕಿದ್ದಂತೆ ಕಾಣಿಸಿಕೊಳ್ಳುವ ಮಾಂಸಖಂಡಗಳ ಅನೈಚ್ಛಿಕ ಸೆಳೆತಗಳು.

**CORTICOSTEROIDS** (ಕಾರ್ಟಿಕೋಸ್ಟಿರಾಯ್ಡ್ಸ್): ರಗಟೆ ಸ್ಟಿರಾಯ್ಡ್; ಅಡ್ರಿನಲ್ ಗ್ರಂಥಿಯ ಹೊರ ಮೈ ಹೊದಿಕೆಯ ಭಾಗದಿಂದ ಉತ್ಪತ್ತಿಯಾಗುವ ಹಾರ್ಮೋನುಗಳು. 30ಕ್ಕೂ ಹೆಚ್ಚು ಕಾರ್ಟಿಕೋಸ್ಟಿರಾಯ್ಡ್‌ಗಳು ದೇಹದ ಅವಶ್ಯಕ ಕ್ರಿಯೆಗಳನ್ನು ನಿಯಂತ್ರಿಸುತ್ತಿವೆ. ಅವುಗಳಲ್ಲಿ ಮಿನರಲೋ ಕಾರ್ಟಿಕಾಯ್ಡ್ಸ್‌ಗಳು ದೇಹದಲ್ಲಿ ಲವಣ ಮತ್ತು ನೀರಿನ ಸಮತೋಲನ ಕಾಯ್ದರೆ, ಗ್ಲೂಕೋಕಾರ್ಟಿಕಾಯ್ಡ್ಸ್‌ಗಳು ಶರ್ಕರ ಮತ್ತು ಪ್ರೊಟೀನ್‌ಗಳ ಬಳಕೆ ನಿಯಂತ್ರಿಸುತ್ತವೆ. ಆ್ಯಂಡ್ರೊಜೆನ್ ಎಂಬ ಮತ್ತೊಂದು ಗುಂಪು ದ್ವಿತೀಯ ಪುರುಷ ಲೈಂಗಿಕ ಬದಲಾವಣೆಗಳನ್ನು ನಿಯಂತ್ರಿಸುತ್ತವೆ.

**COUGH** (ಕಾಫ್): ಕೆಮ್ಮು; ಶ್ವಾಸಕೋಶಗಳಿಂದ ಗಾಳಿಯನ್ನು ಇದ್ದಕ್ಕಿದ್ದಂತೆ, ಸದ್ದು ಮಾಡುತ್ತ ಹೊರ ಹಾಕುವಿಕೆ. ಮೂಲತಃ ಇದು ದೇಹದ ರಕ್ಷಣಾತ್ಮಕ ಕ್ರಿಯೆಯಾಗಿದ್ದು, ಶ್ವಾಸಕೋಶ ಮತ್ತು ಶ್ವಾಸನಾಳದಲ್ಲಿರುವ ಅತಿಯಾದ ಶ್ಲೇಷ್ಮ (ಸಿಂಬಳ) ಮತ್ತು ಕಿರಿಕಿರಿ ಉಂಟುಮಾಡುವ ವಸ್ತುಗಳನ್ನು ಹೊರಹಾಕಲು ಸಹಕಾರಿಯಾಗಿದೆ.

**CPR** (ಸಿ.ಪಿ.ಆರ್) (ಕಾರ್ಡಿಯೋ ಪಲ್ಮನರಿ ರೀ–ಸಸಿಟೇಶನ್): ಕೃತಕ ಉಸಿರಾಟ ಅಂದರೆ ಬಾಯಿಂದ ಬಾಯಿಗೆ ಊದುವಿಕೆ ಮತ್ತು ಹೃದಯ ಭಾಗದ (ಎದೆ) ಒತ್ತುವಿಕೆಯಂತಹ ಪ್ರಥಮ ಚಿಕಿತ್ಸೆಯನ್ನು ಹೃದಯಾಘಾತ ಉಂಟಾದ ವ್ಯಕ್ತಿಗೆ ನೀಡುವುದು.

**CROUP** (ಕ್ರೌಪ್): ಗಂಟಲುಕಟ್ಟು; ಗಂಟಲುನಾಳದ ಉರಿಯೂತ.

ಧ್ವನಿಪೆಟ್ಟಿಗೆ ಊದಿಕೊಳ್ಳುವುದರಿಂದ ಉಸಿರಾಟಕ್ಕೆ ತೊಂದರೆಯುಂಟಾಗುತ್ತದೆ.

**CYCLAMATE** (ಸೈಕ್ಲಾಮೇಟ್): ಸಕ್ಕರೆಗೆ ಬದಲಾಗಿ ಉಪಯೋಗಿಸುವ ವಸ್ತು. ಕ್ಯಾನ್ಸರ್ ಉಂಟುಮಾಡುತ್ತದೆ ಎಂಬ ಕಾರಣಕ್ಕೆ ಅಮೆರಿಕಾದಲ್ಲಿ ಇದನ್ನು ನಿಷೇಧಿಸಲಾಗಿದೆ.

**CYST** (ಸಿಸ್ಟ್): ದ್ರವ ಅಥವಾ ಅರೆದ್ರವದಂತಹ ತ್ಯಾಜ್ಯ ವಸ್ತುಗಳಿಂದಾದ ಅಸಹಜ ಚೀಲ. ಇದನ್ನು ಸಣ್ಣ ಶಸ್ತ್ರಚಿಕಿತ್ಸೆಯ ಮೂಲಕ ದೇಹದಿಂದ ಬೇರ್ಪಡಿಸಬೇಕಾಗುತ್ತದೆ.

**CYSTIC FIBROSIS** (ಸಿಸ್ಟಿಕ್ ಫೈಬ್ರೋಸಿಸ್): ಶ್ವಾಸವ್ಯೂಹ ಮತ್ತು ಬೆವರು ಗ್ರಂಥಿಗಳನ್ನು ಪೀಡಿಸುವ ಆನುವಂಶೀಕ ಕಾಯಿಲೆ. ಗಟ್ಟಿಯಾದ ಶ್ಲೇಷ್ಮದ (ಸಿಂಬಳ) ಉತ್ಪತ್ತಿಯಿಂದಾಗಿ ಶ್ವಾಸನಾಳ ಕಟ್ಟಿದಂತಾಗುವುದರಿಂದ ಉಸಿರಾಟಕ್ಕೆ ತೊಂದರೆಯಾಗಿ ಶ್ವಾಸನಾಳದ ಸೋಂಕು ಉಂಟಾಗುತ್ತದೆ. ಇಂತಹ ಮಕ್ಕಳಲ್ಲಿ ಕೆಮ್ಮುವುದು, ಜ್ವರ, ಉಸಿರಾಟ ತೊಂದರೆ, ಹಸಿವಿಲ್ಲದಿರುವಿಕೆ ಮುಂತಾದ ಲಕ್ಷಣಗಳನ್ನು ಕಾಣಬಹುದು.

# D

**DE-CORTICATION** (ಡೀ ಕಾರ್ಟಿಕೇಷನ್): ಸಿಪ್ಪೆಸುಲಿತ; ಅಂಗವೊಂದರ ಹೊರಪದರವನ್ನು ತೆಗೆದು ಹಾಕುವುದು.

**DE-FIBRILLATION** (ಡೀ ಫೈಬ್ರಿಲೇಷನ್) : ಫೈಬ್ರಿಲೇಷನ್ (ಅಸಹಜ ಹೃದಯ ಬಡಿತ) ಸ್ಥಿತಿಯನ್ನು ಸರಿಪಡಿಸುವ ವಿಧಾನ.

**DE-HYDRATION** (ಡೀ ಹೈಡ್ರೇಶನ್): ನಿರ್ಜಲತೆ; ದೇಹದಲ್ಲಿನ ನೀರಿನ ಪ್ರಮಾಣ ಕಡಿಮೆಯಾಗುವುದರಿಂದ ಉಂಟಾಗುವ ದೇಹ ಸ್ಥಿತಿ. ಸಾಕಷ್ಟು ನೀರನ್ನು ಸೇವಿಸದೆ ಇರುವುದು ಅಥವಾ ಅಗತ್ಯಕ್ಕಿಂತ ಹೆಚ್ಚಾಗಿ ನೀರು

ವಿಸರ್ಜಿಸಲ್ಪಡುವುದ(ವಾಂತಿ, ಭೇದಿ, ಅನಿಯಂತ್ರಿತ ಮೂತ್ರ, ಅತಿಯಾದ ಬೆವರುವಿಕೆ)ರಿಂದ ಈ ಸ್ಥಿತಿ ಉಂಟಾಗುತ್ತದೆ. ಕೂಡಲೇ ನೀರು ಲವಣಾಂಶಗಳನ್ನು ನೀಡಬೇಕು. ಕೊಡದಿದ್ದರೆ ಪ್ರಾಣ ಹಾನಿ ಆಗಬಹುದು.

**DELIRIUM** (ಡಿಲೀರಿಯಂ): ಸನ್ನಿ, ಸನ್ನಿಪಾತ; ಉನ್ಮಾದತೆ, ಗೊಂದಲಗಳಂತಹ ಸ್ಥಿತಿಗಳನ್ನು ಒಳಗೊಂಡ ತಾತ್ಕಾಲಿಕ ಮಾನಸಿಕ ವ್ಯಾಧಿ. ಸೋಂಕು, ಕೆಲ ಔಷಧಗಳು, ಆಲ್ಕೋಹಾಲ್ ಸೇವನೆಯ ಚಟ ವಿಸರ್ಜನೆ, ಅತಿಯಾದ ಜ್ವರ ಮುಂತಾದ ಕಾರಣಗಳಿಂದ ಈ ಸ್ಥಿತಿ ಉಂಟಾಗಬಹುದು.

**DEMENTIA** (ಡಿಮೆನ್ಷಿಯ): ಮತಿಗೇಡು; ಕಾಯಿಲೆ ಅಥವಾ ಆಘಾತಗಳಿಂದಾಗಿ ಉಂಟಾಗುವ ಮಾನಸಿಕ ಅಸಮತೋಲನ ಅಥವಾ ಕೊರತೆ. ನೆನಪಿನ ಶಕ್ತಿ ಇಲ್ಲದಿರುವುದು, ತೀರಾ ಇತ್ತೀಚಿನ ಘಟನೆಗಳನ್ನು ಮರೆಯುವುದು, ಭಾವನಾತ್ಮಕ ಹಿಡಿತದಲ್ಲಿ ಕೊರತೆಯಂತಹ ಲಕ್ಷಣಗಳಿರುತ್ತವೆ.

**DENTISTRY** (ಡೆಂಟಿಸ್ಟ್ರಿ): ಬಾಯಿವೈದ್ಯಶಾಸ್ತ್ರ; ಹಲ್ಲುಗಳು ಮತ್ತು ಸುತ್ತಲಿನ ಅಂಗಾಂಶದ ಬಗ್ಗೆ ಕಾಳಜಿ ವಹಿಸುವ ವೈದ್ಯಕೀಯ ಕ್ಷೇತ್ರ.

**DERMATITIS** (ಡರ್ಮಟೈಟಿಸ್): ಚರ್ಮದ ಯಾವುದೇ ಉರಿಯೂತ.

**DERMATOLOGY** (ಡರ್ಮಟಾಲಜಿ): ಚರ್ಮಶಾಸ್ತ್ರ ; ಚರ್ಮಕ್ಕೆ ಸಂಬಂಧಿಸಿದ ಕಾಯಿಲೆ ಮತ್ತು ವ್ಯಾಧಿಗಳ ಬಗ್ಗೆ ನಡೆಸುವ ಅಧ್ಯಯನ.

**DIABETES MELLITUS** (ಡಯಾಬಿಟಿಸ್ ಮೆಲಿಟಸ್): ಮಧುಮೇಹ, ಸಿಹಿಮೂತ್ರ ರೋಗ; ಜೀರ್ಣಗೊಂಡ ಸಕ್ಕರೆಯ ಅಂಶವನ್ನು ವ್ಯವಸ್ಥಿತ ರೀತಿಯಲ್ಲಿ ನಿಯಂತ್ರಿಸಲಾಗದ ದೇಹದ ಸ್ಥಿತಿ. ಸಕ್ಕರೆಯ ಅಂಶವನ್ನು ನಿಯಂತ್ರಿಸಲು ಅಗತ್ಯವಿರುವ ಇನ್ಸುಲಿನ್‌ನ ಪ್ರಮಾಣ ದೇಹದಲ್ಲಿ ಕಡಿಮೆಯಾದಾಗ ಈ ಸ್ಥಿತಿ ಉಂಟಾಗುತ್ತದೆ. ಈ ಇನ್ಸುಲಿನ್ ಮೇದೋಜೀರಕ (ಪ್ಯಾಂಕ್ರಿಯಾಸ್) ಗ್ರಂಥಿಯಲ್ಲಿ ಉತ್ಪತ್ತಿಯಾಗುತ್ತದೆ.

**DIAGNOSIS** (ಡಯೋಗ್ನೋಸಿಸ್): ರೋಗ ನಿರ್ಧಾರ; ಲಕ್ಷಣಗಳ ಅಧ್ಯಯನದಿಂದ ರೋಗವನ್ನು ಪತ್ತೆಹಚ್ಚುವಿಕೆ. ಪ್ರಯೋಗಾಲಯಗಳಲ್ಲಿ, ಸಂಗ್ರಹಿಸಿದ ಮಾದರಿಗಳ ಪರೀಕ್ಷೆಯಿಂದಲೂ ರೋಗ ಪತ್ತೆಹಚ್ಚಬಹುದು.

**DIALYSIS** (ಡಯಾಲಿಸಿಸ್): ಆಚೆಗೆಳೆತ; ರಕ್ತದಿಂದ ತ್ಯಾಜ್ಯ ವಸ್ತುಗಳನ್ನು ಬೇರ್ಪಡಿಸಿ ಲವಣಾಂಶಗಳ ಸಮತೋಲನವನ್ನು ಕಾಯುವ ಶುದ್ಧೀಕರಣ ಕ್ರಿಯೆ. ಮೂತ್ರಪಿಂಡಗಳ ವೈಫಲ್ಯದ ಸಮಯದಲ್ಲಿ ಕೃತಕ ಯಂತ್ರೋಪಕರಣಗಳನ್ನು ಬಳಸಿ ಡಯಾಲಿಸಸ್ ಮಾಡಲಾಗುತ್ತದೆ.

**DIAPHRAGM** (ಡಯಾಫ್ರಾಮ್): ಎದೆ ಮತ್ತು ಉದರ ಕುಹರಗಳನ್ನು ಬೇರ್ಪಡಿಸುವ ಮಾಂಸಖಂಡಗಳ ಪದರ.

**DIARRHOEA** (ಡಯೇರಿಯಾ): ಅತಿಸಾರ, ಭೇದಿ; ಆಗಿಂದಾಗ್ಗೆ ಮತ್ತು ಅತಿಯಾಗಿ ನೀರಿನ ರೂಪದಲ್ಲಿ ಭೇದಿಯಾಗುವ ದೇಹಸ್ಥಿತಿ.

ವಿಷಪೂರಿತ ಆಹಾರ ಸೇವನೆ, ಕೆಲವೊಂದು ಔಷಧಗಳ ಅಡ್ಡ ಪರಿಣಾಮ, ಜೀರ್ಣ ನಾಳದ ಸೋಂಕು ಅಥವಾ ಕಾಯಿಲೆಗಳಿಂದ ಈ ಸ್ಥಿತಿ ಉಂಟಾಗ-ಬಹುದು. ಈ ಸ್ಥಿತಿಯಿಂದಾಗಿ ದೇಹದಲ್ಲಿ ನಿರ್ಜಲೀಕರಣ ಉಂಟಾಗ-ಬಹುದು.

**DIGESTION** (ಡೈಜೇಷನ್): ಅರಗಣೆ, ಪಚನ, ಜೀರ್ಣನೆ; ದೇಹ ಬಳಸಿಕೊಳ್ಳಲು ಅನುಕೂಲವಾಗುವಂತಹ ಸಣ್ಣ ಸಣ್ಣ ಕಣಗಳನ್ನಾಗಿ ಆಹಾರ ಪದಾರ್ಥಗಳನ್ನು ವಿಭಜಿಸುವ ಕ್ರಿಯೆ. ಜೀರ್ಣಕ್ರಿಯೆಯ ಮೊದಲ ಘಟ್ಟ ಪ್ರಾರಂಭವಾಗುವುದು ಬಾಯಿಯಲ್ಲಿ. ಜೊಲ್ಲುರಸದಲ್ಲಿರುವ ಎಂಜೈಮ್‌ಗಳು ಈ ಕ್ರಿಯೆಯನ್ನು ಪ್ರಾರಂಭಿಸುತ್ತವೆ. ಉಳಿದ ಭಾಗ ಉದರ, ಸಣ್ಣಕರುಳು, ದೊಡ್ಡಕರುಳಿನಲ್ಲಿ ನಡೆದು ಉಪಯುಕ್ತ ಅಂಶಗಳನ್ನು ತೆಗೆದುಕೊಂಡ ನಂತರ ತ್ಯಾಜ್ಯ ವಸ್ತುವಾಗಿ ಹೊರ ಹಾಕಲಾಗುತ್ತದೆ.

**DIPHTHERIA** (ಡಿಫ್ತೀರಿಯಾ): ಗಂಟಲು ಮಾರಿರೋಗ; ಟಾನ್ಸಿಲ್, ಶ್ವಾಸನಾಳ ಮತ್ತು ಧ್ವನಿಪೆಟ್ಟಿಗೆಗಳನ್ನು ಪೀಡಿಸುವ, ಇದ್ದಕ್ಕಿದ್ದಂತೆ ಕಾಣಿಸಿಕೊಳ್ಳುವ ರೋಗ.

ಗಂಟಲು ನೋವು, ಕೆಮ್ಮು, ಜ್ವರ, ನುಂಗುವಿಕೆಯಲ್ಲಿ ಕಷ್ಟವಾಗುವಿಕೆ ಮುಂತಾದ ಲಕ್ಷಣಗಳನ್ನು ಹೊಂದಿರುವ ಈ ರೋಗದ ಮತ್ತೊಂದು ಲಕ್ಷಣವೆಂದರೆ ಗಂಟಲಿನ ಪದರು ನಶಿಸಿದ ಕೋಶಗಳಿಂದಾಗಿ ಕಂದು ಬಣ್ಣಕ್ಕೆ ತಿರುಗಿರುತ್ತದೆ.

**DISLOCATION** (ಡಿಸ್‌ಲೊಕೇಷನ್): ಕೀಲುತಪ್ಪಿಕೆ, ಎಡೆತಪ್ಪಿಕೆ; ಮೂಲಸ್ಥಾನ-ದಿಂದ ಸ್ಥಾನಪಲ್ಲಟ ಹೊಂದಿರುವಿಕೆ.

ಸಾಮಾನ್ಯವಾಗಿ ಎರಡು ಮೂಳೆಗಳು 'ಕೀಲು'ಗಳಲ್ಲಿ ಸಂಧಿಸಿರುತ್ತವೆ. ಈ ಕೀಲು ನಾರು ಅಂಗಾಂಶವಾದ ಲಿಗಾಮೆಂಟ್‌ನಿಂದ ಮಾಡಲ್ಪಟ್ಟಿರುತ್ತದೆ. ಕೀಲಿನ ರಚನೆ ಮತ್ತು ಜಾರು ದ್ರವದ ಸ್ರವಿಕೆಯಿಂದಾಗಿ ಎರಡೂ ಮೂಳೆಗಳು ತಮ್ಮ ಸ್ವಸ್ಥಾನದಲ್ಲೆ ಚಲನೆಯನ್ನು ಹೊಂದಿರುತ್ತವೆ. ಕೆಲವೊಮ್ಮೆ ಹೆಚ್ಚಿನ ಒತ್ತಡ ಮತ್ತು ಆಘಾತಗಳಿಂದಾಗಿ ಮೂಳೆಗಳು ಈ ಕೀಲು ರಚನೆಯಿಂದ ಹೊರ ಬಂದು ತೊಂದರೆಯಾಗಬಹುದು.

**D.N.A.** (ಡಿ.ಎನ್.ಎ): ಡೀ–ಆಕ್ಸಿರೈಬೋ ನ್ಯೂಕ್ಲಿಕ್ ಆ್ಯಸಿಡ್. ಜೀವಿಯ ಆನುವಂಶಿಕ ಗುಣಗಳನ್ನು ಒಳಗೊಂಡಿರುವ 'ಜೀನ್'ನ ಮೂಲ ಘಟಕ ಈ ಡಿ.ಎನ್.ಎ. ಆಗಿರುತ್ತದೆ.

**DUODENAL ULCER** (ಡಿಯೋಡಿನಲ್ ಅಲ್ಸರ್): ಸಣ್ಣಕರುಳಿನ ಮೊದಲನೇ ಭಾಗವಾದ ಡಿಯೋಡಿನಮ್‌ನಲ್ಲಿ ಉಂಟಾದ ಹುಣ್ಣು. ಜೀರ್ಣಕ್ರಿಯೆಯಲ್ಲಿ ಅನುಕೂಲವಾಗುವಂತಹ ಆಮ್ಲಗಳ ಅತಿಯಾದ ಉತ್ಪಾದನೆಯಿಂದ ಇದು ಉಂಟಾಗಬಹುದು.

**DYSENTRY** (ಡೀಸೆಂಟ್ರಿ): ಆಮಶಂಕೆ, ರಕ್ತಭೇದಿ; ಹೊಟ್ಟೆನೋವು, ಉದರ ಮಾಂಸಖಂಡಗಳ ಸೆಳೆತ ಮತ್ತು ಭೇದಿಯಂತಹ ಲಕ್ಷಣಗಳನ್ನು ಹೊಂದಿರುವ ಕರುಳಿನ ಸೋಂಕು.

ಬ್ಯಾಸಿಲರಿ ಡೀಸೆಂಟ್ರಿ ಎಂಬ ಬ್ಯಾಕ್ಟೀರಿಯಾ ಅಥವಾ ಅಮೀಬಿಕ್ ಡೀಸೆಂಟ್ರಿ ಎಂಬ ಅಮೀಬಾದಿಂದ ಉಂಟಾಗಬಹುದಾದ ಈ ಸೋಂಕು, ಕಲುಷಿತ ನೀರು ಮತ್ತು ಆಹಾರಗಳಿಂದಾಗಿ ವ್ಯಾಪಕವಾಗಿ ಹರಡುತ್ತದೆ.

**DYSLEXIA** (ಡಿಸ್ಲೆಕ್ಸಿಯ): ಓದುವ, ಬರೆಯುವ ಗಣಿತದ ತೊಂದರೆ; ಬೇರೆಲ್ಲ ರೀತಿಯಿಂದಲೂ ಮಗು ಆರೋಗ್ಯವಾಗಿದ್ದು, ಓದಲು, ಬರೆಯಲು ತೊಂದರೆಯನ್ನನುಭವಿಸುವ ಸ್ಥಿತಿ. ಇದೊಂದು ಮಿದುಳಿನ ನ್ಯೂನತೆ.

**DYSPEPSIA** (ಡಿಸ್ಪೆಪ್ಸಿಯ): ಅಜೀರ್ಣ; ಅಜೀರ್ಣವಾಗುವಿಕೆ; ಜೀರ್ಣವಾಗುವಿಕೆ –ಯಲ್ಲಿ ವ್ಯತ್ಯಯ.

**DYSPHAGIA** (ಡಿಸ್‌ಫೇಜಿಯಾ): ಕಷ್ಟ ನುಂಗಣೆ; ನುಂಗುವಿಕೆಯಲ್ಲಿ ಕಷ್ಟವಾಗುವುದು.

# E

**E.COLI** (ಈ.ಕೋಲೈ): ಮಾನವ ಮತ್ತು ಇತರೆ ಪ್ರಾಣಿಗಳ ಕರುಳಿನಲ್ಲಿ ವಾಸಿಸುವ, ಬ್ಯಾಕ್ಟೀರಿಯಾಗಳು.

**ECZEMA** (ಎಕ್‌ಜೆಮ, ಎಕ್ಸಿಮಾ): ಇಸುಬು; ಚರ್ಮದ ಯಾವುದೇ ರೀತಿಯ ಉರಿಯೂತ ಕಾಯಿಲೆ. ಚರ್ಮದ ಭಾಗ ಕೆಂಪಾಗುವಿಕೆ, ಕಡಿತ, ಕೆರೆತ, ಕೀವು ಸ್ರವಿಸುವಿಕೆ, ಪರೆಗಟ್ಟುವಿಕೆಯಂತಹ ಲಕ್ಷಣಗಳನ್ನು ಇದು ಹೊಂದಿರುತ್ತದೆ.

**EDEMA** (ಎಡಿಮ): ಅಂಗಾಂಶಗಳಲ್ಲಿ ದ್ರವಗಳ ಶೇಖರಣೆಗಳಿಂದಾಗಿ ಉಂಟಾಗುವ ಊತ.

**EMBOLISM** (ಎಮ್ಬೋಲಿಸಮ್): ಅಡಚಿಕೆ; ಹೆಪ್ಪುಗಟ್ಟಿದ ರಕ್ತ ಮತ್ತು ಲವಣಾಂಶಗಳ ಗಾರೆಕಟ್ಟುವಿಕೆಯಂತಹ ಅಡಚಣೆಗಳಿಂದಾಗಿ ರಕ್ತನಾಳಗಳಲ್ಲಿ ರಕ್ತಸಂಚಾರಕ್ಕೆ ಅಡ್ಡಿಯುಂಟಾಗುವಿಕೆ. ಈ ರೀತಿ ಅಡ್ಡಗಟ್ಟುವ ಅಂಶಗಳನ್ನು ಎಂಬೋಲಸ್ ಎನ್ನುತ್ತಾರೆ. ಇದರಿಂದಾಗಿ ರಕ್ತ ಸಂಚಾರ ಕುಂಠಿತವಾಗುವುದರಿಂದ ಆ ಅಂಗಾಂಶಕ್ಕೆ ಘಾಸಿಯಾಗಬಹುದು. ಉದಾ.: ಮೆದುಳಿನ ರಕ್ತನಾಳಗಳಲ್ಲಿ ಈ ಸಮಸ್ಯೆ ಕಾಣಿಸಿಕೊಂಡರೆ ಪಾರ್ಶ್ವವಾಯು ಉಂಟಾಗಬಹುದಾಗಿದೆ.

**EMPHYSEMA** (ಎಂಫೇಸಿಮ): ಗಾಳಿಯುಬ್ಬಟೆ; ಶ್ವಾಸಕೋಶಗಳ ಗಾಳಿ ಚೀಲಗಳು ಹಿಗ್ಗಿದಂತಹ ಒಂದು ಅಸಹಜ ಸ್ಥಿತಿ. ಬ್ರಾಂಕೈಟಿಸ್‌ನಂತಹ ಕಾಯಿಲೆಗಳ ಸಂದರ್ಭದಲ್ಲಿ ಶ್ಲೇಷ್ಮ (ಸಿಂಬಳ) ಉತ್ಪಾದನೆ ಅತಿಯಾಗುವುದರಿಂದ, ಗಾಳಿ ಶ್ವಾಸಕೋಶದಿಂದ ಸಾಕಷ್ಟು ಹೊರ ಬರಲಾರದೆ ಈ ಸ್ಥಿತಿ ಉಂಟಾಗುತ್ತದೆ.

**ENCEPHALITIS** (ಎನ್‌ಸೆಫ್ಯಾಲೈಟಿಸ್): ಮಿದುಳುರಿತ; ಮೆದುಳಿನ ಉರಿಯೂತ. ಜ್ವರ, ಫಿಟ್ಸ್, ಪ್ರಜ್ಞಾಸ್ಥಿತಿಯಲ್ಲಿ ವ್ಯತ್ಯಾಸ ಕಾಣಬರುತ್ತದೆ.

**ENDOCARDITIS** (ಎಂಡೋಕಾರ್ಡೈಟಿಸ್): ಹೃದಯದ ಒಳಪೊರೆಯುರಿತ ಹೃದಯದ ಕವಾಟು ಮತ್ತು ಪದರಿನ ಉರಿಯೂತ.

**ENDOCRINOLOGY** (ಎಂಡೋಕ್ರೈನಾಲಜಿ): ಒಳಸುರಿಕಶಾಸ್ತ್ರ; ನಿರ್ನಾಳ ಗ್ರಂಥಿ (ಎಂಡೋಕ್ರೈನ್)ಗಳ ರಚನೆ, ಕಾರ್ಯ ಮತ್ತು ಅವುಗಳ ರೋಗಗಳ ಪತ್ತೆಹಚ್ಚುವಿಕೆ ಮತ್ತು ಚಿಕಿತ್ಸೆಗಳ ಅಧ್ಯಯನ. ನಿರ್ನಾಳ ಗ್ರಂಥಿಗಳು ತಮ್ಮ ಸ್ರವಿಸುವಿಕೆಯನ್ನು, ಯಾವುದೇ ನಾಳಗಳ ಸಹಾಯವಿಲ್ಲದೆ ನೇರವಾಗಿ ರಕ್ತಕ್ಕೆ ಸೇರಿಸುತ್ತವೆ.

**ENTERITIS** (ಎಂಟಿರೈಟಿಸ್): ಕರುಳುರಿತ; ಕರುಳಿನ ಉರಿಯೂತ. ಸಾಮಾನ್ಯವಾಗಿ ಕಲುಷಿತ ಆಹಾರ ಇಲ್ಲವೆ ನೀರಿನ ಸೇವನೆಯಿಂದಾಗಿ ಸಣ್ಣಕರುಳಿನಲ್ಲಿ ಈ ರೀತಿಯ ಉರಿಯೂತವನ್ನು ಕಾಣಬಹುದು.

**EPIDEMIOLOGY** (ಎಪಿಡೆಮಯಾಲಜಿ): ಸಾಂಕ್ರಾಮಿಕಶಾಸ್ತ್ರ; ರೋಗದ ಪ್ರಾರಂಭಿಕೆ, ಹರಡುವಿಕೆ, ನಿಯಂತ್ರಣ ಮತ್ತು ಪುನರಾವರ್ತನೆಯ ಬಗ್ಗೆ ನಡೆಸುವ ಅಧ್ಯಯನ.

**EPILEPSY** (ಎಪಿಲೆಪ್ಸಿ): ಮೂರ್ಛೆರೋಗ; ಪದೆ ಪದೆ ಮೂರ್ಛೆ ಬರುವಂತಹ ನರರೋಗ. ಅಪಸ್ಮಾರ, ಫಿಟ್ಸ್.

**ESOPHAGUS** (ಈಸೋಫ್ಯಾಗಸ್): ಅನ್ನನಾಳ; ಗಂಟಲಿನಿಂದ ಪ್ರಾರಂಭವಾಗಿ, ಎದೆ ಮೂಲಕ ಸಾಗಿ ಜಠರವನ್ನು ಸೇರುವ ಆಹಾರನಾಳ.

**EXCRETORY SYSTEMS** (ಎಕ್ಸ್‌ಕ್ರೀಟರಿ ಸಿಸ್ಟಮ್ಸ್): ವಿಸರ್ಜನಾಂಗವ್ಯೂಹ; ತ್ಯಾಜ್ಯ ಪದಾರ್ಥಗಳನ್ನು ಬೇರ್ಪಡಿಸುವ ಮತ್ತು ಹೊರಹಾಕುವ ದೇಹದ ಅಂಗವ್ಯವಸ್ಥೆ.

**EXTRASYSTOLE** (ಎಕ್ಸ್‌ಟ್ರಾ-ಸಿಸ್ಟೋಲ್): ಅಕಾಲ ಕುಗ್ಗಲು; ಹೃದಯದ ಅಸಹಜ ಸಂಕೋಚನ.

**EXTREMETIES** (ಎಕ್ಸ್‌ಟ್ರಿಮಿಟೀಸ್): ಅವಯವಗಳು; ಕಾಲು, ಕೈ ಮತ್ತು ಅವುಗಳನ್ನು ದೇಹಕ್ಕೆ ಜೋಡಿಸಿರುವ ಕೀಲುಗಳನ್ನು ಈ ರೀತಿ ಉಲ್ಲೇಖಿಸಲಾಗುತ್ತದೆ.

# F

**FEBRILE** (ಫೈಬ್ರೈಲ್): ಜ್ವರದ, ಮೈ ಕಾವೇರಿಕ; ಸಾಮಾನ್ಯಕ್ಕಿಂತ ಹೆಚ್ಚಾದ ದೇಹದ ಉಷ್ಣತೆ; ಜ್ವರ.

**FEVER BLISTERS** (ಫೀವರ್ ಬ್ಲಿಸ್ಟರ್ಸ್): ಜ್ವರದ ಬೊಬ್ಬೆಗಳು; ಜ್ವರದ ನೀರ್ಗುಳ್ಳೆ; ಹೊಪ್ಪಳೆ; ನೆಗಡಿ ಅಥವಾ ಜ್ವರದಂತಹ ಸಂದರ್ಭಗಳಲ್ಲಿ ಬಾಯಿಯಲ್ಲಿ ಕಾಣಿಸಿಕೊಳ್ಳುವ ಗುಳ್ಳೆಗಳು.

**FISTULA** (ಫಿಸ್ಟುಲಾ): ಬೊರಿಗೆ, ನಾಳಿಹುಣ್ಣು; ದೇಹದಲ್ಲಿನ ಅಸಹಜ ನಾಳ ಅಥವಾ ಸಂಪರ್ಕ ದಾರಿ. ಇದು ಆನುವಂಶಿಕವಾಗಿರಬಹುದು ಅಥವಾ ಸೋಂಕಿನ ಕಾರಣದಿಂದಾಗಿರಬಹುದು.

**FOLLICULITIS** (ಫಾಲಿಕ್ಯುಲೈಟಿಸ್): ಕೋಶದುರಿತ; ಫಾಲಿಕಲ್‌ಗಳಲ್ಲಿ, ಸಾಮಾನ್ಯವಾಗಿ ಕೂದಲು ಬೇರಿನ ಚೀಲಗಳಲ್ಲಿ ಕಾಣಿಸಿಕೊಳ್ಳುವ ಸೋಂಕು.

**FOOD ALLERGY** (ಫುಡ್ ಅಲರ್ಜಿ): ಆಹಾರ ಒಗ್ಗದಿರುವುದು;

ಸೇವಿಸಲು ಯೋಗ್ಯ ಎಂದು ಪರಿಗಣನೆಗೆ ಒಳಪಟ್ಟಿರುವ ಒಂದು ಸಾಮಾನ್ಯ ಆಹಾರಕ್ಕೆ ಅತಿಯಾದ ಪ್ರತಿಸ್ಪಂದನೆ (ಅಲರ್ಜಿ) (ಕೆಟ್ಟ ಪ್ರತಿಕ್ರಿಯೆ) ಹೊಂದಿರುವುದು.

**FOOD POISONING** (ಫುಡ್ ಪಾಯಿಸನಿಂಗ್): ವಿಷಾಹಾರ; ವಿಷ ಪದಾರ್ಥ ಅಥವಾ ಬ್ಯಾಕ್ಟೀರಿಯಾಗಳಿಂದಾಗಿ ಕಲುಷಿತಗೊಂಡ ಆಹಾರ ಸೇವನೆಯಿಂದಾಗಿ ಉಂಟಾಗುವ ಆರೋಗ್ಯದ ದುಷ್ಪರಿಣಾಮ.

ಹೊಟ್ಟೆ ನೋವು, ಭೇದಿ ಮತ್ತು ವಾಂತಿಯಂತಹ ಸಾಮಾನ್ಯ ಲಕ್ಷಣಗಳನ್ನು ಕಾಣಬಹುದಾದರೂ ತೀವ್ರತೆರನಾದ ವಿಷಾಹಾರ ಸೇವನೆ ಸ್ಥಿತಿಯಲ್ಲಿ ಉಸಿರಾಟದಲ್ಲಿ ತೊಂದರೆ, ದೃಷ್ಟಿ ಮಂದವಾಗುವಿಕೆ ಅಥವಾ ಪಾರ್ಶ್ವವಾಯುವಿನಂತಹ ಲಕ್ಷಣಗಳೂ ಕಾಣಿಸಿಕೊಳ್ಳಬಹುದಾಗಿದೆ.

**FRACTURE** (ಫ್ರ್ಯಾಕ್ಚರ್): ಮುರಿಕೆ, ಒಡಕು, ಸೀಳು; ಮೂಳೆಗಳಲ್ಲಿ ಕಾಣಿಸಿ-ಕೊಳ್ಳುವ ಯಾವುದೇ ರೀತಿಯ ಮುರಿತ ಅಥವಾ ಸೀಳು ಬಿಡುವಿಕೆ.

**FRIABLE** (ಫ್ರೈಯಬಲ್): ಪುಡಿಕ; ಸುಲಭವಾಗಿ ನಾಶಪಡಿಸಬಹುದಾದ ಅಥವಾ ಹಾಳು ಮಾಡಬಹುದಾದ ಎಂಬುದನ್ನು ಸೂಚಿಸುತ್ತದೆ.

**FROSTBITE** (ಫ್ರಾಸ್ಟ್‌ಬೈಟ್): ಹಿಮಹುಣ್ಣು; ಅತಿಯಾದ ಚಳಿಯಿಂದಾಗಿ ಉಂಟಾದ ಅಂಗಾಂಶದ ನಷ್ಟ ಅಥವಾ ಹಾನಿ.

ಮೂಗು, ಕೆನ್ನೆ, ಕಿವಿ, ಬೆರಳುಗಳಲ್ಲಿ ಸಾಮಾನ್ಯವಾಗಿ ಈ ಸ್ಥಿತಿ ಕಾಣ ಸಿಗುತ್ತದೆ. ಅತಿಯಾದ ಚಳಿಗಾಳಿ ಬೀಸಿ ದೇಹದ ಉಷ್ಣತೆಯನ್ನು ವೇಗವಾಗಿ ತಗ್ಗಿಸುವುದರಿಂದ ಈ ತೊಂದರೆ ತಲೆದೋರುತ್ತದೆ.

# G

**GALLSTONES** (ಗಾಲ್‌ಸ್ಟೋನ್ಸ್): ಪಿತ್ತಕಲ್ಲುಗಳು; ಯಕೃತ್ತಿನ ನಾಳ ಅಥವಾ ಗಾಲ್ ಬ್ಲಾಡರ್‌ನಲ್ಲಿ ಕಾಣಿಸಿಕೊಳ್ಳುವ ಕಲ್ಲಿನಂತಹ ಗಟ್ಟಿ ಪದಾರ್ಥಗಳು.

ಕೊಬ್ಬು, ರಕ್ತ, ಪಿತ್ತರಸ ಮುಂತಾದವುಗಳಿಂದ ಇವು ಉಂಟಾಗಿ ಉದರ ಭಾಗದಲ್ಲಿ ನೋವು, ಅಜೀರ್ಣತೆ ಮತ್ತು ವಾಕರಿಕೆಯಂತಹ ಲಕ್ಷಣಗಳನ್ನು ತೋರಿಸುತ್ತವೆ.

**GANGRENE** (ಗ್ಯಾಂಗ್ರೀನ್): ನಿರಕ್ತ ಕೊಳೆತ; ರಕ್ತ ಪೂರೈಕೆ ಇಲ್ಲದೆ ದೇಹದ ಅಂಗಾಂಶಗಳ ನಾಶ ಅಥವಾ ಸಾವು.

ಯಾವುದೇ ನಿರ್ದಿಷ್ಟ ಅಂಗಾಂಶದ ಭಾಗಕ್ಕೆ ರಕ್ತ ಸಂಚಾರ ಕಡಿಮೆಯಾದಲ್ಲಿ ಅಥವಾ ಸಂಪೂರ್ಣ ಇಲ್ಲವಾದಲ್ಲಿ ಈ ಸ್ಥಿತಿ ಉಂಟಾಗಬಹುದು.

**GASTRITIS** (ಗ್ಯಾಸ್ಟ್ರೈಟಿಸ್): ಜಠರದುರಿತ; ಜಠರದ ಮೇಲು ಪದರದ ಉರಿಯೂತ. ಜನರ ಆಡು ಭಾಷೆಯಲ್ಲಿ 'ಗ್ಯಾಸ್ಟ್ರಿಕ್' ಸಮಸ್ಯೆ

**GASTRO-ENTEROLOGY** (ಗ್ಯಾಸ್ಟ್ರೋ ಎಂಟರಾಲಜಿ): ಜಠರ ಕರುಳುಶಾಸ್ತ್ರ; ಜಠರ ಮತ್ತು ಕರುಳಿಗೆ ಸಂಬಂಧಿಸಿದ ರೋಗಗಳ ಅಧ್ಯಯನ, ಪತ್ತೆಹಚ್ಚುವಿಕೆ ಮತ್ತು ಚಿಕಿತ್ಸೆ ನೀಡುವ ವೈದ್ಯಕೀಯ ಶಾಖೆ.

**GENE** (ಜೀನ್): ಜನಿಕ; ತಂದೆ–ತಾಯಿಗಳಿಂದ ಮಗುವಿಗೆ ಆನುವಂಶಿಕ ಗುಣಗಳನ್ನು ವರ್ಗಾಯಿಸುವ ವರ್ಣತಂತುವಿನ ಅಂಶ. ನಮ್ಮ ದೇಹದ ಪ್ರತಿಯೊಂದು ಜೀವಕೋಶದಲ್ಲಿ 30ರಿಂದ 90 ಸಾವಿರ ಜೀನ್‌ಗಳಿವೆ.

**GENETIC** (ಜೆನೆಟಿಕ್): ಆನುವಂಶಿಕ, ಜನಿಕದ; ಆನುವಂಶೀಕವಾದದ್ದು ಎಂಬುದನ್ನು ಸೂಚಿಸುವ ಪದ.

**GERM** (ಜೆರ್ಮ್): ರೋಗಾಣು, ಮಿಣಿಜೀವಿ; ಕಾಯಿಲೆಗಳನ್ನು ತರಬಲ್ಲಂತಹ ಯಾವುದೇ ರೀತಿಯ ಸೂಕ್ಷ್ಮಜೀವಿಗಳು, ಮುಖ್ಯವಾಗಿ ಬ್ಯಾಕ್ಟೀರಿಯಾಗಳು.

**GERONTOLOGY** (ಜೀರೊಂಟಾಲಜಿ): ಮುಪ್ಪುಶಾಸ್ತ್ರ; ವಯಸ್ಸಾಗುವಿಕೆ (ಮುದಿತನ)ಯ ಪ್ರಕ್ರಿಯೆ ಮತ್ತು ಅದಕ್ಕೆ ಸಂಬಂಧಿಸಿದ ರೋಗ ಮತ್ತು ಅಸಮರ್ಥತೆಯ ಅಧ್ಯಯನ.

**GIARDIASIS** (ಜಿಯಾರ್ಡಿಯಾಸಿಸ್): ಪರೋಪಜೀವಿ (ಪ್ಯಾರಾಸೈಟ್) ಗಳಿಂದಾಗಿ ಉಂಟಾಗುವ ಸಣ್ಣಕರುಳಿನ ಸೋಂಕು, ಮುಖ್ಯವಾಗಿ ಕಲುಷಿತ ನೀರು ಸೇವನೆಯಿಂದ.

**GINGIVITIS** (ಜಿಂಜೈವೈಟಿಸ್): ವಸಡುರಿತ; ವಸಡಿನ ಉರಿಯೂತ; ಇದು ಮುಖ್ಯವಾಗಿ, ಅಸಮರ್ಪಕ ಹಲ್ಲಿನ ಮತ್ತು ಬಾಯಿಯ ಸ್ವಚ್ಛತೆ, ಅಪೌಷ್ಟಿಕ ಆಹಾರ ಸೇವನೆ ಮತ್ತು ವಿಟಮಿನ್‌ಗಳ ಕೊರತೆಯಿಂದಾಗಿ ಕಾಣಿಸಿಕೊಳ್ಳುತ್ತದೆ. ಬ್ರಶ್ ಮಾಡಿದಾಗ ರಕ್ತ ಬರುವುದು, ವಸಡು ಊದಿಕೊಂಡಿರುವುದು, ಬಾಯಿಯಿಂದ ದುರ್ವಾಸನೆ, ವಸಡು ಹಿಂಜರಿತದಂತಹ ಲಕ್ಷಣಗಳನ್ನು ಇದು ಹೊಂದಿರುತ್ತದೆ.

**GLAND** (ಗ್ಲ್ಯಾಂಡ್): ಗ್ರಂಥಿ, ಗಂಟು, ಗಡ್ಡೆ; ದೇಹಕ್ಕೆ ಉಪಯುಕ್ತವಾಗುವ ಯಾವುದೇ ರೀತಿಯ ಪದಾರ್ಥಗಳನ್ನು ಸ್ರವಿಸುವ ಅಂಗ.

**GLAUCOMA** (ಗ್ಲಾಕೋಮ): ಕಣ್ಣಿನಲ್ಲಿ ಒತ್ತಡ ಹೆಚ್ಚಾಗುವುದರಿಂದಾಗಿ ಕಾಣಿಸಿಕೊಳ್ಳುವ ಸಮಸ್ಯೆ. ಸಾಮಾನ್ಯವಾಗಿ ಕಣ್ಣಿನಲ್ಲಿ ಇರುವ ದ್ರವವು

ಒತ್ತಡವನ್ನು ತಡೆದುಕೊಂಡು ಸಮತೋಲನದಲ್ಲಿಟ್ಟಿರುತ್ತದೆ. ಈ ದ್ರವದ ಕೊರತೆಯ ಸಮಯದಲ್ಲಿ ಒತ್ತಡದ ಸಮತೋಲನತೆ ತಪ್ಪಿ, ಕಣ್ಣಿನ ಮೇಲೆ ಅಧಿಕ ಒತ್ತಡ ಬೀಳುವುದರಿಂದ ಈ ಸ್ಥಿತಿ ಕಾಣಿಸಿಕೊಳ್ಳುತ್ತದೆ.

**GLOSSITIS** (ಗ್ಲಾಸೈಟಿಸ್): ನಾಲಗೆಯುರಿತ; ನಾಲಗೆಯ ಉರಿಯೂತ. ನಾಲಗೆಗೆ ಆಗುವ ಗಾಯದಿಂದ ಅಥವಾ ಬೇರಾವುದೆ ರೋಗ ಇಲ್ಲವೆ ವಿಟಮಿನ್‌ನ ಕೊರತೆಯ ಲಕ್ಷಣವಾಗಿ ಇದು ಕಂಡುಬರುತ್ತದೆ. ನಾಲಗೆಯು ಕೆಂಪಗಾಗುವಿಕೆ, ಊತ, ಬಿಳಿ ಕಲೆಗಳು ಮತ್ತು ಹುಣ್ಣುಗಳಂತಹ ಲಕ್ಷಣಗಳನ್ನು ಇದು ಹೊಂದಿರಬಹುದಾಗಿದ್ದು, ಕಾರಣದ ಆಧಾರದ ಮೇಲೆ ತೀವ್ರತೆ ನಿರ್ಧರಿತವಾಗಿರುತ್ತದೆ.

**GLUCOSE** (ಗ್ಲೂಕೋಸ್): ಜೇನುತುಪ್ಪ, ಹಣ್ಣುಗಳು ಮತ್ತು ರಕ್ತದಲ್ಲಿ ಕಾಣಸಿಗುವ ನೈಸರ್ಗಿಕ ಸಕ್ಕರೆಯ ಅಂಶ.

**GLYCEMIA** (ಗ್ಲೈಸೀಮಿಯ): ಸಕ್ಕರೆ ರಕ್ತ; ರಕ್ತದಲ್ಲಿ ಸಕ್ಕರೆಯ ಅಂಶ ಇರುವುದು.

**GLYCOGEN** (ಗ್ಲೈಕೋಜೆನ್): ಮಾಂಸಖಂಡ ಮತ್ತು ಪಿತ್ತಕೋಶದಲ್ಲಿ ಕಾಣಸಿಗುವ ಒಂದು ಬಗೆಯ ಕಾರ್ಬೋಹೈಡ್ರೇಟ್. ಇದು ಶೇಖರಣೆಯ ರೂಪದ ಕಾರ್ಬೋಹೈಡ್ರೇಟ್ ಆಗಿರುತ್ತದೆ. ದೇಹದಲ್ಲಿ ಕಾರ್ಬೋ-ಹೈಡ್ರೇಟ್‌ನ ಅವಶ್ಯಕತೆ ಹೆಚ್ಚಾದಾಗ ಇದನ್ನು ಗ್ಲೂಕೋಸ್ ಆಗಿ ಪರಿವರ್ತಿಸಬಹುದಾಗಿದೆ.

**GOITRE** (ಗಾಯಿಟರ್): ಗಳಗಂಡ; ಥೈರಾಯ್ಡ್ ಗ್ರಂಥಿಯ ಅಸಹಜ ಹಿಗ್ಗುವಿಕೆ (ದಪ್ಪಗಾಗಿರುವುದು). ಇದರಿಂದಾಗಿ ಕುತ್ತಿಗೆಯು ಪಕ್ಕಕ್ಕೆ ಇಲ್ಲವೆ ಮುಂದಕ್ಕೆ ಊದಿಕೊಂಡಿರುತ್ತದೆ. ಥೈರಾಯ್ಡ್ ಹಾರ್ಮೋನುಗಳ ಉತ್ಪಾದನೆಗೆ ಅಗತ್ಯವಿರುವ ಅಯೋಡಿನ್‌ನ ಕೊರತೆಯಿಂದ ಇದು ಕಾಣಿಸಿಕೊಳ್ಳಬಹುದಾಗಿದೆ.

**GOUT** (ಗೌಟ್): ಸಂಧಿವಾತದ ಒಂದು ವಿಧ; ರಕ್ತದಲ್ಲಿ ಯೂರಿಕ್ ಆ್ಯಸಿಡ್‌ನ ಪ್ರಮಾಣ ಹೆಚ್ಚುವುದರಿಂದಾಗಿ ಕೀಲುಗಳಲ್ಲಿ ಕಾಣಿಸಿಕೊಳ್ಳುವ ಉರಿಯೂತ. ಈ ಯೂರಿಕ್ ಆ್ಯಸಿಡ್ ಎಂಬ ರಾಸಾಯನಿಕ ಸಣ್ಣ ಸಣ್ಣ ಹರಳು ರೂಪದಲ್ಲಿ ಚರ್ಮ, ಕೀಲು, ಮೂತ್ರಪಿಂಡಗಳಲ್ಲಿ ಶೇಖರಣೆಯಾಗುತ್ತದೆ. ಪ್ರಾರಂಭದಲ್ಲಿ ಒಂದು ಕೀಲಿನಲ್ಲಿ ನೋವು ಕಾಣಿಸಿಕೊಂಡು ಕ್ರಮೇಣ ಎಲ್ಲ ಕೀಲುಗಳಿಗೂ ಹರಡುತ್ತದೆ. ಆ ಸಮಯದಲ್ಲಿ ಕೀಲುಗಳ ಭಾಗ ಕೆಂಪಗಾಗಿ ಊದಿಕೊಂಡಿರುತ್ತದೆ ಮಾತ್ರವಲ್ಲ ತುಂಬಾ ನೋವು ಪೂರಿತವಾಗಿರುತ್ತದೆ.

**GRAFT** (ಗ್ರಾಫ್ಟ್): ನಾಟಿ ಹಾಕು; ಶಸ್ತ್ರಚಿಕಿತ್ಸೆಯ ಮೂಲಕ ಬೇರ್ಪಡಿಸಿ, ಅದೇ

ದೇಹದ ಇನ್ನೊಂದು ಭಾಗಕ್ಕೆ ಅಥವಾ ಬೇರೆಯದೆ ದೇಹಕ್ಕೆ ಕಸಿ ಮಾಡುವ ಜೀವಂತ ಅಂಗಾಂಶ.

**GYNAECOLOGY** (ಗೈನೆಕೋಲಜಿ): ಸ್ತ್ರೀರೋಗಶಾಸ್ತ್ರ; ಸ್ತ್ರೀ ಜನನಾಂಗ ವ್ಯವಸ್ಥೆಗೆ ಸಂಬಂಧಿಸಿದ ರೋಗಗಳ ಪತ್ತೆಹಚ್ಚುವಿಕೆ ಮತ್ತು ಚಿಕಿತ್ಸೆ ನೀಡುವ ವೈದ್ಯಕೀಯ ಶಾಖೆ.

# H

**HALLUCINATION** (ಹ್ಯಾಲುಸಿನೇಷನ್): ಭ್ರಮೆ. ದೃಷ್ಟಿ, ಶ್ರವಣ, ರುಚಿ, ವಾಸನೆ ಸ್ಪರ್ಶ ಎಲ್ಲ ವಿಷಯಗಳಲ್ಲೂ ಭ್ರಮೆಗಳಾಗುತ್ತವೆ. ಇಲ್ಲದಿರುವುದು ಇದ್ದಂತೆ ಕಾಣುತ್ತದೆ ಕೇಳುತ್ತದೆ. ಅನುಭಾವವಾಗುತ್ತದೆ.

ಮಾನಸಿಕ ರೋಗ ಅಥವಾ ದೈಹಿಕ ಕಾಯಿಲೆಗಳ ಮುಖ್ಯಲಕ್ಷಣವಾಗಿ ಈ ಭ್ರಮೆ ಕಾಣಿಸಿಕೊಳ್ಳಬಹುದು. ಮೆದುಳಿನಲ್ಲಿ ರಾಸಾಯನಿಕ ಏರುಪೇರಿನ ಪರಿಣಾಮವಾಗಿಯೂ ಇಂತಹ ಭ್ರಮೆ ಉಂಟಾಗುತ್ತದೆ.

**HAY FEVER** (ಹೇ ಫೀವರ್): ಧೂಳು ಸೇವನೆಯಿಂದ ಕಾಣಿಸಿಕೊಳ್ಳುವ ಈ ಅಲರ್ಜಿಯು, ಸಾಮಾನ್ಯ ನೆಗಡಿಯಂತಹ ರೋಗಲಕ್ಷಣಗಳನ್ನು ಹೊಂದಿರುತ್ತದೆ.

**HEART** (ಹಾರ್ಟ್): ಹೃದಯ; ಮುಷ್ಟಿ ಗಾತ್ರದ, ಮಾಂಸಖಂಡಗಳ ಟೊಳ್ಳು ಅಂಗ ಈ ಹೃದಯ. ಇದು ಎದೆಗೂಡಿನ ಕೆಳಭಾಗದ ಮಧ್ಯದಲ್ಲಿರುತ್ತದೆ. ಇದರ ಅವಿರತ ಬಡಿತದಿಂದಾಗಿ ರಕ್ತ ದೇಹಪೂರ್ತಿ ಪರಿಚಲನೆ ಹೊಂದುತ್ತದೆ.

**HEART ATTACK** (ಹಾರ್ಟ್ ಅಟ್ಯಾಕ್): ಹೃದಯಾಘಾತ; ಇದ್ದಕ್ಕಿದ್ದಂತೆ ಹೃದಯದ ಕಾರ್ಯಕ್ಷಮತೆ ಕ್ಷೀಣಿಸುವ ಅಸಹಜ ದೇಹ ಸ್ಥಿತಿ. ಇದನ್ನು ವೈದ್ಯಕೀಯ ಪರಿಭಾಷೆಯಲ್ಲಿ ಮಯೋಕಾರ್ಡಿಯಲ್ ಇನ್‌ಫಾರ್‌ಕ್ಷನ್ (Myocardial Infarction) ಅಥವಾ ಹೃದಯಾಘಾತ ಎನ್ನುತ್ತಾರೆ.

ಬೇರೆಲ್ಲ ಮಾಂಸಖಂಡಗಳಿಗೆ ಅವಶ್ಯವಿರುವಂತೆ, ಹೃದಯದ ಮಾಂಸ-ಖಂಡಗಳಿಗೂ ಕೂಡ ತಮ್ಮ ಕೆಲಸ ನಿರ್ವಹಿಸಲು ಆಮ್ಲಜನಕದ ಅವಶ್ಯಕತೆ ಇರುತ್ತದೆ. ಈ ಆಮ್ಲಜನಕ ಪೂರಿತ ರಕ್ತವನ್ನು ಹೃದಯ ಮಾಂಸಖಂಡಗಳಿಗೆ

ಪೂರೈಸಲು ಕರೋನರಿ ರಕ್ತನಾಳ ವ್ಯವಸ್ಥೆಯಿರುತ್ತದೆ. ಈ ವ್ಯವಸ್ಥೆಯಲ್ಲಿನ ಅಡಚಣೆ ಅಥವಾ ಘಾಸಿಯಿಂದಾಗಿ ಆಮ್ಲಜನಕವು ಹೃದಯ ಮಾಂಸ-ಖಂಡಗಳಿಗೆ ಸರಬರಾಜು ಆಗದೇ ಹೋದರೆ ಹೃದಯಾಘಾತ ಸಂಭವಿಸುತ್ತದೆ.

ಎದೆಯ ಮಧ್ಯಭಾಗದಲ್ಲಿ ಅನವಶ್ಯಕ ಒತ್ತಡ, ಹಿಸುಕುವಿಕೆ, ಮಂದ ನೋವು ಕಾಣಿಸಿಕೊಳ್ಳುವುದು ಮತ್ತು ಈ ನೋವು, ಭುಜ, ಕೈಗಳು, ಕುತ್ತಿಗೆ ಅಥವಾ ದವಡೆಗೆ ವಿಸ್ತರಿಸುವುದು, ಬೆವರುವಿಕೆ, ವಾಕರಿಕೆ, ವೇಗದ ಉಸಿರಾಟ, ನಿಶ್ಶಕ್ತಿ ಇವೆಲ್ಲವೂ ಈ ಕಾಯಿಲೆಯ ಮುನ್ಸೂಚನಾ ಲಕ್ಷಣಗಳಾಗಿವೆ.

**HEAT CRAMPS** (ಹೀಟ್ ಕ್ರ್ಯಾಂಪ್ಸ್): ಬೇಗೆಯ ಸೇದು; ಲವಣದ ಅತಿಯಾದ ನಷ್ಟ (ಹೊರ ಹಾಕುವಿಕೆ)ದಿಂದಾಗಿ ಕಾಣಿಸಿಕೊಳ್ಳುವ ತೀವ್ರ ತೆರನಾದ ಸೆಳೆತ, ಹಿಡಿತ.

**HEMATEMESIS** (ಹಿಮ್ಯಾಟಮಿಸಿಸ್): ರಕ್ತವಾಂತಿ; ಅತಿಯಾದ ಆಲ್ಕೋಹಾಲ್ ಸೇವನೆಯಂತಹ ಕಾರಣಗಳಿಂದಾಗಿ ಜಠರ ಭಾಗ ಘಾಸಿಗೊಂಡಾಗ ರಕ್ತವಾಂತಿಯನ್ನು ಕಾಣಬಹುದು. ಇಲ್ಲವೆ ಇದು ತೀವ್ರ ತೆರನಾದ ರೋಗಗಳಾದ ಕ್ಯಾನ್ಸರ್ ಮತ್ತು ಹೊಟ್ಟೆ ಹುಣ್ಣು (ಅಲ್ಸರ್) ಇತ್ಯಾದಿಗಳ ಮುನ್ಸೂಚನಾ ರೋಗಲಕ್ಷಣವಾಗಿರಬಹುದು.

**HEMATOLOGY** (ಹೆಮಟಾಲಜಿ): ರಕ್ತ, ರಕ್ತವನ್ನು ಉತ್ಪಾದಿಸುವ ಅಂಗಗಳು ಮತ್ತು ಅದಕ್ಕೆ ಸಂಬಂಧಿಸಿದ ರೋಗಗಳ ಅಧ್ಯಯನ ಶಾಖೆ.

**HEMATOMA** (ಹೆಮಟೋಮ): ರಕ್ತದಿಂದಾಗಿ ಉಂಟಾಗುವ ಊತ/ಗೆಡ್ಡೆ. ಸಾಮಾನ್ಯವಾಗಿ ರಕ್ತಹೆಪ್ಪುಗಟ್ಟುವುದರಿಂದ ಇದು ಉಂಟಾಗುತ್ತದೆ.

**HEMOGLOBIN** (ಹಿಮೋಗ್ಲೋಬಿನ್): ಕೆಂಪು ಬಣ್ಣಕ್ಕೆ ಕಾರಣವಾದ ಮತ್ತು ಆಮ್ಲಜನಕ ಸರಬರಾಜಿಗೆ ಸಹಾಯ ಮಾಡುವ ಕೆಂಪು ರಕ್ತಕಣಗಳ ಅಂಶ. ಸಾಮಾನ್ಯವಾಗಿ ಪ್ರತಿ 100 ಮಿಲಿ ರಕ್ತದಲ್ಲಿ 12ರಿಂದ 14 ಗ್ರಾಂ ಇರಬೇಕು. 10 ಗ್ರಾಂಗಿಂತ ಕಡಿಮೆ ಇದ್ದರೆ ಅನೀಮಿಯಾ ಎನ್ನಲಾಗುತ್ತೆ.

**HEMOPHILIA** (ಹೀಮೋಫಿಲಿಯ): ಕುಸುಮರೋಗ: ರಕ್ತಹೆಪ್ಪುಗಟ್ಟುವಿಕೆಯ ವ್ಯವಸ್ಥೆಯಲ್ಲಿ ವ್ಯತ್ಯಯ ಉಂಟಾಗಿ ಸಣ್ಣ ರೀತಿಯ ಗಾಯಗಳಿಂದಲೂ ಅತಿಯಾಗಿ ರಕ್ತಸ್ರಾವವಾಗುವಂತಹ ಆನುವಂಶೀಯ ಕಾಯಿಲೆ.

**HEMORRHAGE** (ಹೆಮರೇಜ್): ರಕ್ತಸ್ರಾವ; ರಕ್ತನಾಳಗಳಿಂದ ರಕ್ತ ಹೊರಹರಿಯುವುದು.

**HEPATITIS** (ಹೆಪಟೈಟಿಸ್): ಈಲಿಯುರಿತ; ಯಕೃತ್‌ನ (ಲಿವರ್) ಉರಿಯೂತ.

ಕಾಮಾಲೆಯಂತಹ ರೋಗಲಕ್ಷಣವನ್ನು ಪ್ರಕಟಿಸುವ ವೈರಸ್ ಸೋಂಕನ್ನೆ ಹೆಪಟೈಟಿಸ್ ಎನ್ನುತ್ತಾರೆ. ಅವುಗಳಲ್ಲಿ ಹೆಪಟೈಟಿಸ್ 'ಎ' ಮತ್ತು ಹೆಪಟೈಟಿಸ್ 'ಬಿ' ಮುಖ್ಯವಾದವುಗಳು.

ಹೆಪಟೈಟಿಸ್ 'ಎ'ಯು ಕಲುಷಿತ ಆಹಾರ, ನೀರು ಮತ್ತು ಸೋಂಕಿತ ವ್ಯಕ್ತಿಯ ಮಲದ ಸಂಪರ್ಕದಿಂದ ಹರಡುತ್ತದೆ.

ಹೆಪಟೈಟಿಸ್ 'ಬಿ' ವೈರಾಣು ರಕ್ತ, ಜೊಲ್ಲು, ವೀರ್ಯ, ಮೂತ್ರ ಮತ್ತು ಕಣ್ಣೀರಿನಂತಹ ದೇಹದ ದ್ರಾವಣಗಳಿಂದ ಹರಡುತ್ತದೆ.

ಸುಸ್ತಾಗುವಿಕೆ, ಕೀಲು ಮತ್ತು ಮಾಂಸಖಂಡಗಳ ನೋವು, ಹಸಿವಾಗದಿರುವಿಕೆ, ವಾಕರಿಕೆ, ವಾಂತಿ ಮತ್ತು ಭೇದಿಯಂತಹ ಲಕ್ಷಣಗಳೊಂದಿಗೆ ಸಣ್ಣ ಪ್ರಮಾಣದ ಜ್ವರವನ್ನು ಹೊಂದಿರುತ್ತದೆ. ರೋಗ ಉಲ್ಬಣಗೊಂಡಂತೆ ಪಿತ್ತಾಶಯ ಗಾತ್ರದಲ್ಲಿ ದೊಡ್ಡದಾಗಿ, ನೋವುಪೂರಿತವಾಗಿರುತ್ತದೆ. ಪಿತ್ತರಸದಲ್ಲಿರುವ ಬೈಲ್ ಅಂಶಗಳು ರಕ್ತದಲ್ಲಿ ಅತಿಯಾಗಿ ಶೇಖರಣೆಗೊಳ್ಳುವುದರಿಂದ ಚರ್ಮ ಮತ್ತು ಕಣ್ಣಿನ ಬಿಳಿ ಭಾಗ ಹಳದಿ ಬಣ್ಣಕ್ಕೆ ತಿರುಗಿ ಕಾಮಾಲೆ (ಜಾಂಡೀಸ್) ಉಂಟಾಗುತ್ತದೆ.

**HEREDITY** (ಹೆರಿಡಿಟಿ): ವಂಶಪರಂಪರೆ, ಆನುವಂಶಿಕ; ತಂದೆ–ತಾಯಿಗಳಿಂದ ಗುಣಲಕ್ಷಣಗಳು ಮಗುವಿಗೆ ವರ್ಗಾವಣೆ ಹೊಂದುವುದು.

**HERNIA** (ಹರ್ನಿಯಾ): ಬೊಂರು, ಬಟ್ಟೆ; ಹೊಟ್ಟೆಯ ಬಿತ್ತಿಯಲ್ಲಿನ ನ್ಯೂನತೆಯಿಂದಾಗಿ ಅಂಗ (ಕರುಳು) ಪೊರೆ (ಪದರ)ಯನ್ನು ಮೀರಿ ಹೊರ ಬಂದಿರುವ ಸ್ಥಿತಿ.

**HERPES** (ಹರ್ಪಿಸ್): ಉರಿಗೆಂಜ, ಹುರುಕು; ಸರ್ಪಸುತ್ತು: ಚರ್ಮ ಅಥವಾ ಶ್ಲೇಷ್ಮ ಪದರದ ಮೇಲೆ ಕಾಣಿಸಿಕೊಳ್ಳುವ ಸಣ್ಣ ಸಣ್ಣ ಗುಳ್ಳೆಗಳ ಸಮೂಹದ ಲಕ್ಷಣವನ್ನು ಹೊಂದಿರುವ ಯಾವುದೇ ರೀತಿಯ ವೈರಸ್ ಸೋಂಕು.

ಬಾಯಿ ಮತ್ತು ಜನನಾಂಗಗಳ ಸುತ್ತ ಈ ರೀತಿಯ ಗುಳ್ಳೆಗಳು ಆಗಿಂದಾಗ್ಗೆ ಕಾಣಿಸಿಕೊಳ್ಳುವ ಲಕ್ಷಣವನ್ನು ಹೊಂದಿರುವ ಹರ್ಪಿಸ್ ಸಿಂಪ್ಲೆಕ್ಸ್ ಇವುಗಳಲ್ಲಿ ಮುಖ್ಯವಾದುದು. ಹರ್ಪಿಸ್ ಜೋಸ್ಟರ್ ಎನ್ನುವ ಇನ್ನೊಂದು ವಿಧವೂ ಇದೆ.

**HOOK WORM** (ಹುಕ್ ವರ್ಮ್): ಕೊಕ್ಕೆಹುಳು; ಸಣ್ಣಕರುಳಿನಲ್ಲಿ ಕಾಣಸಿಗುವ, ರಕ್ತವನ್ನು ಹೀರುವ ಪರಾವಲಂಬಿ ಜೀವಿಗಳು. ಕಲುಷಿತ ಮಣ್ಣಿನಲ್ಲಿರುವ

ಇವು ಚರ್ಮದ ಮೂಲಕ ದೇಹವನ್ನು ಪ್ರವೇಶಿಸುತ್ತವೆ. ಇವುಗಳಿಂದಾಗಿ ಮಕ್ಕಳಲ್ಲಿ ಆಘಾತಕಾರಿ ರಕ್ತಹೀನತೆ ತಲೆದೋರಬಹುದು.

**HORMONE** (ಹಾರ್ಮೋನ್): ಚೋದನಿ, ರಸದೂತ; ಗ್ರಂಥಿಗಳಿಂದ ಸ್ರವಿಸಲ್ಪಟ್ಟು, ನೇರವಾಗಿ ರಕ್ತಕ್ಕೆ ಸೇರಿ ದೇಹದ ನಿರ್ದಿಷ್ಟ ಕೋಶ ಅಥವಾ ಅಂಗಗಳ ಕ್ರಿಯೆಯ ಮೇಲೆ ಪ್ರಭಾವ ಬೀರಬಲ್ಲ ಪದಾರ್ಥಗಳು.

**HOST** (ಹೋಸ್ಟ್): ಆಸರೆ ನೀಡುವವ; ಪರಾವಲಂಬಿ ಜೀವಿ, ಸೋಂಕು, ಇತ್ಯಾದಿಗಳಿಗೆ ಸೂಕ್ತ ವಾತಾವರಣದ ಮೂಲಕ ಆಶ್ರಯ ನೀಡುವಂತಹ ವ್ಯಕ್ತಿ, ಪ್ರಾಣಿ, ಸಸ್ಯ ಅಥವಾ ಅಂಗ ಇಲ್ಲವೆ ಯಾವುದೇ ರೀತಿಯ ಜೀವಂತ ವಸ್ತು.

**HYPERGLYCEMIA** (ಹೈಪರ್ ಗ್ಲೈಸೀಮಿಯ): ರಕ್ತದಲ್ಲಿ ಸಕ್ಕರೆಯ ಅಂಶ ಹೆಚ್ಚಾಗಿರುವುದು. (ಮಧುಮೇಹದ ಸ್ಥಿತಿ)

**HYPERTENSION** (ಹೈಪರ್ ಟೆನ್ಷನ್): ಏರೊತ್ತಡ; ಅಧಿಕ ರಕ್ತದೊತ್ತಡ; ಸಾಮಾನ್ಯ ಒತ್ತಡಕ್ಕಿಂತ ಹೆಚ್ಚಿನ ಒತ್ತಡದಲ್ಲಿ ರಕ್ತ ಪ್ರವಹಿಸುವುದರಿಂದ ರಕ್ತನಾಳಗಳ ಮೇಲೆ ಹೆಚ್ಚಿನ ಒತ್ತಡ ಬಿದ್ದು ಅವು ಗಾಯಗಳಿಗೆ ಒಳಗಾಗಬಹುದು. ಇದರಿಂದಾಗಿ ರಕ್ತ ಪರಿಚಲನೆಯಲ್ಲಿ ಏರು–ಪೇರು ಉಂಟಾಗಬಹುದು.

ಸಾಮಾನ್ಯ ರಕ್ತದೊತ್ತಡವು 120/80 ಪಾದರಸ ಇರುತ್ತದೆ. 120 ಹೃದ್ಸಂಕೋಚನಾ ಒತ್ತಡವಾದರೆ, 80 ಹೃದ್ವಿಕೋಚನದ ಒತ್ತಡವಾಗಿರುತ್ತದೆ.

**HYPER THYROIDISM** (ಹೈಪರ್ ಥೈರಾಯ್ಡಿಸಂ): ಥೈರಾಯ್ಡ್ ಗ್ರಂಥಿಯ ಚಟುವಟಿಕೆಯನ್ನು ಹೆಚ್ಚಿಸುವಂತಹ ಯಾವುದೇ ರೀತಿಯ ಕಾಯಿಲೆ/ರೋಗ. ಈ ಸ್ಥಿತಿಯಿಂದಾಗಿ ದೇಹದ ಉಷ್ಣತೆ ಹೆಚ್ಚಾಗುವುದು, ದೇಹದ ತೂಕ ಕ್ಷೀಣಿಸುವುದು, ಋತುಚಕ್ರದಲ್ಲಿ ಏರುಪೇರು ಇಲ್ಲವೆ ಸಂಪೂರ್ಣ ಸ್ಥಗಿತ, ಅತಿಯಾದ ಹೃದಯ ಬಡಿತ, ನಡುಕ ಮುಂತಾದ ಲಕ್ಷಣಗಳು ಕಾಣಿಸಿಕೊಳ್ಳಬಹುದಾಗಿದೆ.

**HYPER VENTILATION** (ಹೈಪರ್ ವೆಂಟೀಲೇಷನ್): ಏರುಸಿರಾಟ; ಅಸಹಜವಾದ ಕ್ಷಿಪ್ರ ಅಥವಾ ದೀರ್ಘ ಉಸಿರಾಟ. ಇದರಿಂದಾಗಿ ಇಂಗಾಲದ ಡೈಆಕ್ಸೈಡ್ ದೇಹದಲ್ಲಿ ಅತಿಯಾಗಿ ಮಂಪರು ಆವರಿಸಿದಂತಾಗಬಹುದು ಅಥವಾ ಪ್ರಜ್ಞೆ ಕೂಡ ತಪ್ಪಬಹುದು. ಆತಂಕ, ಭಯದಿಂದ ಈ ಸ್ಥಿತಿ ಬರಬಹುದು.

**HYPNOSIS** (ಹಿಪ್ನಾಸಿಸ್): ಬೇರೆಯವರ ಸಲಹೆ ಅಥವಾ ಸೂಚನೆಯಂತೆ ಸಂಪೂರ್ಣ ಜಡ ಸ್ಥಿತಿ ತಲುಪುವುದು ಅಥವಾ ಆಜ್ಞಾಧಾರಕನಾಗುವುದು.

**HYPOGLYCAEMIA** (ಹೈಪೋಗ್ಲೈಸೀಮಿಯ): ರಕ್ತದಲ್ಲಿ ಸಕ್ಕರೆಯ ಪ್ರಮಾಣವು ಕಡಿಮೆಯಾಗಿರುವುದು. ಅತಿ ಬೆವರು, ಸುಸ್ತು, ತಲೆ ಸುತ್ತು, ಅರೆ ಪ್ರಜ್ಞೆ, ಕೋಮಾ ಕಾಣಿಸಿಕೊಳ್ಳುತ್ತದೆ. ಕೂಡಲೇ ಸಕ್ಕರೆ ತಿನ್ನಬೇಕು.

**HYPOTENSION** (ಹೈಪೋಟೆನ್ಷನ್): ಇಳಿದೊತ್ತಡ; ಕಡಿಮೆ ರಕ್ತದೊತ್ತಡ. ರಕ್ತಸ್ರಾವ, ಶಾಕ್‌ನಿಂದ ಇದಾದಾಗ ಪ್ರಾಣಾಪಾಯ ಉಂಟಾಗುತ್ತದೆ.

**HYPOXIA** (ಹೈಪಾಕ್ಸಿಯ): ಆಮ್ಲಜನಕದ ಕೊರತೆ; ದೇಹದಲ್ಲಿ ಆಮ್ಲಜನಕದ ಪ್ರಮಾಣ ಕಡಿಮೆಯಾಗುವ ಸ್ಥಿತಿ.

**HYSTERIA** (ಹಿಸ್ಟೀರಿಯಾ): ಉನ್ಮಾದ; ಅತಿಯಾದ ಭಾವೋದ್ರೇಕದ ಸ್ಥಿತಿ. ಅನೇಕ ಮನೋ ದೈಹಿಕ ರೋಗಲಕ್ಷಣ ಕಾಣಿಸಿಕೊಳ್ಳುತ್ತವೆ. ಇದು ಮಹಿಳೆ-ಮಕ್ಕಳಲ್ಲಿ ಹೆಚ್ಚು.

# I

**IMPETIGO** (ಇಂಪೆಟಿಗೋ): ತುರಿಕೆ; ಸಾಮಾನ್ಯವಾಗಿ ಮಕ್ಕಳಲ್ಲಿ ಕಾಣಿಸಿಕೊಳ್ಳುವ ಗುಳ್ಳೆಗಳಂತಹ ಲಕ್ಷಣಗಳ ಚರ್ಮದ ಸೋಂಕು.

**INDIGESTION** (ಇನ್-ಡೈಜೇಷನ್): ಅಜೀರ್ಣ, ಅಸಂತುಲಿತ ಜೀರ್ಣಕ್ರಿಯೆ.

ಗಡರಿಕೆ, ಹೊಟ್ಟೆನೋವು, ಹೊಟ್ಟೆ ಭರ್ತಿಯಾದಂತಹ ಅನುಭವ, ಹುಳಿರುಚಿ ಅನುಭವ, ಕೆಲವೊಮ್ಮೆ ವಾಕರಿಕೆಯಂತಹ ಲಕ್ಷಣಗಳನ್ನೂ ಈ ಸ್ಥಿತಿ ಹೊಂದಿರುತ್ತದೆ.

**INFECTION** (ಇನ್‌ಫೆಕ್ಷನ್): ಸೋಂಕು; ದೇಹಕ್ಕೆ ಹಾನಿಕಾರಕ ಪರಿಣಾಮ ಉಂಟುಮಾಡಬಹುದಾದ ಜೀವಿಗಳು, ಉದಾಹರಣೆಗೆ ಬ್ಯಾಕ್ಟೀರಿಯಾ, ಉಪಸ್ಥಿತಿ ಇರುವುದು.

**INFLAMMATION** (ಇನ್‌ಫ್ಲಾಮೇಷನ್): ಉರಿತ, ಉರಿಯೂತ; ಸೋಂಕು ಅಥವಾ ಯಾವುದೇ ರೀತಿಯ ಬಾಹ್ಯ ವಸ್ತುಗಳಿಗೆ ದೇಹ ವ್ಯಕ್ತಪಡಿಸುವ ರಕ್ಷಣಾತ್ಮಕ ಪ್ರಕ್ರಿಯೆ.

ಆ ನಿರ್ದಿಷ್ಟ ಭಾಗವು ಕೆಂಪಗೆ ಊದಿಕೊಂಡಿರುವುದರ ಜೊತೆಗೆ ಬಿಸಿಯಾಗಿ, ನೋವು ಪೂರಿತವಾಗಿರುತ್ತದೆ.

**INFLUENZA** (ಇನ್‌ಫ್ಲ್ಯುಯೆಂಜಾ): ಉರಿಶೀತ; ಉಸಿರಾಟ ವ್ಯವಸ್ಥೆಯ ಮೇಲಿನ ಭಾಗಗಳಲ್ಲಿ ಕಾಣಿಸಿಕೊಳ್ಳುವ ಒಂದು ರೀತಿಯ ಸೋಂಕು ಇದಾಗಿದೆ.

ಸಾಮಾನ್ಯ ನೆಗಡಿಯಲ್ಲಿನಂತಹ ಲಕ್ಷಣಗಳೊಂದಿಗೆ ಜ್ವರ, ಕೆಮ್ಮು, ನಡುಕ, ಮಾಂಸಖಂಡಗಳ ನೋವು, ತಲೆನೋವು ಮತ್ತು ನಿಶ್ಶಕ್ತತೆಯಂತಹ ಲಕ್ಷಣಗಳೂ ಗೋಚರಿಸುತ್ತವೆ.

**INGEST** (ಇನ್‌ಜೆಸ್ಟ್): ಸೇವನೆ; ತಿನ್ನುವುದು ಅಥವಾ ಹೀರಿಕೊಳ್ಳುವುದರ ಮೂಲಕ ದೇಹದೊಳಕ್ಕೆ ತೆಗೆದುಕೊಳ್ಳುವುದು.

**INSOMNIA** (ಇನ್‌ಸೋಮ್ನಿಯಾ): ನಿದ್ದೆಗೇಡು, ನಿದ್ರೆ ಬರದಿರುವುದು; ತುಂಬಾ ದಿನಗಳವರೆಗೆ ಸರಿಯಾಗಿ ನಿದ್ರಿಸಲು ಆಗದೇ ಇರುವ ಸ್ಥಿತಿ.

ಇದು ಅನೇಕ ಕಾರಣಗಳಿಂದ ಉಂಟಾಗುತ್ತದೆ. ಕಾಯಿಲೆಯಿಂದ ಉಂಟಾಗ ಬಹುದು. ಮುಖ್ಯವಾದ ಕಾರಣವೆಂದರೆ ಯೋಚನೆ, ಚಿಂತೆ. ಒಂದು ನಿದ್ದೆಯಿಲ್ಲದ ರಾತ್ರಿ ಮುಂದಿನ ದಿನಕ್ಕೂ ಮುಂದುವರೆಯುತ್ತದೆ. ಇದನ್ನು ಹೋಗಲಾಡಿಸಬೇಕೆಂದರೆ ನಿದ್ದೆ ಮಾಡುವುದಕ್ಕೆ ಹೋಗುವ ಮುಂಚೆ ಸ್ವಲ್ಪ ಸಮಯ ಸರಳ ವ್ಯಾಯಾಮ, ಧ್ಯಾನ ಅಥವಾ ಒಂದು ಲೋಟ ಹಾಲು ಕುಡಿಯುವುದು. ನಿದ್ರಾ ತೊಂದರೆ ವಿಪರೀತವಾದಾಗ ನಿದ್ರೆ ಮಾತ್ರೆಯನ್ನು ತುಂಬಾ ಎಚ್ಚರಿಕೆಯಿಂದ, ವೈದ್ಯರ ಸಲಹೆಯಂತೆ ಸೇವಿಸಬೇಕು.

**INSULIN** (ಇನ್ಸುಲಿನ್): ದೇಹದಲ್ಲಿರುವ ಸಕ್ಕರೆಯ ಅಂಶವನ್ನು ಹೀರಿಕೊಳ್ಳಲು ಮೇದೋಜೀರಕಾಂಗದಲ್ಲಿ ಉತ್ಪತ್ತಿಯಾಗುವ ಹಾರ್ಮೋನು. ಇದರ ಕೊರತೆಯಿಂದ ಡಯಾಬಿಟೀಸ್ ಬರುತ್ತದೆ.

**INTERNIST** (ಇಂಟರ್‌ನಿಸ್ಟ್): ವೈದ್ಯಶಾಸ್ತ್ರಜ್ಞ, ವೈದ್ಯಕೀಯವನ್ನು ಕಲಿಕೆಯವ; ಕಾಯಿಲೆಯನ್ನು ಪತ್ತೆಹಚ್ಚುವಲ್ಲಿ ಪರಿಣಿತಿ ಪಡೆದವನು ಮತ್ತು ಕಾಯಿಲೆಗೆ ಔಷಧೀಯ ಚಿಕಿತ್ಸೆ ಕೊಡುವವನು.

**INTESTINES** (ಇಂಟಸ್ಟೈನ್ಸ್): ಕರುಳು; ಜಠರದಿಂದ ಗುದದ್ವಾರದವರೆಗೂ ವಿಸ್ತಾರಗೊಂಡಿರುವ ನಾಳ. 4 ಮೀಟರ್ ಉದ್ದವಿರುತ್ತದೆ. ಆಹಾರವನ್ನು ಹೀರುವ

**IRON DEFICIENCY ANEMIA** (ಐರನ್ ಡಿಫಿಶಿಯೆನ್ಸಿ ಅನೀಮಿಯ): ಕಬ್ಬಿಣಾಂಶ ಕೊರತೆಯ ರಕ್ತಹೀನತೆ; ನಮ್ಮ ದೇಶದಲ್ಲಿ ಸರ್ವವ್ಯಾಪಿ.

ದೇಹದಲ್ಲಿ ಕಬ್ಬಿಣದ ಅಂಶ ಕಡಿಮೆಯಾಗುವುದರಿಂದ ಉಂಟಾಗುವ ರಕ್ತಹೀನತೆ. ವಿಪರೀತ ರಕ್ತಸ್ರಾವವಾಗುವುದರಿಂದ ಸಾಮಾನ್ಯವಾಗಿ ಇದು ಉಂಟಾಗುತ್ತದೆ.

**ISCHEMIA** (ಇಸ್‌ಕೀಮಿಯಾ): ದೇಹದ ಯಾವುದೇ ಭಾಗದಲ್ಲಿ ಅಥವಾ ಅಂಗದಲ್ಲಿ ರಕ್ತದ ಕೊರತೆಯುಂಟಾದಾಗ ಬರುವುದೇ ಇಸ್‌ಕೀಮಿಯಾ. ರಕ್ತನಾಳದಲ್ಲಿ ಗರಣೆ ಕಟ್ಟುವುದೇ ಸಾಮಾನ್ಯ ಕಾರಣ. (ಅತಿರೋಸ್ಕ್ಲೀರೋಸಿಸ್)

# J

**JAUNDICE** (ಜಾಂಡೀಸ್): ಕಾಮಾಲೆ, ಅರಿಶಿನ ಮುಂಡಿಗೆ; ರಕ್ತದಲ್ಲಿರುವ ಪಿತ್ತರಸದ ಅಂಶಗಳಾದ ಬೈಲ್ ಪಿಗ್ಮೆಂಟ್‌ಗಳ ಹೆಚ್ಚಳದಿಂದ ಉಂಟಾಗುವ ಸ್ಥಿತಿ. ಈ ಸ್ಥಿತಿಯಲ್ಲಿ ಕಣ್ಣಿನ ಒಳಭಾಗವು ಸೇರಿದಂತೆ ಚರ್ಮ ಮತ್ತು ಅಂಗ ಪದರ ಹಳದಿ ಬಣ್ಣಕ್ಕೆ ತಿರುಗಿರುತ್ತವೆ.

**JOINT** (ಜಾಯಿಂಟ್): ಕೀಲು, ಗೆಣ್ಣು; ಎರಡು ಮೂಳೆಗಳ ಸಂಧಿಕಟ್ಟು.

# K

**KIDNEY** (ಕಿಡ್ನಿ): ಮೂತ್ರಪಿಂಡ; ದೇಹದಲ್ಲಿ ಹೆಚ್ಚಾದ ನೀರು ಮತ್ತು ತ್ಯಾಜ್ಯ ವಸ್ತುಗಳನ್ನು ಮೂತ್ರದ ರೂಪದಲ್ಲಿ ಹೊರಹಾಕುವ ಒಂದು ಜೊತೆ ಅಂಗ.

**KIDNEY FAILURE** (ಕಿಡ್ನಿ ಫೈಲ್ಯೂರ್): ಮೂತ್ರಪಿಂಡಗಳ ವೈಫಲ್ಯ; ಮೂತ್ರಪಿಂಡಗಳ ಕ್ರಿಯೆ ಕುಗ್ಗಿ ಹೋಗುವುದರಿಂದ, ತ್ಯಾಜ್ಯ ವಸ್ತುಗಳ ವಿಸರ್ಜನೆ ನಿಂತು ದೇಹದಲ್ಲಿ ನಂಜಿನ ಅಂಶ ಹೆಚ್ಚಾಗುವ ಅಪಾಯಕಾರಿ ಸ್ಥಿತಿ.

ಮೂತ್ರಕೋಶದ ಕಲ್ಲುಗಳಿಂದಾಗಿ ಮೂತ್ರನಾಳದಲ್ಲಿ ಉಂಟಾಗುವ ಅಡಚಣೆ, ಕೆಲ ಔಷಧಿಗಳ ಅಡ್ಡ ಪರಿಣಾಮ, ಮೂತ್ರಪಿಂಡಗಳ ಸೋಂಕುಪೂರಿತ ರೋಗಗಳು, ಹೃದಯಾಘಾತ, ತೀವ್ರತರನಾದ ನಿರ್ಜಲೀಕರಣ ಸ್ಥಿತಿ, ಮೂತ್ರಪಿಂಡಗಳ ಜಾಗಕ್ಕೆ ಬೀಳುವ ಅಪಾಯಕಾರಿ ಒಡೆತ ಮುಂತಾದ ಕಾರಣಗಳಿಂದ ಇದು ಉಂಟಾಗಬಹುದಾಗಿದೆ.

ಈ ಸ್ಥಿತಿಯ ಮುಖ್ಯ ಲಕ್ಷಣವೆಂದರೆ, ವ್ಯಕ್ತಿಯ ಮೂತ್ರ ಪ್ರಮಾಣದಲ್ಲಿ ಗಣನೀಯವಾಗಿ ಕಡಿಮೆಯಾಗುವುದು. ಕಾಲುಗಳು, ಮುಖ ಊದಿಕೊಳ್ಳುತ್ತವೆ, ನಂತರದಲ್ಲಿ ಸುಸ್ತು, ಹಸಿವಿಲ್ಲದಿರುವಿಕೆ, ಭೇದಿ, ವಾಕರಿಕೆ ಮತ್ತು ಉಸಿರಾಟದ ತೊಂದರೆಯಂತಹ ಲಕ್ಷಣಗಳೂ ಕಾಣಿಸಿಕೊಳ್ಳಬಹುದು.

**KIDNEY STONES** (ಕಿಡ್ನಿ ಸ್ಟೋನ್ಸ್): ಮೂತ್ರಪಿಂಡದಲ್ಲಿ ಹರಳುಗಳು; ರಕ್ತ ಮತ್ತು ಮೂತ್ರದಲ್ಲಿ ಲವಣಾಂಶಗಳ ಘನೀಕರಿಸುವಿಕೆಯಿಂದಾಗಿ ಮೂತ್ರನಾಳಗಳಲ್ಲಿ ಕಾಣಿಸಿಕೊಳ್ಳುವ ಲವಣಗಳ ಹರಳುಗಳು.

# L

**LARYNX** (ಲ್ಯಾರಿಂಕ್ಸ್): ಧ್ವನಿಪೆಟ್ಟಿಗೆ; ಶ್ವಾಸನಾಳ ವ್ಯವಸ್ಥೆಯ ಮೇಲಿನ ಭಾಗದಲ್ಲಿರುವ ಇದು ಗಾಳಿಯ ವಿವಿಧ ತರಂಗಾಂತರದ ಅಲೆಗಳನ್ನು ಉತ್ಪಾದಿಸಿ ಶಬ್ದವನ್ನು ಹೊರಡಿಸಲು ಸಹಾಯ ಮಾಡುತ್ತದೆ.

**LARYNGITIS** (ಲ್ಯಾರಿಂಜೈಟಿಸ್): ದನಿನಾಳುರಿತ; ಧ್ವನಿಪೆಟ್ಟಿಗೆಯ ಉರಿಯೂತ; ಕೆಮ್ಮು ಅಥವಾ ನೆಗಡಿಯಂತಹ ಕಾಯಿಲೆಗಳಿಂದ ಉಂಟಾಗುವ ಸೋಂಕು. ಧೂಮಪಾನ, ಧೂಳು ಅಥವಾ ವಾಯು ಮಾಲಿನ್ಯದಿಂದ ಉಂಟಾಗುವ ಧ್ವನಿಪೆಟ್ಟಿಗೆಯ ಪದರದ ಕಿರಿಕಿರಿಯಿಂದಾಗಿ ಇದು ಉಂಟಾಗಬಹುದು.

ಧ್ವನಿಯಲ್ಲಿ ವ್ಯತ್ಯಯವಾಗುವಿಕೆ, ಗಂಟಲಿನಲ್ಲಿ ಕಿರಿಕಿರಿ ಮತ್ತು ಮಾತನಾಡುವಾಗ ನೋವಾಗುವಿಕೆಯಂತಹ ಲಕ್ಷಣಗಳು ಗೋಚರಿಸುತ್ತವೆ.

**LEPROSY** (ಲೆಪ್ರಸಿ): ಕುಷ್ಠರೋಗ; ಸ್ಪರ್ಶಜ್ಞಾನವನ್ನು ಕಳೆದುಕೊಳ್ಳುವಂತಹ ಲಕ್ಷಣವುಳ್ಳ ಬ್ಯಾಕ್ಟೀರಿಯಾದಿಂದ ಉಂಟಾಗುವ ಸೋಂಕು. ಪ್ರಾಥಮಿಕ ಹಂತದಲ್ಲೆ ಸೂಕ್ತ ಚಿಕಿತ್ಸೆಯನ್ನು ನೀಡದೆ ಹೋದರೆ, ಮಾಂಸಖಂಡಗಳ ಕೃಶತೆ (ನಾಶ) ಮತ್ತು ಅಂಗಗಳ ವಿರೂಪತೆ ಉಂಟಾಗಬಹುದಾಗಿದೆ.

**LESION** (ಲೀಶನ್): ಅಂಗಾಯ; ಗಾಯ, ಕಾಯಿಲೆ, ಅಸಹಜ ಬೆಳವಣಿಗೆಗಳಂತಹ ಕಾರಣಗಳಿಂದಾಗಿ ಅಂಗಾಂಶದ ಸಾಮಾನ್ಯ ಸ್ಥಿತಿ ಅಥವಾ ರಚನೆಯಲ್ಲಿ ಬದಲಾವಣೆಯಾಗುವಿಕೆ.

**LETHARGY** (ಲೆತಾರ್ಜಿ): ಶಕ್ತಿಯ ಅಸಹಜ ರೀತಿಯ ಕೊರತೆ, ಅಶಕ್ತತೆ.

**LEUKEMIA** (ಲ್ಯುಕೇಮಿಯ): ಬಿಳಿರಕ್ತಕಣ ಮತ್ತು ಅವುಗಳ ಉತ್ಪಾದನೆಯಲ್ಲಿ ಪ್ರಮುಖ ಪಾತ್ರವಹಿಸುವ ಮೂಳೆ ಮಜ್ಜೆಯಲ್ಲಿ ಕಾಣಿಸಿಕೊಳ್ಳಬಹುದಾದ ಅನೇಕ ರೀತಿಯ ಅಪಾಯಕಾರಿ ಕಾಯಿಲೆ. ರಕ್ತದ ಕ್ಯಾನ್ಸರ್.

ಮೂಳೆಮಜ್ಜೆಯಲ್ಲಿ ಕಾಣಿಸಿಕೊಳ್ಳುವ ವ್ಯತ್ಯಯದಿಂದಾಗಿ ಅತಿಯಾದ ಪ್ರಮಾಣದಲ್ಲಿ ಬಿಳಿರಕ್ತಕಣಗಳು ಉತ್ಪಾದನೆಯಾಗುತ್ತವೆ. ಇವುಗಳಲ್ಲಿ ಬಹುತೇಕ ಅಪಕ್ವತೆ ಇಲ್ಲವೆ ಹಾನಿಯಿಂದ ಕೂಡಿರುತ್ತವೆ. ಇಂತಹ ಅಸಮರ್ಥ ಬಿಳಿರಕ್ತಕಣಗಳಿಂದಾಗಿ ದೇಹದ ರೋಗನಿರೋಧಕ ಶಕ್ತಿಯು ಕುಗ್ಗುತ್ತದೆ.

**LEUKOCYTE** (ಲ್ಯೂಕೋಸೈಟ್): ರಕ್ತದಲ್ಲಿ ಕಾಣಸಿಗುವ ಬಣ್ಣವಿಲ್ಲದ ಬಿಳಿರಕ್ತಕಣಗಳು. ದೇಹದ ರೋಗನಿರೋಧಕ ಶಕ್ತಿಗೆ ಇವು ತುಂಬಾ ಅತ್ಯವಶ್ಯಕ.

**LIPOMA** (ಲೈಪೋಮ): ವಸೆಗಂತಿ; ಕೊಬ್ಬು ಅಂಗಾಂಶಗಳಲ್ಲಿ ಕಾಣಿಸಿಕೊಳ್ಳುವ, ಇನ್ನೂ ಪ್ರಾರಂಭಿಕ ಹಂತದಲ್ಲಿರುವ ಅಪಾಯಕಾರಿಯಲ್ಲದ ಗಡ್ಡೆ.

**LIVER** (ಲಿವರ್): ಈಲಿ, ಪಿತ್ತಜನಕಾಂಗ; ಯಕೃತ್ತು ಉದರ ಕುಹರದ ಮೇಲ್ಭಾಗದಲ್ಲಿರುವ ದೇಹದ ಅತ್ಯಂತ ದೊಡ್ಡ ಅಂಗ.

ರಕ್ತ ಹೆಪ್ಪುಗಟ್ಟುವಿಕೆಗೆ ಅವಶ್ಯವಿರುವ ಅಂಶಗಳ ಉತ್ಪಾದನೆ, ಕರುಳಿನಲ್ಲಿ ಹೀರಲ್ಪಟ್ಟ ಪೋಷಕಾಂಶಗಳ ಮುಂದುವರಿದ ಪ್ರಕ್ರಿಯೆ, ರಕ್ತದಲ್ಲಿನ ನಂಜುಕಾರಕ ತ್ಯಾಜ್ಯ ವಸ್ತುಗಳ ಹೊರತೆಗೆಯುವಿಕೆ, ಜೀರ್ಣಕ್ರಿಯೆಗೆ ಅನುಕೂಲವಾಗುವ ಬೈಲ್ ರಸ (ಪಿತ್ತರಸ)ದ ಉತ್ಪಾದನೆ ಸೇರಿದಂತೆ ಅನೇಕ ಉಪಯೋಗಕಾರಿ ಕ್ರಿಯೆಗಳಲ್ಲಿ ಇದು ಪಾಲ್ಗೊಳ್ಳುತ್ತದೆ.

**LYMPHOCYTE** (ಲಿಂಫೋಸೈಟ್): ಹಾಲ್ರಸಕಣ; ದುಗ್ಧ ಅಂಗಾಂಶ (ಲಿಂಫ್ಯಾಟಿಕ್)ಗಳಲ್ಲಿ ಉತ್ಪತ್ತಿಯಾಗುವ ಒಂದು ಬಗೆಯ ಬಿಳಿರಕ್ತಕಣ. ಎರಡು ಬಗೆ: ಟಿ.ಲಿಂಫೋಸೈಟ್ ಮತ್ತು ಬಿ.ಲಿಂಫೋಸೈಟ್

ದೇಹಕ್ಕೆ ಸೇರ್ಪಡೆಯಾದ ಪ್ರತಿ ವಿಷಜನಕ (ಆ್ಯಂಟಿಜೆನ್) ವಸ್ತುವಿನ ಗುಣಲಕ್ಷಣಗಳನ್ನು ಗುರುತಿಸಿ, ಅದನ್ನು ತಟಸ್ಥಗೊಳಿಸಬಲ್ಲಂತಹ ದೇಹ ರಕ್ಷಣಾ ವಸ್ತು (ಆ್ಯಂಟಿಬಾಡಿ)ವನ್ನು ಉತ್ಪಾದಿಸಿ, ದೇಹದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವಲ್ಲಿ ಮುಖ್ಯಪಾತ್ರವಹಿಸುತ್ತದೆ.

**LYMPHOMA** (ಲಿಂಫೋಮ): ದುಗ್ಧ ಅಂಗಾಂಶಗಳಲ್ಲಿ, ಮುಖ್ಯವಾಗಿ ದುಗ್ಧಗಂಟು (ಲಿಂಫ್ ನೋಡ್)ಗಳಲ್ಲಿ ಕಾಣಿಸಿಕೊಳ್ಳುವ ಕ್ಯಾನ್ಸರ್.

# M

**MALAISE** (ಮಲೈಸ್): ಸುಸ್ತು; ರೋಗದ ಆರಂಭಿಕೆಯನ್ನು ಸೂಚಿಸಬಲ್ಲಂತಹ ಅಸೌಖ್ಯತೆ ಅಥವಾ ದೈಹಿಕ ಕ್ಷೀಣಿಸುವಿಕೆ.

**MALARIA** (ಮಲೇರಿಯಾ): ಮಲೇರಿಯಾ; ಸೊಳ್ಳೆಗಳಿಂದ ಹರಡಬಹುದಾದ ಒಂದು ಸೋಂಕು. ಅತಿಯಾದ ಜ್ವರ-ಚಳಿ ಮತ್ತು ಬೆವರುವಿಕೆಯೊಂದಿಗೆ ತಲೆನೋವು ಹಾಗೂ ಬಲಹೀನತೆಯಂತಹ ಲಕ್ಷಣಗಳನ್ನು ಇದು ಒಳಗೊಂಡಿರುತ್ತದೆ.

**MALIGNANT** (ಮ್ಯಾಲಿಗ್ನೆಂಟ್): ಜೀವಕಳೆವ, ವಿಷಮ; ಆರೋಗ್ಯಕ್ಕೆ ತೀವ್ರ ರೀತಿಯ ಅಪಾಯಕಾರಿಯಾದದ್ದು ಮತ್ತು ಸರಿಸುಮಾರು ಮಾರಣಾಂತಿಕ-ವಾದದ್ದು ಎಂಬುದನ್ನು ಸೂಚಿಸುವುದು.

**MAL-OCCLUSION** (ಮಾಲ್ ಅಕ್ಲೂಶನ್): ಮೇಲ್ದವಡೆ ಮತ್ತು ಕೆಳ ದವಡೆಯ ಹಲ್ಲುಗಳನ್ನು ಪರಸ್ಪರ ಕಚ್ಚಿದಾಗ ಅವುಗಳು ವ್ಯವಸ್ಥಿತವಾಗಿ ಸಂಧಿಸದೇ ಇರುವುದು.

**MASTOID BONE** (ಮ್ಯಾಸ್ಟಾಯ್ಡ್ ಬೋನ್): ಕಿವಿಯ ಹಿಂಬದಿಯಲ್ಲಿರುವ ಉಬ್ಬಿನಂತಹ ಮೂಳೆ.

**MEASLES** (ಮೀಝಲ್ಸ್): ದಡಾರ; ರುಬ್ಯುಲಾ ಎಂಬ ವೈರಸ್‌ನಿಂದ ಮಕ್ಕಳಲ್ಲಿ ಕಾಣಿಸಿಕೊಳ್ಳುವ ರೋಗ.

ರೋಗದ ಪ್ರಾರಂಭಿಕ ಹಂತದಲ್ಲಿ ಮೂಗಿನಲ್ಲಿ ಸಿಂಬಳ ಇಳಿಯುವುದು, ಸೀನುವಿಕೆ, ಕಣ್ಣಿನಲ್ಲಿ ನೀರು ಇಳಿಯುವುದು, ಕೆಮ್ಮು ಮತ್ತು ಜ್ವರದಂತಹ ಲಕ್ಷಣಗಳಿರುತ್ತವೆ. ಸ್ವಲ್ಪ ದಿನಗಳ ನಂತರ ಮಗು ಬೆಳಕಿಗೆ ಅತಿಯಾದ ಸ್ಪಂದನೆ ಹೊಂದಿರುತ್ತದೆ, ಜ್ವರದಲ್ಲಿ ಇಳಿಮುಖವಾಗಿರುತ್ತದೆ, ಬಾಯಿಯಲ್ಲಿ ರೋಗಲಕ್ಷಣದ ಕಲೆಗಳಾಗುತ್ತವೆ. ಇದಾದ ನಂತರ ಮತ್ತೆ ಜ್ವರ ಅಧಿಕವಾಗುತ್ತದೆ. ಮುಖ, ಕುತ್ತಿಗೆ, ಕಿವಿಯ ಹಿಂಬದಿಯಲ್ಲಿ ಗುಳ್ಳೆಗಳು ಕಾಣಿಸಿಕೊಂಡು, ಕ್ರಮೇಣ ಇಡೀ ದೇಹಕ್ಕೆ ಹರಡಿಬಿಡುತ್ತವೆ.

**MELANOMA** (ಮೆಲನೋಮ): ಕರ್ವಣ್ಣಗಂತಿ, ಕೃತಕ ಕರ್ವಣ್ಣ; ಕಪ್ಪು ಬಣ್ಣಕ್ಕೆ ಕಾರಣವಾದ ಕೋಶಗಳ ಗಡ್ಡೆ (ಕ್ಯಾನ್ಸರ್).

**MENINGITIS** (ಮೆನಿಂಜೈಟಿಸ್): ಮಿದುಳ್ಪರೆಯುರಿತ; ಮೆದುಳು ಮತ್ತು ಬೆನ್ನುಹುರಿಯನ್ನು ಸುತ್ತುವರೆದಿರುವ ಪದರದ ಉರಿಯೂತ.

**MENSTRUATION** (ಮೆನ್‌ಸ್ಟ್ರುಯೇಷನ್): ಮುಟ್ಟು, ಮಾಸಿಕ; ರಕ್ತ ಮತ್ತು ತ್ಯಾಜ್ಯ ಕೋಶಗಳೊಂದಿಗೆ ಗರ್ಭಧಾರಣೆಯಾಗದ ಅಂಡಾಣು ಗರ್ಭಾಶಯದಿಂದ ಹೊರಬರುವುದು. ಸ್ತ್ರೀಯ ಸಂತಾನೋತ್ಪತ್ತಿ ಸಾಮರ್ಥ್ಯದ ಕಾಲದಲ್ಲಿ ಸರಿಸುಮಾರಾಗಿ ಪ್ರತಿ ಒಂದು ತಿಂಗಳಿಗೊಮ್ಮೆ ಈ ಪ್ರಕ್ರಿಯೆ ನಡೆಯುತ್ತದೆ.

**MUMPS** (ಮಂಪ್ಸ್): ಮಂಗಬಾವು, ಕೆನ್ನೆಬೀಗು, ಕೆಪ್ಪಟೆ; ಗದ್ದಕಟ್ಟು, ಕಪಾಳ ಬಾವು. ಮಕ್ಕಳಲ್ಲಿ ಕಾಣಿಸಿಕೊಳ್ಳಬಹುದಾದ ಒಂದು ವೈರಸ್ ರೋಗ. ಕೆನ್ನೆಯ ಭಾಗದಲ್ಲಿರುವ ಜೊಲ್ಲುರಸ ಗ್ರಂಥಿಯ ಊತದಿಂದಾಗಿ ಆ ಭಾಗ ಊದಿಕೊಂಡಿರುತ್ತದೆ. ಜ್ವರ, ತಲೆನೋವು, ಗಂಟಲು ನೋವು, ಕಿವಿನೋವು ಮುಂತಾದ ಲಕ್ಷಣಗಳೊಂದಿಗೆ ಅಗಿಯಲು ಕಷ್ಟವಾಗಿರುತ್ತದೆ.

**MUSCLE** (ಮಸಲ್): ಸ್ನಾಯು, ಮಾಂಸಖಂಡ, ಪೇಶಿ; ಕುಗ್ಗುವಿಕೆಯ ಸಾಮರ್ಥ್ಯವನ್ನು ಹೊಂದಿರುವ ನಾರು ಅಂಗಾಂಶಗಳಿಂದ ಮಾಡಲ್ಪಟ್ಟ ಅಂಗಾಂಶ.

**MYASTHENIA GRAVIS** (ಮ್ಯಾಸ್ತೇನಿಯಾ ಗ್ರೇವಿಸ್): ಸ್ನಾಯು ಹೆದ್ದಣಿವು; ನರಗಳಿಂದ ಬಂದ ಸಂದೇಶಗಳನ್ನು ಮಾಂಸಖಂಡಗಳು ಸ್ವೀಕರಿಸುವ ಪ್ರಕ್ರಿಯೆಯಲ್ಲಿ ಉಂಟಾಗುವ ಕೊರತೆಯಿಂದ ಕಾಣಿಸಿಕೊಳ್ಳುವ ಸ್ಥಿತಿ.

ಇದರ ಲಕ್ಷಣಗಳು ಮೊದಲು ಮುಖದಲ್ಲಿ ಗೋಚರಿಸುತ್ತವೆ. ಕಣ್ಣಿನ ಮಾಂಸಖಂಡಗಳ ಪಾರ್ಶ್ವವಾಯುವಿನಿಂದಾಗಿ ಮೆಳ್ಳಗಣ್ಣು ದೃಷ್ಟಿ, ಕೆನ್ನೆಯ ಜೋಲು ಬೀಳುವಿಕೆ, ಮಾತನಾಡಲು, ಅಗಿಯಲು, ನುಂಗಲು ಕಷ್ಟವಾಗುವಿಕೆಯಂತಹ ಲಕ್ಷಣಗಳು ಗೋಚರಿಸುತ್ತವೆ. ನಂತರದಲ್ಲಿ ಕೈ-ಕಾಲುಗಳಿಗೂ ವಿಸ್ತರಿಸುವುದರಿಂದ ನಡೆದಾಡಲು, ವಸ್ತುಗಳನ್ನು ಎತ್ತಲು ಕಷ್ಟವಾಗಬಹುದು.

**MYOCARDIUM** (ಮಯೋಕಾರ್ಡಿಯಂ): ಹೃದಯದ ಮಾಂಸಖಂಡಗಳು.

**MYOCARDITIS** (ಮಯೋಕಾರ್ಡೈಟಿಸ್): ಹೃದಯ ಮಾಂಸಖಂಡಗಳ ಉರಿಯೂತ.

# N

**NAUSEA** (ನಾಸಿಯಾ): ವಾಕರಿಕೆ, ಉಬ್ಬಳಿಕೆ; ವಾಂತಿ ಮಾಡಿಕೊಳ್ಳುವಂತಾಗುವ ಭಾವನೆ.

**NECROSIS** (ನೆಕ್ರೋಸಿಸ್): ಕೊಳೆಕ; ಆರೋಗ್ಯವಂತ ಅಂಗಾಂಶಗಳ ನಡುವೆಯೇ ಕೆಲ ಅಂಗಾಂಶಗಳ ನಾಶ / ಸಾವು.

ಸೋಂಕು ಅಥವಾ ಆ ನಿರ್ದಿಷ್ಟ ಅಂಗಾಂಶಕ್ಕೆ ರಕ್ತ ಸಂಚಾರ ಇಲ್ಲದಂತಾಗುವುದರಿಂದ ಈ ಸ್ಥಿತಿ ಉಂಟಾಗುತ್ತದೆ.

**NEOPLASM** (ನಿಯೋಪ್ಲಾಸ್ಮ್): ನವಗಂತಿ, ರೋಗದೂತಕ; ಕೋಶ ಅಥವಾ ಅಂಗಾಂಶಗಳ ಯಾವುದೇ ರೀತಿಯ ಅಸಹಜ ಬೆಳವಣಿಗೆ; ಗಡ್ಡೆ.

**NEPHROLOGY** (ನೆಫ್ರಾಲಜಿ): ಮೂತ್ರಪಿಂಡಶಾಸ್ತ್ರ; ಮೂತ್ರಪಿಂಡಗಳಿಗೆ ಸಂಬಂಧಿಸಿದ ರೋಗಗಳ ಪತ್ತೆಹಚ್ಚುವಿಕೆ ಮತ್ತು ಚಿಕಿತ್ಸೆಗೆ ಸಂಬಂಧಪಟ್ಟ ವೈದ್ಯಕೀಯ ಶಾಖೆ.

**NERVOUS SYSTEM** (ನರ್ವಸ್ ಸಿಸ್ಟಮ್): ನರ ಮಂಡಲ; ನರವ್ಯೂಹದ ವ್ಯವಸ್ಥೆ.

ದೇಹದ ಕ್ರಿಯೆಯನ್ನು ನಿಯಂತ್ರಿಸಿ ವಿವಿಧ ಅಂಗಗಳು ಅಥವಾ ಭಾಗಗಳ ನಡುವೆ ಹೊಂದಾಣಿಕೆ ತರುವ ಸಲುವಾಗಿ ಸಂದೇಶವನ್ನು ರವಾನಿಸುವ ಅಥವಾ ಸ್ವೀಕರಿಸುವ ಕೋಶಗಳ ವ್ಯವಸ್ಥೆ.

ಈ ವ್ಯವಸ್ಥೆಯಲ್ಲಿ ಮೆದುಳು ಮತ್ತು ಬೆನ್ನುಹುರಿ ತುಂಬಾ ಮುಖ್ಯವಾದವು. ಈ ನರವ್ಯೂಹವು ಎರಡು ಬೇರೆ ಬೇರೆ ರೀತಿ ಕಾರ್ಯಪ್ರವೃತ್ತಿಯ ವ್ಯವಸ್ಥೆಯನ್ನು ಹೊಂದಿದೆ; ಒಂದು ಐಚ್ಛಿಕ, ಮತ್ತೊಂದು ಅನೈಚ್ಛಿಕ. ಐಚ್ಛಿಕ ವ್ಯವಸ್ಥೆಯಲ್ಲಿ, ಚಲನೆ ಮತ್ತು ಕ್ರಿಯೆಗಳು ಮನಸ್ಸಿನ ಹಿಡಿತದಲ್ಲಿರುತ್ತವೆ ಉದಾ.: ಕೈ-ಕಾಲು ಆಡಿಸುವುದು. ಅನೈಚ್ಛಿಕ ವ್ಯವಸ್ಥೆಯಲ್ಲಿ ಚಲನೆ ಮತ್ತು ಕ್ರಿಯೆಗಳು ಮನಸ್ಸಿನ ಹಿಡಿತದಲ್ಲಿರುವುದಿಲ್ಲ. ಉದಾ.: ಹೃದಯ ಬಡಿತ, ಉಸಿರಾಟ.

**NEURALGIA** (ನ್ಯೂರಾಲ್ಜಿಯ): ನರನೋವು, ನರಶೂಲೆ; ನರವೊಂದರ ಕಾರ್ಯ ವಿಸ್ತರಣೆಯ ಉದ್ದಕ್ಕೂ ಕಾಣಿಸಿಕೊಳ್ಳುವ ನೋವು.

**NEURITIS** (ನ್ಯೂರೈಟಿಸ್): ನರದ ಉರಿಯೂತ; ನರಕ್ಕೆ ಉಂಟಾಗುವ

ಸೋಂಕು, ಒತ್ತಡ, ನಂಜುಕಾರಕ ವಸ್ತುಗಳ ಸಂಪರ್ಕ, ರಕ್ತ ಸಂಚಾರದ ಕೊರತೆಯಿಂದಾಗಿ ಇದು ಕಾಣಿಸಿಕೊಳ್ಳಬಹುದಾಗಿದೆ.

**NEUROLOGY** (ನ್ಯೂರಾಲಜಿ): ನರಶಾಸ್ತ್ರ; ನರವ್ಯೂಹದ ಕಾಯಿಲೆಗಳ ಪತ್ತೆಹಚ್ಚುವಿಕೆ ಮತ್ತು ಚಿಕಿತ್ಸೆಗೆ ಸಂಬಂಧಿಸಿದ ವೈದ್ಯಕೀಯ ಶಾಖೆ.

**NEUROSIS** (ನ್ಯೂರೋಸಿಸ್): ಒಂದು ಬಗೆಯ ಭಾವನಾತ್ಮಕ ಅಥವಾ ಮಾನಸಿಕ ವ್ಯಾಧಿ. ಖಿನ್ನತೆ ಮತ್ತು ಆತಂಕತೆಯಂತಹ ಲಕ್ಷಣಗಳಿಂದ ಇದು ತೋರ್ಪಡಿಸಿಕೊಳ್ಳುತ್ತದೆ. ದೈನಂದಿನ ಜೀವನಗಳ ಒತ್ತಡಗಳನ್ನು ನಿಭಾಯಿಸಲಾಗದಿದ್ದ ಸಂದರ್ಭದಲ್ಲಿ ಈ ವ್ಯಾಧಿ ಉಂಟಾಗಬಹುದು. ಶೇಕಡಾ 20ರಷ್ಟು ಜನ ಇದರಿಂದ ಬಳಲುತ್ತಾರೆ.

**NEUROTRANSMITTER** (ನ್ಯೂರೋಟ್ರಾನ್ಸ್‌ಮಿಟರ್): ನರವಾಹಕ; ನರ ಸಂದೇಶ ವಾಹಕ. ದೇಹದಲ್ಲಿ ಒಂದು ನೂರು ನರವಾಹಕಗಳಿವೆ. ಡೋಪಮಿನ್, ಸೆರೊಟೊನಿನ್, ಅಸಿಟೈಲ್ ಕೋಲಿನ್ ಇತ್ಯಾದಿ.

ಸಂದೇಶಗಳನ್ನು ನರಕೋಶಗಳ ನಡುವೆ ವರ್ಗಾಯಿಸುವ ಪದಾರ್ಥ.

ನರವ್ಯೂಹದ ರಚನೆ ಮತ್ತು ಕ್ರಿಯೆಯ ಮೂಲ ಘಟಕ ನರಕೋಶ ಅಥವಾ ನ್ಯೂರಾನ್. ಪ್ರತಿಯೊಂದು ನರಕೋಶದ ತುದಿಯೂ ರಾಸಾಯನಿಕಗಳನ್ನು ಒಳಗೊಂಡ ಅನೇಕ ಚೀಲಗಳನ್ನು ಹೊಂದಿರುತ್ತದೆ. ನರಕೋಶವು ಸಂದೇಶವನ್ನು ಸ್ವೀಕರಿಸಿ ಸಂವೇದನೆಗೆ ಒಳಗಾದಾಗ ಈ ರಾಸಾಯನಿಕಗಳು ಬಿಡುಗಡೆ ಹೊಂದಿ ಮುಂದಿನ ನರಕೋಶಕ್ಕೆ ವರ್ಗಾವಣೆ ಹೊಂದುವುದರ ಮೂಲಕ ಸಂದೇಶವನ್ನು ರವಾನಿಸುತ್ತವೆ.

# O

**OBESITY** (ಒಬೇಸಿಟಿ): ಬೊಜ್ಜು; ದೇಹದ ತೂಕ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿರುವ ಸ್ಥಿತಿ.

**OBSTETRICS** (ಆಬ್‌ಸ್ಟೆಟ್ರಿಕ್ಸ್): ಹೆರಿಗೆಶಾಸ್ತ್ರ; ಗರ್ಭಧಾರಣೆ ಮತ್ತು ಶಿಶು ಜನನ (ಪ್ರಸವ)ಕ್ಕೆ ಸಂಬಂಧಿಸಿದ ಸ್ಥಿತಿಗಳ ಬಗ್ಗೆ ಅಧ್ಯಯನ ನಡೆಸುವ ವೈದ್ಯಕೀಯ ಶಾಖೆ.

**OLIGURIA** (ಆಲಿಗ್ಯೂರಿಯಾ): ಮೂತ್ರವಿಸರ್ಜನೆಯ ಪ್ರಮಾಣದಲ್ಲಿ ಅಸಹಜ

ರೀತಿಯಲ್ಲಿ ಕಡಿಮೆಯಾಗುವುದು. ಇದು ಮೂತ್ರಪಿಂಡ ವೈಫಲ್ಯ ಅಥವಾ ಇನ್ನಾವುದೇ ರೀತಿಯ ಕಾಯಿಲೆಯ ಮುನ್ಸೂಚನೆ ಆಗಿರಬಹುದು.

**ONCOLOGY** (ಆಂಕಾಲಜಿ): ನವಗಂತಿಶಾಸ್ತ್ರ; ಅಂಗಾಂಶಗಳ ಅಸಹಜ ರೀತಿಯ ಬೆಳವಣಿಗೆಯ (ಕ್ಯಾನ್ಸರ್) ಕಾರಣ ಮತ್ತು ಚಿಕಿತ್ಸೆಯ ಕುರಿತ ಅಧ್ಯಯನ.

ಗಡ್ಡೆಗಳ, ಮುಖ್ಯವಾಗಿ ಕ್ಯಾನ್ಸರ್ ಗಡ್ಡೆಗಳ ಕುರಿತ ಅಧ್ಯಯನ ಈ ಶಾಖೆಯ ಮುಖ್ಯ ಉದ್ದೇಶ.

**OPTHALMOLOGY** (ಆಪ್ತಾಲ್ಮಾಲಜಿ): ಕಣ್ಣುಶಾಸ್ತ್ರ; ಕಣ್ಣಿನ ಕ್ರಿಯೆಗಳ ಜೊತೆ ಜೊತೆಗೆ, ಕಣ್ಣಿನ ರೋಗಗಳ ಪತ್ತೆಹಚ್ಚುವಿಕೆ ಮತ್ತು ಚಿಕಿತ್ಸೆಗಳಿಗೆ ಸಂಬಂಧಿಸಿದ ಅಧ್ಯಯನದ ವೈದ್ಯಕೀಯ ಶಾಖೆ.

**OPTHALMOPLEGIA** (ಆಪ್ತಾಲ್ಮೋಪ್ಲೇಜಿಯ): ಕಣ್ಣು ಸ್ನಾಯರನಾರಿ; ಕಣ್ಣಿನ ಮಾಂಸಖಂಡಗಳ ಬಲಹೀನತೆ ಅಥವಾ ಪಾರ್ಶ್ವವಾಯು.

**OPIUM** (ಓಪಿಯಂ): ಅಫೀಮು. ಓಪಿಯಂ ಪಾಪಿ ಎಂಬ ಸಸ್ಯದ ರಸದಿಂದ ಸಿಗುವ ಚಟಕಾರಕ ವಸ್ತು. ಹೆರಾಯಿನ್, ಬ್ರೌನ್‌ಶುಗರ್ ಓಪಿಯಂನ ವಿಧಗಳು.

**ORTHODONTIA** (ಆರ್ಥೋ ಡಾನ್ಷಿಯ): ದಂತ ವಕ್ರತೆಯನ್ನು ಸರಿಪಡಿಸುವ ದಂತ ವೈದ್ಯಕೀಯ ಶಾಖೆ.

**ORTHOPAEDICS** (ಆರ್ಥೋಪಿಡಿಕ್ಸ್): ಎಲುನೇರ್ಪಿಕ, ಮೂಳೆರೋಗ ತಜ್ಞವೈದ್ಯ; ಮಾಂಸಖಂಡ, ಮೂಳೆ ಮತ್ತು ಕೀಲುಗಳಿಗೆ ಸಂಬಂಧಿಸಿದ ರೋಗ ಮತ್ತು ಗಾಯಗಳ ಬಗ್ಗೆ ಅಧ್ಯಯನ ನಡೆಸುವ ವೈದ್ಯಕೀಯ ಶಾಖೆ.

**OSSIFICATION** (ಆಸಿಫಿಕೇಷನ್): ಎಲುಮೊಳಿತ, ಎಲುಬೀಕರಣ; ಮೃದು ಅಂಗಾಂಶವನ್ನು ಮೂಳೆ ಅಥವಾ ಮೂಳೆಯಂತಹ ಗಟ್ಟಿ ಅಂಗಾಂಶ-ವನ್ನಾಗಿ ಪರಿವರ್ತಿಸುವ ಪ್ರಕ್ರಿಯೆ.

**OSTEOARTHRITIS** (ಆಸ್ಟಿಯೋಆರ್ಥ್ರೈಟಿಸ್): ಎಲುಕೀಲುರಿತ; ಕೀಲುಗಳ ಅವನತಿ ರೋಗ.

ವಯಸ್ಸಾದವರಲ್ಲಿ ಹಾಗೂ ಈಗಾಗಲೆ ಕಾಯಿಲೆ ಅಥವಾ ಗಾಯದಿಂದಾಗಿ ಬಲಹೀನತೆಗೊಂಡ ಕೀಲುಗಳಲ್ಲಿ ಇದು ಕಾಣಿಸಿಕೊಳ್ಳುತ್ತದೆ.

**OSTEOMA** (ಆಸ್ಟಿಯೋಮ): ಎಲುಬುಗಂತಿ; ಮೂಳೆಗಳಲ್ಲಿ ಕಾಣಿಸಿಕೊಳ್ಳುವ ಪ್ರಾರಂಭಿಕ ಹಂತದಲ್ಲಿರುವ ಗಡ್ಡೆ.

**OSTEOMALACIA** (ಆಸ್ಟಿಯೋ ಮಲೇಸಿಯ): ಮೂಳೆಮೆತುವೆ; ಮೂಳೆಗಳು ಗಟ್ಟಿತನವನ್ನು ಕಳೆದುಕೊಳ್ಳುವ ಸ್ಥಿತಿ.

ದೇಹದಲ್ಲಿ ಕ್ಯಾಲ್ಷಿಯಂನ ಹೀರುವಿಕೆ ಮತ್ತು ಬಳಕೆಗೆ ಅಗತ್ಯವಾಗಿರುವ ವಿಟಮಿನ್-ಡಿನ ಕೊರತೆಯಿಂದಾಗಿ ಈ ರೋಗ ಕಾಣಿಸಿಕೊಳ್ಳಬಹುದು.

**OSTEOPOROSIS** (ಆಸ್ಟಿಯೋಪೊರೋಸಿಸ್): ಟೊಳ್ಳುಮೂಳೆರೋಗ; ಮೂಳೆಗಳಲ್ಲಿ ಕ್ಯಾಲ್ಷಿಯಂನ ಪ್ರಮಾಣ ಕಡಿಮೆಯಾಗಿರುವ ಸ್ಥಿತಿ. ಇಂತಹ ಸಂದರ್ಭದಲ್ಲಿ ಮೂಳೆಗಳು ಸಾಮಾನ್ಯ ಒತ್ತಡದಲ್ಲಿಯೂ ಮುರಿದು ಹೋಗಬಹುದಾದಂತಹ ಇಲ್ಲವೆ ಸೀಳಿಬಿಡುವಂತಹ ಸಂಭವ ಹೆಚ್ಚಿರುತ್ತದೆ.

**OSTEOSARCOMA** (ಆಸ್ಟಿಯೋಸಾರ್ಕೋಮ): ಎಲುವಮಾಂಸಗಂತಿ; ಮೂಳೆಯ ಮಾರಣಾಂತಿಕ ಕ್ಯಾನ್ಸರ್ ಗಡ್ಡೆ.

**OXYGEN** (ಆಕ್ಸಿಜನ್): ಆಮ್ಲಜನಕ; ದೇಹಕ್ಕೆ ಅತ್ಯಗತ್ಯವಾಗಿ ಬೇಕಾಗಿರುವ, ವಾತಾವರಣದಲ್ಲಿರುವ ಬಣ್ಣ ಹಾಗೂ ವಾಸನೆಯಿಲ್ಲದ ಅನಿಲ; ಆಮ್ಲಜನಕ.

ಉಸಿರಾಟದ ಮೂಲಕ ಶ್ವಾಸಕೋಶವನ್ನು ಸೇರುವ ಇದು, ಕೆಂಪು ರಕ್ತಕಣದಲ್ಲಿರುವ ಹಿಮೋಗ್ಲೋಬಿನ್‌ನ ಸಹಾಯದೊಂದಿಗೆ ದೇಹದ ಅಂಗಾಂಶ/ಕೋಶಗಳನ್ನು ತಲುಪುತ್ತದೆ. ಅಲ್ಲಿ ಉಪಯೋಗಗೊಳ್ಳುವ ಇದು ಗ್ಲೂಕೋಸ್‌ಅನ್ನು ವಿಭಜಿಸಿ ಶಕ್ತಿ ಉತ್ಪಾದನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಮೂರು ನಿಮಿಷಗಳ ಕಾಲ ಮಿದುಳಿಗೆ ಆಮ್ಲಜನಕ ಪೂರೈಕೆಯಾಗದಿದ್ದರೆ, ಮಿದುಳು ತನ್ಮೂಲಕ ವ್ಯಕ್ತಿ ಸಾಯುತ್ತಾನೆ.

# P

**PAIN** (ಪೈನ್): ನೋವು, ನರಳಿಕೆ, ಯಾತನೆ, ಶೂಲೆ; ಕಾಯಿಲೆ ಅಥವಾ ಗಾಯಗಳಿಂದಾಗಿ ಉಂಟಾಗುವ ತೀವ್ರತೆರನಾದ ದೈಹಿಕ ಇಲ್ಲವೆ ಮಾನಸಿಕ ಕೊರಗು ಅಥವಾ ಖಿನ್ನತೆಗಳಿಂದಾಗಿ ಉಂಟಾಗುವ ತೀವ್ರತೆರನಾದ ಭಾವನಾತ್ಮಕ ಅಸೌಖ್ಯತೆ.

**PALATE** (ಪ್ಯಾಲೆಟ್): ಅಂಗುಳು, ತಾಲು; ಬಾಯಿಯ ಮೇಲ್ಭಾವಣಿಯಂತಿರುವ

ಅಂಗ. ಇದರ ಮುಂದಿನ 3/4 ಭಾಗ ಗಟ್ಟಿಯಾಗಿದ್ದು, ಗಂಟಲು ಕಡೆಗಿನ ಹಿಂದಿನ 1/4 ಭಾಗ ಮೃದುವಾಗಿದೆ. ಇದು ಬಾಯಿ ಮತ್ತು ಮೂಗಿನ ಕುಹರಗಳನ್ನು ಬೇರ್ಪಡಿಸುವುದು ಮಾತ್ರವಲ್ಲದೆ, ಅಗಿಯಲು, ನುಂಗಲು ಮತ್ತು ಮಾತನಾಡಲು ತುಂಬಾ ಸಹಾಯಕವಾಗಿದೆ.

**PALPITATION** (ಪ್ಯಾಲ್ಪಿಟೇಷನ್): ಡವಡವಿಕೆ, ತತ್ತರಿಕೆ, ಎದೆಮಿಡಿತ; ಅತಿಯಾದ ಬಡಿಯುವಿಕೆ, ಮುಖ್ಯವಾಗಿ ಹೃದಯದ ಅತಿ ವೇಗದ ಬಡಿತ.

**PANCREASE** (ಪ್ಯಾಂಕ್ರಿಯಾಸ್): ಮಾಂಸಲಿ, ಮೇದೋಜೀರಕ ಗ್ರಂಥಿ;

ಉದರ ಕುಹರದ ಹಿಂಭಾಗದಲ್ಲಿ, ಜಠರದ ಬಳಿ ಇರುವ ಗ್ರಂಥಿ. ಇದರಿಂದ ಉತ್ಪತ್ತಿಯಾಗುವ ಇನ್ಸುಲಿನ್ ಎಂಬ ಹಾರ್ಮೋನು ದೇಹದ ಸಕ್ಕರೆಯ ಅಂಶವನ್ನು ನಿಯಂತ್ರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಹಾಗೆಯೇ ಇದರಿಂದ ಉತ್ಪತ್ತಿಯಾಗುವ ಎಂಜೈಮ್‌ಗಳು ಸಣ್ಣಕರುಳಿನಲ್ಲಿ ಆಹಾರದ ಪಚನ ಕ್ರಿಯೆಗೆ ಉಪಯುಕ್ತವಾಗಿವೆ.

**PARALYSIS** (ಪ್ಯಾರಾಲಿಸಿಸ್): ಪಾರ್ಶ್ವವಾಯು, ಅರನಾರಿ, ಲಕ್ವ

ಮಾಂಸಖಂಡಗಳ ಕ್ರಿಯೆಯ ಅಸಂತುಲತೆ ಅಥವಾ ಸಂಪೂರ್ಣ ನಶಿಸುವಿಕೆ.

ಮಾಂಸಖಂಡಕ್ಕೆ ಇಲ್ಲವೆ, ಮಾಂಸಖಂಡವನ್ನು ನಿಯಂತ್ರಿಸುವ ನರವ್ಯವಸ್ಥೆಗೆ ಉಂಟಾಗುವ ಕಾಯಿಲೆ ಅಥವಾ ಗಾಯದಿಂದಾಗಿ ಈ ಸ್ಥಿತಿ ಉಂಟಾಗಬಹುದು.

**PARAPLEGIA** (ಪ್ಯಾರಾಪ್ಲೀಜಿಯ): ಪಾರ್ಶ್ವವಾಯು; ದೇಹದ ಕೆಳಭಾಗದಲ್ಲಿ ಕಾಣಿಸಿಕೊಳ್ಳುವ ಪಾರ್ಶ್ವವಾಯು. ಬೆನ್ನುಹುರಿಗೆ ಉಂಟಾಗುವ ಆಘಾತದಿಂದಾಗಿ ಇದು ಉಂಟಾಗಬಹುದು. ಕೇವಲ ಕಾಲುಗಳು ಮಾತ್ರ ತೊಂದರೆಗೆ ಒಳಗಾಗಬಹುದು ಇಲ್ಲವೆ ಕೆಳ ಸೊಂಟದ ಭಾಗದಲ್ಲಿರುವ ಮೂತ್ರ ಚೀಲ ಮತ್ತು ಗುದದ್ವಾರವೂ ಒಳಗಾಗಬಹುದಾಗಿದೆ.

**PARASITE** (ಪ್ಯಾರಾಸೈಟ್): ಪರಪಿಂಡಿ; ಪರಾವಲಂಬಿ;

ಬದುಕುವುದಕ್ಕಾಗಿ ಬೇರೆ ಜೀವಿಯನ್ನು ಅವಲಂಬಿಸಿರುವ ಪ್ರಾಣಿ ಅಥವಾ ಸಸ್ಯ. ಇವುಗಳಿಂದ ಆತಿಥೇಯ ದೇಹಕ್ಕೆ ಯಾವುದೇ ರೀತಿಯ ಉಪಯೋಗವಿರುವುದಿಲ್ಲ. ಕೆಲವೊಮ್ಮೆ ಇವು ಆತಿಥೇಯಕ್ಕೆ ಅಪಾಯಕಾರಿ-ಯಾಗಿಯೂ ಇರಬಹುದು.

**PASTEURIZATION** (ಪಾಶ್ಚರೈಜೇಷನ್): ಪ್ಯಾಶ್ಚರೀಕರಣ; ದ್ರವಪದಾರ್ಥ-ವೊಂದರ ತಾಪಮಾನವು ಮೂವತ್ತರಿಂದ ನಲವತ್ತು ನಿಮಿಷಗಳವರೆಗೆ $60^0$–$70^0$ಸೆ. ಇರುವಂತೆ ಕಾಯಿಸಿ ಶೇಖರಿಸುವ ವಿಧಾನ.

ಇದರಿಂದಾಗಿ ಅದರಲ್ಲಿರುವ ಜೀವಿಗಳನ್ನು ನಾಶಪಡಿಸಿ ಆ ದ್ರವವು (ಹಾಲು) ಕೆಡದಂತೆ ತಡೆಯಬಹುದಾಗಿದೆ.

**PATHOLOGY** (ಪೆಥಾಲಜಿ): ರೋಗಶಾಸ್ತ್ರ, ರೋಗಗತಿ; ರೋಗದ ಗುಣಲಕ್ಷಣಗಳನ್ನು (ಪ್ರಕೃತಿ) ಅಧ್ಯಯನ ನಡೆಸುವ ವೈದ್ಯಕೀಯ ಶಾಖೆ.

ಈ ವಿಭಾಗದಲ್ಲಿ ರೋಗದ ಕಾರಣ, ಲಕ್ಷಣ ಮತ್ತು ಪರಿಣಾಮವೂ ಸೇರಿದಂತೆ, ಆ ರೋಗದ ಹರಡುವಿಕೆಯನ್ನು ತಡೆಗಟ್ಟುವ ಮಾರ್ಗಗಳ ಬಗ್ಗೆಯೂ ಅಧ್ಯಯನ ನಡೆಸಲಾಗುತ್ತದೆ.

**PEDIATRICS** (ಪೀಡಿಯಾಟ್ರಿಕ್ಸ್): ಶಿಶುರೋಗಶಾಸ್ತ್ರ; ಮಕ್ಕಳಿಗೆ ಸಂಬಂಧಿಸಿದ ಕಾಯಿಲೆ ಮತ್ತು ಆರೈಕೆಯ ಬಗ್ಗೆ ಅಧ್ಯಯನ ನಡೆಸುವ ವೈದ್ಯಕೀಯ ಶಾಖೆ.

**PELLAGRA** (ಪೆಲೆಗ್ರಾ): ಕಾರ್ದೋಗಲು; ವಿಟಮಿನ್ 'ಬಿ' ಸಂಯೋಜನೆಯಲ್ಲಿ ಒಂದು ಭಾಗವಾದ ನಿಯಾಸಿನ್‌ನ ಕೊರತೆಯಿಂದಾಗಿ ಕಾಣಿಸಿಕೊಳ್ಳುವ ರೋಗ. ಸಾಮಾನ್ಯವಾಗಿ ಮದ್ಯಪಾನೀಯರಲ್ಲಿ ಇದನ್ನು ಕಾಣಬಹುದಾಗಿದೆ. ಚರ್ಮ ಒಣಗಿ ಪೂರೆ ಏಳುತ್ತದೆ.

**PELVIS** (ಪೆಲ್ವಿಸ್): ಕಿಳ್ಳುಳಿ; ಸೊಂಟದ ಕೆಳಭಾಗದಲ್ಲಿರುವ ಪಾತ್ರೆಯಾಕಾರದ ಮೂಳೆಗಳ ರಚನೆ. ಇದು ನಾಲ್ಕು ಮೂಳೆಗಳಿಂದ ಮಾಡಲ್ಪಟ್ಟಿದೆ. ಇದರ ತಳಭಾಗಕ್ಕೆ ತೊಡೆಮೂಳೆಯು ಕೀಲಿನ ಮೂಲಕ ಸಂಪರ್ಕ ಹೊಂದಿರುತ್ತದೆ.

**PEPTIC ULCER** (ಪೆಪ್ಟಿಕ್ ಅಲ್ಸರ್): ಜೀರ್ಣಕ ಹುಣ್ಣು; ಜಠರದಲ್ಲಿ ಉತ್ಪತ್ತಿಯಾಗುವ ಅಧಿಕ ಹೈಡ್ರೋಕ್ಲೋರಿಕ್ ಆಮ್ಲದಿಂದಾಗಿ ಜಠರನಾಳದಲ್ಲಿ ಉಂಟಾಗಿರುವ ಯಾವುದೇ ರೀತಿಯ ಗಾಯ ಅಥವಾ ಗುಳ್ಳೆ.

**PERICARDITIS** (ಪೆರಿಕಾರ್ಡೈಟಿಸ್): ಹೃದಯವನ್ನು ಸುತ್ತುವರೆದಿರುವ ಪೊರೆಯ ಉರಿಯೂತ.

**PERIODONTICS** (ಪೆರಿಯೋ ಡಾಂಟಿಕ್ಸ್): ಹಲ್ಲು ಸುತ್ತರೆಶಾಸ್ತ್ರ, ಒಸಡುಶಾಸ್ತ್ರ; ವಸಡೂ ಸೇರಿದಂತೆ ಹಲ್ಲನ್ನು ಸುತ್ತುವರೆದಿರುವ ಮತ್ತು ಸಂರಕ್ಷಣೆ

ಕೊಡುವ ಅಂಗಾಂಶಗಳ ಅಧ್ಯಯನ ಹಾಗೂ ರೋಗಗಳ ಚಿಕಿತ್ಸೆಗೆ ಸಂಬಂಧಿಸಿದ ದಂತ ವೈದ್ಯಕೀಯ ಶಾಖೆ.

**PHARMACEUTICS** (ಫಾರ್ಮಾಸ್ಯುಟಿಕ್ಸ್): ಔಷಧಗಾರಿಕೆ, ತಯಾರಿಕ ಮದ್ದುಗಳು; ಅಧಿಕೃತ ವೈದ್ಯರ ಸೂಚನೆಗಳಂತೆ ನಿಖರ ಪ್ರಮಾಣದಲ್ಲಿ ಔಷಧಿಗಳನ್ನು ತಯಾರಿಸುವ ಮತ್ತು ವಿತರಿಸುವ ಕಸುಬು.

**PHARMACOLOGY** (ಫಾರ್ಮಕಾಲಜಿ): ಔಷಧಶಾಸ್ತ್ರ; ಔಷಧಿಗಳ ಗುಣ (ಪ್ರಕೃತಿ) ಮತ್ತು ಕ್ರಿಯೆಗಳ ಬಗ್ಗೆ ನಡೆಸುವ ಅಧ್ಯಯನ.

**PHARYNGITIS** (ಫ್ಯರಿಂಜೈಟಿಸ್): ಗಂಟಲು ಕುಳಿಯುರಿತ: ಅನ್ನನಾಳ ಮತ್ತು ಧ್ವನಿಪೆಟ್ಟಿಗೆಗಳೊಂದಿಗೆ ಬಾಯಿ ಹಾಗೂ ಮೂಗನ್ನು ಸೇರಿಸುವ ಭಾಗದ ಉರಿಯೂತ.

**PITUITARY GLAND** (ಪಿಟ್ಯುಟರಿ ಗ್ಲ್ಯಾಂಡ್): ಪಿಟ್ಯುಟರಿ ಗ್ರಂಥಿ, ಮೆದುಳಿನ ತಳಭಾಗದಲ್ಲಿರುವ ಒಂದು ಸಣ್ಣ ಮತ್ತು ಅತಿ ಮುಖ್ಯ ಗ್ರಂಥಿ. ಇದರಿಂದ ಸ್ರವಿಸಲ್ಪಡುವ ಹಾರ್ಮೋನುಗಳು ಬೇರೆ ಗ್ರಂಥಿಯನ್ನು ಒಳಗೊಂಡಂತೆ ದೇಹದ ಬೇರೆ ಭಾಗಗಳ ಕ್ರಿಯೆಯನ್ನು ನಿಯಂತ್ರಿಸುತ್ತವೆ.

**PLATELETS** (ಪ್ಲೇಟ್‌ಲೆಟ್ಸ್): ರಕ್ತದಲ್ಲಿರುವ, ರಕ್ತ ಹೆಪ್ಪುಗಟ್ಟಲು ಸಹಾಯ ಮಾಡುವ ಕೋಶಗಳು ಇವುಗಳನ್ನು ಥ್ರೋಂಬೋಸೈಟ್ ಎಂದೂ ಕರೆಯುತ್ತಾರೆ.

ರಕ್ತನಾಳಗಳು ಗಾಯಗೊಂಡಾಗ ಈ ರಕ್ತಕಣಗಳು ಆ ಗಾಯದ ಸಂಪರ್ಕಕ್ಕೆ ಬಂದು ಶೇಖರಣೆಗೊಳ್ಳುತ್ತವೆ. ನಂತರ ವಿಶಿಷ್ಟ ರಾಸಾಯನಿಕ-ವನ್ನು ಬಿಡುಗಡೆ ಮಾಡುತ್ತವೆ. ಇದರಿಂದ ಹೆಪ್ಪುಗಟ್ಟುವಿಕೆಯ ಪ್ರಕ್ರಿಯೆ ಪ್ರಾರಂಭವಾಗುತ್ತದೆ.

**PNEUMONIA** (ನ್ಯುಮೋನಿಯಾ): ಪುಪ್ಪುಸುರಿತ; ಶ್ವಾಸಕೋಶಗಳಲ್ಲಿರುವ ಗಾಳಿಚೀಲ (ಅಲ್ವಿಯೋಲೈ)ಗಳ ಉರಿಯೂತ.

ಈ ಸ್ಥಿತಿಯಲ್ಲಿ ಗಾಳಿ ಚೀಲಗಳು ದ್ರವ ಮತ್ತು ಬಿಳಿ ರಕ್ತಕಣಗಳಿಂದ ತುಂಬಿರುತ್ತವೆ. ಬ್ಯಾಕ್ಟೀರಿಯಾ, ವೈರಸ್, ಶಿಲೀಂದ್ರದಂತಹ ಸೂಕ್ಷ್ಮಜೀವಿ-ಗಳಿಂದ ಅಥವಾ ರಾಸಾಯನಿಕ, ಶ್ವಾಸಕೋಶ ಸೇರಿದ ಆಹಾರ ಪದಾರ್ಥ ಅಥವಾ ವಾಂತಿ ಮುಂತಾದ ವಸ್ತುಗಳಿಂದಲೂ ಇದು ಉಂಟಾಗಬಹು-ದಾಗಿದೆ.

ಕೆಮ್ಮು, ಎದೆನೋವು, ಜ್ವರ ಮತ್ತು ಉಸಿರಾಟದ ತೊಂದರೆಯಂತಹ ಲಕ್ಷಣಗಳನ್ನು ಹೊಂದಿರುತ್ತದೆ.

**PROGNOSIS** (ಪ್ರೋಗ್ನೋಸಿಸ್) ಮುನ್ನರಿವು, ರೋಗದ ಅವಧಿಯ ಮತ್ತು ವಾಸಿಯಾಗುವಿಕೆಯ ವೇಗ ಮತ್ತು ಪ್ರಮಾಣದ ಅಂದಾಜಿಸುವಿಕೆ.

**PROSTHESIS** (ಪ್ರೋಸ್ತೆಸಿಸ್) ನ್ಯೂನಪೂರಣೆ; ದೇಹದ ನೈಸರ್ಗಿಕ ಅಂಗಕ್ಕೆ ಬದಲಾಗಿ ಉಪಯೋಗಿಸುವ ಕೃತಕ ಸಾಧನ.

**PROTEINURIA** (ಪ್ರೋಟಿನೂರಿಯಾ) ಮೂತ್ರ; ಮೂತ್ರದಲ್ಲಿ ಪ್ರೊಟೀನ್‌ನ ಅಂಶ ಇರುವುದು.

**PSORIASIS** (ಸೋರಿಯಾಸಿಸ್): ಸೋರಿಯಾಸಿಸ್, ಬೆಳ್ಳಿಯಂತಹ ಪೊರೆಯನ್ನು ಹೊಂದಿರುವ ಚರ್ಮದ ಕೆಂಪು ಕಲೆಗಳ ಚರ್ಮ ರೋಗ.

**PSYCHIATRY** (ಸೈಕಿಯಾಟ್ರಿ): ಮನೋವೈದ್ಯಕೀಯ; ಮಾನಸಿಕ ಹಾಗೂ ಭಾವನಾತ್ಮಕ ಕಾಯಿಲೆ ಮತ್ತು ವ್ಯಾಧಿಗಳ ಪತ್ತೆಹಚ್ಚುವಿಕೆ ತಡೆಗಟ್ಟುವಿಕೆ ಮತ್ತು ಚಿಕಿತ್ಸೆಯ ಬಗ್ಗೆ ಅಧ್ಯಯನ ನಡೆಸುವ ವೈದ್ಯಕೀಯ ಶಾಖೆ.

**PSYCHOLOGY** (ಸೈಕಾಲಜಿ): ಮನಶ್ಶಾಸ್ತ್ರ; ಮನುಷ್ಯನ ಮನಸ್ಸು – ನಡೆವಳಿಕೆಯ ಬಗ್ಗೆ ಅಭ್ಯಸಿಸುವ ವಿಜ್ಞಾನ.

**PURPURA** (ಪರ್‌ಪ್ಯುರ): ಕೆನ್ನೀಲಿದದ್ದು, ಕೆನ್ನೀಲಿಕೆ; ಚರ್ಮ ಅಥವಾ ಶ್ಲೇಷ್ಮ ಪದರದಲ್ಲಿ ರಕ್ತ ಇರುವುದು. ಚಿಕ್ಕ ಚಿಕ್ಕ ಕೆಂಪು ಇಲ್ಲವೆ ನೇರಳೆ ಬಣ್ಣಗಳ ಚುಕ್ಕೆಗಳಿಂದ ಇದು ದೃಢಪಡುತ್ತದೆ.

**PUS** (ಪಸ್): ಕೀವು; ಸೋಂಕಿನ ಪರಿಣಾಮದಿಂದಾಗಿ ಸತ್ತ ಬಿಳಿ ರಕ್ತಕಣಗಳು, ಅಂಗಾಂಶ ಮತ್ತು ಇನ್ನಿತರೆ ತ್ಯಾಜ್ಯಗಳ ಮಿಶ್ರಣದ ಹಳದಿ ಮಿಶ್ರಿತ ಬಿಳಿದ್ರವ; ಕೀವು.

**PUSTULA** (ಪ್ಯುಶ್ಚೂಲ): ಕುರು, ಬೊಕ್ಕೆ, ಕೀವಿನಿಂದ ತುಂಬಿರುವ ಚರ್ಮದ ಸಣ್ಣ ಗುಳ್ಳೆ.

# Q

**QUARANTINE** (ಕ್ವಾರಂಟೈನ್): ಸಂಪರ್ಕ ನಿಷೇಧ; ಸಾಂಕ್ರಾಮಿಕ ರೋಗ ಹರಡಿರುವ ಪ್ರದೇಶದ ವ್ಯಕ್ತಿ ಅಥವಾ ಜನರನ್ನು ಪ್ರತ್ಯೇಕಿಸುವಿಕೆ. ರೋಗ ಹರಡುವಿಕೆಯನ್ನು ತಡೆಯುವುದೇ ಇದರ ಮುಖ್ಯ ಉದ್ದೇಶ.

# R

**RABIES** (ರೇಬೀಸ್): ನಾಯಿಹುಚ್ಚು; ಪ್ರಾಣಿಗಳಲ್ಲಿ ಕಾಣಿಸಿಕೊಳ್ಳುವ ಸೋಂಕುಪೂರಿತ, ಮಾರಣಾಂತಿಕ ವೈರಸ್‌ಜನ್ಯ ರೋಗ. ಪ್ರಾಣಿಗಳಿಂದ ಮಾನವನಿಗೂ ಕೂಡ ಹರಡಬಹುದಾಗಿದೆ.

ಸಾಮಾನ್ಯವಾಗಿ ಈ ವೈರಸ್‌ಗಳು ಸೋಂಕಿತ ಪ್ರಾಣಿಯ ಜೊಲ್ಲಿನಲ್ಲಿ ಇರುತ್ತವೆ. ಅದು ಮನುಷ್ಯನಿಗೆ ಕಚ್ಚಿದಾಗ ಮಾನವನಿಗೂ ಹರಡುತ್ತವೆ.

ಪ್ರಾರಂಭದಲ್ಲಿ ಖಿನ್ನತೆ, ತಳಮಳಿಸುವಿಕೆ, ಜ್ವರಗಳಂತಹ ಲಕ್ಷಣಗಳು ಕಾಣಿಸಿಕೊಂಡರೂ ನಂತರದಲ್ಲಿ ಅತಿಯಾದ ಅಸಹಜ ಕ್ರಿಯಾಶೀಲತೆ, ಅಸಹಜ ಜೊಲ್ಲು ಸುರಿಸುವಿಕೆ ಮತ್ತು ಗಂಟಲಿನ ಮಾಂಸಖಂಡಗಳ ನೋವು ಕಾಣಿಸಿಕೊಳ್ಳುತ್ತವೆ. ಕ್ರಮೇಣ ರೋಗಿಯು ನೀರನ್ನು ತಿರಸ್ಕರಿಸುತ್ತ ಅದರೆಡೆಗೆ ವಿಪರೀತ ಭಯವನ್ನು ಪ್ರಕಟಿಸುತ್ತಾನೆ. ಸಾವು ನಿಶ್ಚಿತ.

ಆದ್ದರಿಂದ ಯಾವುದೇ ರೀತಿಯ ಪ್ರಾಣಿಗಳು ಕಚ್ಚಿದ ತಕ್ಷಣ ಆ ಜಾಗವನ್ನು ಸ್ವಚ್ಛ ನೀರು ಮತ್ತು ಸೋಪಿನಿಂದ ತೊಳೆಯಬೇಕು. ತಕ್ಷಣವೇ ವೈದ್ಯರನ್ನು ಸಂಪರ್ಕಿಸಬೇಕು.

**RADIOTHERAPY** (ರೇಡಿಯೋ ಥೆರಪಿ): ವಿಕಿರಣ ರೋಗ ಚಿಕಿತ್ಸೆ; ವಿಕಿರಣಶೀಲ ವಸ್ತುಗಳಿಂದ ನೀಡುವ ರೋಗ ಚಿಕಿತ್ಸೆ.

**RADIOLOGY** (ರೇಡಿಯಾಲಜಿ): ವಿಕಿರಣಶಾಸ್ತ್ರ; ರೋಗ ಪತ್ತೆಹಚ್ಚುವಿಕೆ ಮತ್ತು ಚಿಕಿತ್ಸೆಯಲ್ಲಿ ವಿಕಿರಣಶೀಲ ವಸ್ತುಗಳ ಉಪಯೋಗಗಳ ಕುರಿತು ಅಧ್ಯಯನ ನಡೆಸುವ ವೈದ್ಯಕೀಯ ಶಾಖೆ.

**RASH** (ರ್‍ಯಾಶ್): ದದ್ದು, ಗಾದರಿ, ಗಂದೆ; ಕಡಿತ ಅಥವಾ ಕೆರೆತದೊಂದಿಗೆ ಕಾಣಿಸಿಕೊಳ್ಳುವ ಚಿಕ್ಕ ಚಿಕ್ಕ ಕೆಂಪು ಚುಕ್ಕೆ ಅಥವಾ ಕಲೆಗಳಂತಹ ಚರ್ಮದ ಗುಳ್ಳೆಗಳು.

**RESPIRATION** (ರೆಸ್ಪಿರೇಷನ್): ಉಸಿರಾಟ, ಜೀವಕಣುಸಿರಾಟ; ಉಚ್ಛ್ವಾಸ ಮತ್ತು ನಿಚ್ಛ್ವಾಸಗಳ ಮೂಲಕ ಬಾಹ್ಯ ಗಾಳಿ ಹಾಗೂ ಶ್ವಾಸಕೋಶಗಳ ನಡುವೆ ಆಮ್ಲಜನಕ ಮತ್ತು ಇಂಗಾಲದ ಡೈಆಕ್ಸೈಡ್‌ಗಳ ವಿನಿಮಯ ಪ್ರಕ್ರಿಯೆ.

**RETINA** (ರೆಟಿನಾ): ಕಣ್ಜಾಲ, ಅಕ್ಷಿಪಟಲ, ನೇತ್ರಜಾಲ; ಕಣ್ಣು ಗೊಂಬೆಯ ಹಿಂದಿರುವ ಬೆಳಕಿಗೆ ಪ್ರತಿಸ್ಪಂದಿಸುವ ಪೊರೆ ಅಥವಾ ಪದರು.

**REYE'S SYNDROME** (ರೀಯ್ಸ್ ಸಿಂಡ್ರೋಮ್): ಯಕೃತ್ತಿನ ಹಾನಿಯೊಂದಿಗೆ ಮೆದುಳಿನ ಉರಿಯೂತದ ಸ್ಥಿತಿ. ವೈರಸ್ ರೋಗಗಳಿಂದ ಚೇತರಿಸಿಕೊಳ್ಳುತ್ತಿರುವ ಮಕ್ಕಳಲ್ಲಿ ಇದು ಕಾಣಿಸಿಕೊಳ್ಳಬಹುದಾಗಿದೆ.

ಇದ್ದಕ್ಕಿದ್ದಂತೆ ವಾಂತಿಯಾಗುವುದು, ಅತೀ ಕ್ರಿಯಾಶೀಲವಾಗಿರುವುದು ಅಥವಾ ನಿದ್ರಾಮಂಪರು, ಗೊಂದಲ, ನಡುಕ ಮತ್ತು ಪ್ರಜ್ಞಾಹೀನತೆಯಂತಹ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ.

**RHEUMATIC FEVER** (ರ್‍ಯುಮ್ಯಾಟಿಕ್ ಫೀವರ್): ಕೀಲುವಾತ ಜ್ವರ; ಕೀಲುಗಳ ಊತ ಮತ್ತು ಹೃದಯ ಕವಾಟಗಳ ಉರಿಯೂತದ ಲಕ್ಷಣಗಳನ್ನು ಒಟ್ಟಿಗೇ ಹೊಂದಿರುವ ಸೋಂಕು.

ಹಿಮ್ಮಡಿ, ಮೊಣಕಾಲು, ಮುಂಗೈ ಕೀಲುಗಳಲ್ಲಿ ವಿಪರೀತ ನೋವು, ಚರ್ಮದಲ್ಲಿ ದೊಡ್ಡ ಗುಳ್ಳೆಗಳು ಕಾಣಿಸಿಕೊಳ್ಳುವುದು. ಜ್ವರದಂತಹ ಲಕ್ಷಣಗಳಿರುತ್ತವೆ. ಇದು ಸಾಮಾನ್ಯವಾಗಿ ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತದೆ. ಮಕ್ಕಳಲ್ಲಿ ಗಂಟಲು ಸೋಂಕಿನ ನಂತರ ಈ ಲಕ್ಷಣಗಳು ಕಾಣಿಸಿಕೊಂಡರೆ ತಕ್ಷಣವೇ ವೈದ್ಯರನ್ನು ಸಂಪರ್ಕಿಸಬೇಕು.

**RH FACTOR** (ಆರ್.ಹೆಚ್. ಫ್ಯಾಕ್ಟರ್): ಕೆಲವರ ರಕ್ತದಲ್ಲಿ ಇರುವ ನಿರ್ದಿಷ್ಟ ಆ್ಯಂಟಿಜೆನ್. ಇದು ಪ್ರಪ್ರಥಮವಾಗಿ ರಿಸಸ್ ಎಂಬ ಮಂಗನಲ್ಲಿ ಪತ್ತೆಯಾದ್ದರಿಂದ ಆರ್.ಹೆಚ್. ಎಂಬ ಹೆಸರು ಬಂದಿದೆ. ಈ ಆ್ಯಂಟಿಜೆನ್ ಇರುವ ರಕ್ತವನ್ನು ಆರ್.ಹೆಚ್. ಪಾಸಿಟಿವ್ ಎಂತಲೂ ಇಲ್ಲದೇ ಇರುವ ರಕ್ತವನ್ನು ಆರ್.ಹೆಚ್. ನೆಗೆಟಿವ್ ಎಂತಲೂ ಕರೆಯುತ್ತಾರೆ.

**RICKETS** (ರಿಕೆಟ್ಸ್): ಎಲುಮುರುಟು; ವಿಟಮಿನ್ 'ಡಿ'ನ ಕೊರತೆಯಿಂದಾಗಿ ಮಕ್ಕಳಲ್ಲಿ ಕಾಣಿಸಿಕೊಳ್ಳುವ ರೋಗ.

ವಿಟಮಿನ್ 'ಡಿ'ಯ ಕೊರತೆಯಲ್ಲಿ ಸೂಕ್ತ ಪ್ರಮಾಣದಲ್ಲಿ ಕ್ಯಾಲ್ಷಿಯಂ ದೊರಕದೇ ಇರುವುದರಿಂದ ಮೂಳೆಗಳು ವಿರೂಪಗೊಳ್ಳುತ್ತವೆ ಮತ್ತು ಸಾಕಷ್ಟು ಗಟ್ಟಿಯಾಗಿರುವುದಿಲ್ಲ.

**RIGOR MORTIS** (ರೈಗರ್ ಮಾರ್ಟಿಸ್): ಹೆಣದ ಸೆಡವು; ಸತ್ತ ನಂತರ ಮಾಂಸಖಂಡಗಳು ಗಡುಸಾಗುವುದು.

# S

**SARCOMA** (ಸಾರ್ಕೋಮ): ಮಾಂಸಗಂತಿ; ಮೂಳೆ ಮತ್ತು ಮಾಂಸಖಂಡಗಳಲ್ಲಿ ಕಾಣಿಸಿಕೊಳ್ಳುವ ಅಪಾಯಕಾರಿ ಕ್ಯಾನ್ಸರ್ ಗಡ್ಡೆಗಳು.

**SCARLET FEVER** (ಸ್ಕಾರ್ಲೆಟ್ ಫೀವರ್): ಸ್ಕಾರ್ಲೆಟ್ ಫೀವರ್ ಬ್ಯಾಕ್ಟೀರಿಯಾದಿಂದ ಉಂಟಾಗುವ ಅತಿಯಾದ ಸಾಂಕ್ರಾಮಿಕ ಸೋಂಕು. ಜ್ವರ ಮತ್ತು ಗಂಟಲು ನೋವಿನೊಂದಿಗೆ ದೇಹದ ತುಂಬೆಲ್ಲ ಕಡುಗೆಂಪು ಬಣ್ಣದ ಗುಳ್ಳೆಗಳು ಕಾಣಿಸಿಕೊಳ್ಳುತ್ತವೆ.

**SCAR TISSUE** (ಸ್ಕಾರ್ ಟಿಶ್ಯು): ಕಾಯಿಲೆ ಅಥವಾ ಗಾಯದಿಂದಾಗಿ ನಾಶ ಹೊಂದಿದ ಅಂಗಾಂಶದ ಬದಲಾಗಿ ರೂಪುಗೊಂಡ ಸಂಬಂಧಕ ಅಂಗಾಂಶ.

**SCHIZOPHRENIA** (ಸ್ಕಿಝೋಫ್ರೀನಿಯ): ಇಚ್ಚಿತ್ತ ವಿಕಲತೆ; ವಾಸ್ತವತೆಯಿಂದ ದೂರವಾಗಿ ಊಹಾ ಪ್ರಪಂಚದಲ್ಲೆ ವಿಹರಿಸುವ ಮಾನಸಿಕ ಕಾಯಿಲೆ. ಅನುಮಾನ, ಭ್ರಮೆಗಳು, ವಿಚಿತ್ರ ಮಾತು, ನಡೆವಳಿಕೆಗಳಿರುತ್ತವೆ.

**SCURVY** (ಸ್ಕರ್ವಿ): ಸ್ಕರ್ವಿ; ವಿಟಮಿನ್-ಸಿ ಕೊರತೆಯಿಂದ ಕಾಣಿಸಿಕೊಳ್ಳುವ ರೋಗ. ರಕ್ತಹೀನತೆ, ನಿಶ್ಶಕ್ತತೆ, ಆಂತರಿಕ ರಕ್ತಸ್ರಾವದಂತಹ ಸ್ಥಿತಿಗಳೊಂದಿಗೆ ವಸಡಿನಲ್ಲಿ ರಕ್ತಸ್ರಾವ ಮತ್ತು ಗಾಯ ವಾಸಿಯಾಗುವಿಕೆಯ ವೇಗ ನಿಧಾನವಾಗುವಂತಹ ಲಕ್ಷಣಗಳನ್ನು ಹೊಂದಿರುತ್ತದೆ.

**SEBACEOUS CYST** (ಸೆಬೇಷಿಯಸ್ ಸಿಸ್ಟ್): ಮೈಜಿಡ್ಡಿನ ಜಿಟ್ಟೆ; ಬೆವರು ಗ್ರಂಥಿಯ ನಾಳದಲ್ಲಿನ ಅಡಚಣೆಯಿಂದಾಗಿ ಬೆವರು ಒಳಗಡೆಯೇ ಶೇಖರಣೆಗೊಳ್ಳುವುದರಿಂದ ಉಂಟಾಗುವ ಊತ.

**SEPTIC** (ಸೆಪ್ಟಿಕ್): ನಂಜಿನ, ರೋಗಾಣು ಇರುವ ಬ್ಯಾಕ್ಟೀರಿಯಾ ಅಥವಾ ಮತ್ತಾವುದೆ ರೀತಿಯ ಸೋಂಕುಕಾರಕ ವಸ್ತು ದೇಹದಲ್ಲಿದೆ ಎಂಬುದನ್ನು ಸೂಚಿಸುವುದು.

**SHOCK** (ಶಾಕ್): ಸುಸ್ತು ಧಕ್ಕೆ, ಮಾರಿಪೆಟ್ಟು; ರಕ್ತಪರಿಚಲನೆ ವ್ಯವಸ್ಥೆಯ ವೈಫಲ್ಯ.

ಈ ವ್ಯವಸ್ಥೆಯ ವೈಫಲ್ಯಕ್ಕೆ ಮೂರು ಕಾರಣಗಳಿವೆ. ಮೊದಲನೆಯದಾಗಿ ಅಧಿಕ ರಕ್ತಸ್ರಾವದಿಂದಾಗಿ ರಕ್ತದ ಪ್ರಮಾಣ ಕಡಿಮೆಯಾಗುವುದು, ಎರಡನೆಯದಾಗಿ ನಾಳ ಹಿಗ್ಗುವಿಕೆಯಿಂದಾಗಿ ಅವುಗಳನ್ನು ತುಂಬಿ

ಪ್ರವಹಿಸಲು ಸಾಕಷ್ಟು ರಕ್ತದ ಕೊರತೆ ಉಂಟಾಗುವುದು, ಮೂರನೆಯದಾಗಿ ಹೃದಯದ ವೈಫಲ್ಯತೆಯಿಂದಾಗಿ ರಕ್ತವು ಪರಿಚಲನೆಗೊಳ್ಳದೆ ಇರುವುದು.

ದಿಗ್ಭ್ರಾಂತತೆಯ ದೃಷ್ಟಿ, ಬಿಳುಚಿಕೊಂಡ ಚರ್ಮ, ವಾಂತಿ, ವಾಕರಿಕೆ, ಬಾಯಾರಿಕೆ, ಕ್ಷೀಣಗೊಂಡ ಆದರೆ ವೇಗದ ನಾಡಿಬಡಿತ, ಅಸಹಜ ರೀತಿಯ ಉಸಿರಾಟ, ಹಿಗ್ಗಿದ ಕಣ್ಣುಗಳು ಮುಂತಾದ ಲಕ್ಷಣಗಳು ಗೋಚರಿಸುತ್ತವೆ.

ಕ್ಷೀಣಗೊಂಡ ರಕ್ತ ಸಂಚಾರದಿಂದಾಗಿ, ಮೆದುಳು, ಮೂತ್ರಪಿಂಡ, ಯಕೃತ್ತು ಮುಂತಾದ ಅಂಗಗಳು ಆಘಾತಕ್ಕೆ ಒಳಗಾಗಿ ಘಾಸಿಗೊಳ್ಳಬಹುದು. ತಕ್ಷಣವೆ ಚಿಕಿತ್ಸೆಯನ್ನು ನೀಡದಿದ್ದರೆ ಪರಿಣಾಮ ಮಾರಣಾಂತಿಕವಾಗಿರಬಹುದು.

**SINUS** (ಸೈನಸ್): ಎಲುಗುಳಿ, ನಾಳಗುಳಿ; ಮುಖದ ಮೂಳೆಯಲ್ಲಿರುವ ಟೊಳ್ಳು ಭಾಗಗಳು. ಇವುಗಳ ಪದರು ಶ್ಲೇಷ್ಮ ಪೊರೆಯಿಂದ ಆವೃತವಾಗಿರುತ್ತದೆ.

**SINUSITIS** (ಸೈನುಸೈಟಿಸ್): ಎಲುಗುಳಿಯುರಿತ; ಸೈನಸ್‌ಗಳ ಉರಿಯೂತ. ಅಲರ್ಜಿ, ನೆಗಡಿ, ಕೆಮ್ಮಿನಂತ ಸೋಂಕಿನಿಂದ ಇಲ್ಲವೆ ಗಾಯ, ಈಜುವಿಕೆ, ಹಲ್ಲಿನ ಕೀವಿನಿಂದ ಇದು ಉಂಟಾಗಬಹುದು.

ಗಂಟಲು ನೋವು, ಜ್ವರ, ತಲೆನೋವು, ಮೂಗುಕಟ್ಟುವಿಕೆಯಂತಹ ಲಕ್ಷಣಗಳು ಗೋಚರಿಸುತ್ತವೆ.

**SKELETON** (ಸ್ಕೆಲೆಟನ್): ಮೂಳೆಗಳು; ಅಸ್ಥಿಪಂಜರ. ದೇಹದ ಮೃದು ಅಂಗಗಳಿಗೆ ಆಧಾರ ಅಥವಾ ಆನಿಕೆಯಾಗಿರುವ ಮೂಳೆಗಳ ಚೌಕಟ್ಟು.

ಮಾನವನ ಅಸ್ಥಿಪಂಜರ ಸರಿಸುಮಾರು 206 ಮೂಳೆಗಳಿಂದ 600 ಕೀಲುಗಳಿಂದ ಮಾಡಲ್ಪಟ್ಟಿದೆ. ಅವುಗಳನ್ನು ಉದ್ದನೆಯ, ಅಗಲನೆಯ, ಚಪ್ಪಟೆ ಮೂಳೆಗಳೆಂದು ವಿಭಾಗಿಸಬಹುದಾಗಿದೆ.

**SKIN** (ಸ್ಕಿನ್): ಚರ್ಮ, ತ್ವಚೆ; ದೇಹವನ್ನು ಆವರಿಸಿರುವ ಹೊರ ಪದರ. ವಿಭಿನ್ನ ರೀತಿಯ ಕೋಶಗಳ ವಿವಿಧ ಪದರಗಳಿಂದ ಇದು ಮಾಡಲ್ಪಟ್ಟಿದೆ. ಎಪಿಡರ್ಮಿಸ್, ಮೀಸೊಡರ್ಮಿಸ್ ಮತ್ತು ಎಂಡೋ ಡರ್ಮಿಸ್ ಎಂಬ ಮೂರು ಪದರುಗಳು ಇದರಲ್ಲಿರುತ್ತವೆ. ಎಪಿಡರ್ಮಿಸ್‌ನಲ್ಲಿರುವ ಕೋಶಗಳು ರಕ್ಷಣಾತ್ಮಕ ಗುಣವನ್ನು ಹೊಂದಿರುತ್ತವೆ. ಹಾಗೆಯೇ ಚರ್ಮಕ್ಕೆ ಬಣ್ಣವನ್ನು ನೀಡುವ ಮೆಲನೋಸೈಟ್‌ಗಳೂ ಇರುತ್ತವೆ. ಇನ್ನುಳಿದಂತೆ ಕೆಳಗಿನ ಪದರುಗಳಲ್ಲಿ ರಕ್ತನಾಳಗಳು, ನರಗಳು, ಬೆವರು ಗ್ರಂಥಿಗಳು, ಕೂದಲು ಬೇರು ಚೀಲುಗಳು ಇರುತ್ತವೆ. ಚರ್ಮವನ್ನು ದೇಹದ ಅತ್ಯಂತ ದೊಡ್ಡ ಅಂಗ ಎಂದು ಸಹ ಪರಿಗಣಿಸಲಾಗುತ್ತದೆ.

**SLEEP** (ಸ್ಲೀಪ್): ನಿದ್ರೆ; ಐಚ್ಛಿಕ ಯೋಚನೆ ಮತ್ತು ಚಲನ-ವಲನಗಳಿಂದ ಮುಕ್ತವಾದ ನೈಸರ್ಗಿಕ ವಿಶ್ರಾಂತ ಸ್ಥಿತಿ. ದಿನಕ್ಕೆ 6 ರಿಂದ 8 ಗಂಟೆಗಳ ನಿದ್ರೆ ಅಗತ್ಯವಿದೆ.

**SLEEP APNEA** (ಸ್ಲೀಪ್ ಅಪ್ನಿಯಾ): ನಿದ್ರೆಯ ಸಮಯದಲ್ಲಿ ಉಸಿರಾಟಕ್ಕೆ ಅಡಚಣೆ ಉಂಟಾಗುವುದು.

**SMALL POX** (ಸ್ಮಾಲ್ ಪಾಕ್ಸ್): ಸಿಡುಬು; ಇದೊಂದು ಸಾಂಕ್ರಾಮಿಕ ವೈರಸ್ ರೋಗವಾಗಿದೆ.

ಪ್ರಾರಂಭದಲ್ಲಿ ಅತಿಯಾದ ಜ್ವರ ಕಾಣಿಸಿಕೊಂಡ ನಂತರ ಮುಖದ ಮೇಲೆ ಕೆಂಪು ಕಲೆಗಳು ಕಾಣಿಸಿಕೊಳ್ಳುತ್ತವೆ. ಕ್ರಮೇಣ ಇವು ದೇಹ ಮೇಲಿನ ಭಾಗದ ಪೂರ್ತಿ ಹರಡುತ್ತವೆ. ನಂತರ ಇವು ಕೀವಿನಿಂದ ತುಂಬಿದ ಗುಳ್ಳೆಗಳಾಗಿ ಮುಖ ಹಾಗೂ ಕುತ್ತಿಗೆಯ ಭಾಗದಲ್ಲಿ ಕಲೆಗಳನ್ನು ಉಳಿಸಿಬಿಡುತ್ತವೆ.

ಹಿಂದಿನ ಕಾಲದಲ್ಲಿ ಇದೊಂದು ಮಾರಣಾಂತಿಕವೇ ಆಗಿದ್ದರು, ಇತ್ತೀಚಿನ ದಿನಗಳಲ್ಲಿನ ಲಸಿಕೆ ಮತ್ತು ಸೂಕ್ತ ಔಷಧಗಳಿಂದಾಗಿ ಈ ರೋಗ ನಿರ್ಮೂಲವಾಗಿದೆ.

**SNEEZE** (ಸ್ನೀಝ್): ಸೀನುವಿಕೆ; ಮೂಗು ಮತ್ತು ಬಾಯಿಯ ಮೂಲಕ ಗಾಳಿಯನ್ನು ಇದ್ದಕ್ಕಿದ್ದಂತೆ ವೇಗವಾಗಿ ಹೊರ ಹಾಕುವ ಅನೈಚ್ಛಿಕ ಕ್ರಿಯೆ. ಶ್ವಾಸನಾಳವನ್ನು ಪ್ರವೇಶಿಸಿದ ಯಾವುದೇ ರೀತಿಯ ಕಿರಿ-ಕಿರಿ ಕಾರಕ ವಸ್ತುಗಳನ್ನು ಹೊರಹಾಕಲು ಇರುವ ದೇಹದ ರಕ್ಷಣಾತ್ಮಕ ವಿಧಾನ ಇದಾಗಿದೆ.

**SPASM** (ಸ್ಪಾಸ್ಮ್): ಸೆಡೆತ, ಸೆಳೆತ, ಎಳೆತ, ಉಳುಕು; ಇದ್ದಕ್ಕಿದ್ದಂತೆ ಉಂಟಾಗುವ ಮಾಂಸಖಂಡಗಳ ಅನೈಚ್ಛಿಕ ಸಂಕುಚಿತತೆ. ಕೆಲವೊಮ್ಮೆ ಇದು ಅನೇಕ ಬಾರಿ ಪುನರಾವರ್ತಿತವಾಗಬಹುದು.

**SPHYGMOMANOMETER** (ಸ್ಫಿಗ್ಮೋಮ್ಯಾನೋಮೀಟರ್): ಧಮನಿಯೊತ್ತಡ ಮಾಪನ; ರಕ್ತದೊತ್ತಡವನ್ನು ಅಳೆಯುವ ಸಾಧನ. ಸಾಮಾನ್ಯವಾಗಿ ಇಂತಹ ಸಾಧನಗಳ ರಚನೆಯಲ್ಲಿ, ಗಾಳಿಯನ್ನು ಪಂಪ್ ಮಾಡಲು ಒಂದು ಬಲೂನ್, ತೋಳಿಗೆ ಸುತ್ತುವ ಗಾಳಿಯಿಂದಾಗಿ ಉಬ್ಬಿ ಒತ್ತಡ ಹೇರಬಲ್ಲ ಕಫ್ ಮತ್ತು ಅಂಕಿಗಳನ್ನು ಓದಲು ಪಾದರಸದ ಮೀಟರ್ ಭಾಗಗಳು ಇರುತ್ತವೆ.

**SPINAL CORD** (ಸ್ಪೈನಲ್ ಕಾರ್ಡ್): ಬೆನ್ನುಹುರಿ. ಮಿದುಳಿನ ವಿಸ್ತೃತ ಭಾಗ.

**SPLEEN** (ಸ್ಪ್ಲೀನ್): ಗುಲ್ಮ, ತೊರಳೆ, ನಡ್ಡಿ; ಉದರ ಕುಹರದಲ್ಲಿರುವ ಒಂದು ಅಂಗ. ಇದು ಅನೇಕ ಉಪಯುಕ್ತ ಕೆಲಸಗಳಲ್ಲಿ ಭಾಗಿಯಾಗುತ್ತದೆ. ಅದರಲ್ಲಿ ಮುಖ್ಯವಾದುದೆಂದರೆ ಕೆಲಸಕ್ಕೆ ಬಾರದ (ಆಯುಷ್ಯ ಮುಗಿದ) ಅಥವಾ ಅಸಹಜ ರಕ್ತಕಣಗಳನ್ನು ರಕ್ತಪ್ರವಾಹದಿಂದ ಬೇರ್ಪಡಿಸುವುದು. ಆ್ಯಂಟಿಬಾಡಿಗಳ ಉತ್ಪಾದನೆಯಲ್ಲೂ ಇದು ಪ್ರಮುಖ ಪಾತ್ರವಹಿಸುತ್ತದೆ.

**SPONDYLOSIS** (ಸ್ಪಾಂಡೈಲೋಸಿಸ್): ಬೆನ್ನೆಲು ಜೋಲಿ, ಬೆನ್ನೆಲು ಮುಂಜರಿಕೆ; ಬೆನ್ನುಹುರಿಯ ಮೂಳೆಗಳ (ವರ್ಟಿಬ್ರೆ)ನ್ನು ಬೇರ್ಪಡಿಸುವ ಸಂಬಂಧಕ ಅಂಗಾಂಶದ ಸವಕಳಿ ಅಥವಾ ಕ್ಷೀಣಿಸುವಿಕೆಯಿಂದ ಉಂಟಾಗುವ ಸ್ಥಿತಿ. ಸಾಮಾನ್ಯವಾಗಿ ವಯಸ್ಸಾದಂತೆ ಈ ಸಮಸ್ಯೆಯ ಸಂಭವ ಹೆಚ್ಚು.

**SPRAIN** (ಸ್ಪ್ರೈನ್): ಉಳುಕು. ಕೀಲುಗಳಲ್ಲಿರುವ ಯಾವುದೇ ರೀತಿಯ ಅಂಗಾಂಶಗಳ ಹಿಂಜುವಿಕೆ ಅಥವಾ ಹರಿದು ಹೋಗುವುದರಿಂದ ಉಂಟಾಗುವ ನೋವುಪೂರಿತ ಸ್ಥಿತಿ.

ತನ್ನ ಕಾರ್ಯಕ್ಷಮತೆಗಿಂತಲೂ ಹೆಚ್ಚಿನ ವ್ಯಾಪ್ತಿಗೆ ಮೂಳೆಯು ಇದ್ದಕ್ಕಿದ್ದಂತೆ ತಿರುಗಿದಾಗ ಅಥವಾ ಹಿಗ್ಗಿದಾಗ ಉಳುಕು ಉಂಟಾಗುತ್ತದೆ.

ಆ ನಿರ್ದಿಷ್ಟ ಕೀಲು ಭಾಗದ ಚಲನೆಯಿಂದಾಗಿ ನೋವು, ಊತ, ಅಲ್ಲಿ ಮುಟ್ಟಿದಾಗ ನೋವಿರುವುದು ಮತ್ತು ಆ ಭಾಗದಲ್ಲಿನ ಚರ್ಮದ ಬಣ್ಣದಲ್ಲಿ ಬದಲಾವಣೆಯಂತಹ ಲಕ್ಷಣಗಳು ಇರುತ್ತವೆ.

ಅತಿಯಾದ ಊತವಿದ್ದರೆ, ಪ್ರಾರಂಭದಲ್ಲಿ ಕೀಲುಕಟ್ಟು (ಬ್ಯಾಂಡೇಜ್)ಗಳನ್ನು ಹಾಕುವುದರ ಮೂಲಕ ಆ ಕೀಲಿನ ಚಲನೆಯನ್ನು ಆದಷ್ಟು ತಡೆಯಬೇಕು. ಊತ ಕಡಿಮೆಯಾಗುತ್ತಿದ್ದ ಹಾಗೆಯೇ ಸ್ವಲ್ಪ ಸ್ವಲ್ಪವೇ ಕೀಲನ್ನು ಚಲನೆಗೆ ಒಳಪಡಿಸಬೇಕು.

**SPUTUM** (ಸ್ಪೂಟಮ್): ಕಫ; ಜೊಲ್ಲಿನ ಜೊತೆಗೆ ಶ್ಲೇಷ್ಮವೂ ಕೂಡ ಬೆರೆತಿರುವ, ಬಾಯಿಯಿಂದ ಉಗಿಯಲ್ಪಡುವ ಪದಾರ್ಥ.

ಸೋಂಕು ಅಥವಾ ಗಂಟಲು ನಾಳದ ಕಿರಿಕಿರಿಯಿಂದಾಗಿ ಅತಿಯಾದ ಶ್ಲೇಷ್ಮ ಉತ್ಪತ್ತಿಯಾಗಿ, ಉಸಿರಾಟಕ್ಕೆ ತೊಂದರೆಯಾದಾಗ ದೇಹದ ರಕ್ಷಣಾತ್ಮಕ ವ್ಯವಸ್ಥೆಯ ಸಂವೇದನೆಯಿಂದಾಗಿ ಕೆಮ್ಮು ಉಂಟಾಗಿ ಶ್ಲೇಷ್ಮವನ್ನು ಹೊರ ಹಾಕಲಾಗುತ್ತದೆ.

**STERILIZATION** (ಸ್ಟೆರಿಲೈಜೇಷನ್): ಜೀವಿಶುದ್ಧಿ, ಜೀವಿಮಡೀಕರಣ. ಚಿಕಿತ್ಸೆ ಅಥವಾ ಪರೀಕ್ಷೆಗೆಂದು ಬಳಸುವ ಸಲಕರಣೆಗಳನ್ನು ಬಿಸಿ ಮಾಡುವುದರ ಮೂಲಕ, ಕುದಿಯುವ ನೀರಿನಲ್ಲಿ ಕಾಯಿಸುವುದರ ಮೂಲಕ, ವಿಕಿರಣಕ್ಕೆ ಒಳಪಡಿಸುವುದರ ಮೂಲಕ ರೋಗಾಣು ಮುಕ್ತಗೊಳಿಸುವ ಕ್ರಿಯೆ. ಮಕ್ಕಳಾಗದಿರುವಂತೆ ಮಾಡುವ ಶಾಸ್ತ್ರಕ್ರಿಯೆ, ಸಂತಾನ ಬಲ ಕಳೆತ.

**STIMULANT** (ಸ್ಟಿಮುಲೆಂಟ್): ಚೋದಕ, ಪ್ರೇರಕ; ಪ್ರಕ್ರಿಯೆ ಅಥವಾ ಅಂಗವೊಂದರ ಕ್ರಿಯೆಯನ್ನು ಹೆಚ್ಚಿಸುವ ಯಾವುದೇ ಅಂಶ.

**STOMACH** (ಸ್ಟಮಕ್): ಜಠರ, ತುತ್ತುಚೀಲ, ಹೊಟ್ಟೆ; ಅನ್ನನಾಳ ಮತ್ತು ಸಣ್ಣಕರುಳಿನ ನಡುವೆ ಇರುವ ಜೀರ್ಣಕ್ರಿಯೆ ವ್ಯವಸ್ಥೆಯ ಒಂದು ಅಂಗ. ಕಡಗೋಲಿನಂತೆ ಕಾರ್ಯನಿರ್ವಹಿಸುವ ಇದು ಆಹಾರದೊಂದಿಗೆ ಪಚನ ರಸಗಳು ಬೆರೆಯಲು ಸಹಾಯ ಮಾಡುತ್ತದೆ. ಆಹಾರವು ನಾಲ್ಕು ಗಂಟೆಗಳ ಕಾಲ ಜಠರದಲ್ಲಿದ್ದು, ನಂತರ ಕರುಳಿಗೆ ಸಾಗುತ್ತದೆ.

**STRESS** (ಸ್ಟ್ರೆಸ್): ಒತ್ತಡ, ಕ್ಲೇಶ, ಪ್ರಯಾಸ, ಪೀಡನೆ; ದೈಹಿಕ ಅಥವಾ ಮಾನಸಿಕ ಸ್ಥಿತಿಯನ್ನು ವಿಚಲಿತಗೊಳಿಸುವ ಯಾವುದೇ ಬಲ ಅಥವಾ ಅಂಶ.

ಒತ್ತಡವು ಕಾಯಿಲೆ, ಗಾಯ, ಅತಿಯಾದ ತಾಪಮಾನಗಳಂತಹ ಸ್ಥಿತಿಯಲ್ಲಿ ತೋರಿಸಬಹುದಾದ ದೇಹದ ಕ್ರಿಯೆಯಿಂದ ಇಲ್ಲವೆ ಯಾವುದೇ ಕೆಲಸವನ್ನು ಸಾಮರ್ಥ್ಯಕ್ಕೂ ಮೀರಿ ಅತಿಯಾದ ಮಾಡುವುದರಿಂದ ಉಂಟಾಗಬಹುದಾಗಿದೆ. ಮಾನಸಿಕ ಅಥವಾ ಭಾವನಾತ್ಮಕ ಒತ್ತಡವು ಪ್ರಜ್ಞಾಪೂರ್ವಕ ಆಲೋಚನೆ ಮತ್ತು ನಿರ್ಧಾರ ತೆಗೆದುಕೊಳ್ಳುವಂತಹ ಸಮಯದಲ್ಲಿ ಉಂಟಾಗುತ್ತದೆ.

**STROKE** (ಸ್ಟ್ರೋಕ್): ಲಕ್ವ, ಸನ್ನಿ ಹೊಡೆತ, ಧಕ್ಕೆ, ತೀವ್ರಾಘಾತ, ಮೆದುಳಿನ ಯಾವುದಾದರೂ ಒಂದು ಭಾಗಕ್ಕೆ ಇದ್ದಕ್ಕಿದ್ದಂತೆ ರಕ್ತ ಸಂಚಾರ ನಿಂತು ಹೋದಾಗ ಉಂಟಾಗುವ ಸ್ಥಿತಿ.

**SUBCONSCIOUS** (ಸಬ್‌ಕಾನ್ಷಿಯಸ್): ಎಚ್ಚರಿಕೆ ಬರದ, ಅರೆಯೆಚ್ಚರದ, ಅರೆಪರಿವೆ, ಸುಪ್ತಮನಸ್ಸು, ಪ್ರಜ್ಞಾಸ್ಥಿತಿಯ ಸಮ್ಮತಿಯ ಹೊರತಾಗಿಯೂ ಅಥವಾ ಕ್ಷೀಣಗ್ರಹಿಕಾ ಸ್ಥಿತಿಯಲ್ಲಿ ನಡೆಯುವ ಮಾನಸಿಕ ಕ್ರಿಯೆಗಳ ವಿವರಣೆ.

**SUFFOCATION** (ಸಫೋಕೇಷನ್): ಉಸಿರ್ಗಟ್ಟು, ಉಸಿರುಕಟ್ಟು; ಶ್ವಾಸಕೋಶ–ದೊಳಕ್ಕೆ ಗಾಳಿಯ ಹರಿಯುವಿಕೆಯನ್ನು ಕುಗ್ಗಿಸಬಲ್ಲಂತಹ ಯಾವುದೇ ಸ್ಥಿತಿ.

**SUICIDE** (ಸೂಸೈಡ್): ಆತ್ಮಹತ್ಯೆ; ತನ್ನ ಪ್ರಾಣವನ್ನು ತಾನೇ ಅರಿವಿದ್ದು ಇಲ್ಲವೆ ಬೇಕಂತಲೆ ಅಂತ್ಯ ಮಾಡಿಕೊಳ್ಳುವುದು. ಖಿನ್ನತೆಯಿಂದಲೋ ಪ್ರತಿಭಟನೆ ಮಾಡಲೋ ವ್ಯಕ್ತಿ ಆತ್ಮಹತ್ಯೆಗೆ ಪ್ರಯತ್ನ ಮಾಡುತ್ತಾನೆ. ಇದು ಹರೆಯದವರಲ್ಲಿ ಹೆಚ್ಚು.

**SUNBURN** (ಸನ್‌ಬರ್ನ್): ಬಿಸಿಲ ಸುಡುಗೆ, ಬಿಸಿಲು ಕಂದು; ಸೂರ್ಯನ ನೇರಳಾತೀತ ಕಿರಣಗಳಿಗೆ ಅತಿಯಾಗಿ ಮೈ ಒಡ್ಡುವುದರಿಂದ ಉಂಟಾಗುವ ಚರ್ಮದ ಉರಿಯೂತ ಮತ್ತು ಬಣ್ಣಗೆಡಿಸುವಿಕೆ.

**SUPERFICIAL** (ಸೂಪರ್‌ಫಿಶಿಯಲ್): ಮೇಲ್ಮೇಲಿನ, ಆಳವಿರದ, ಮೇಲ್‌ಸ್ತರದ; ಹೊರಪದರದ ಹತ್ತಿರವೆ. ವಿಸ್ತರಿಸುವಿಕೆ ಇನ್ನು ಆಳಮಟ್ಟವನ್ನು ತಲುಪಿಲ್ಲ ಎಂಬುದರ ವಿವರಣೆ.

**SUPPURATIVE** (ಸಪುರೇಟಿವ್): ಕೀವು ಗೂಡುವ; ಕೀವು ಇದೆ ಎಂಬುದರ ವಿವರಣೆ ಕೊಡುವಂಥದ.

**SUTURE** (ಸ್ಯೂಚರ್): ಹೊಲಿಗೆ, ಸೇರುವೆ, ಹೊಲಿಗೆ ಹಾಕು; ಗಾಯ ಅಥವಾ ಕೊಯ್ತದ ಎರಡೂ ತುದಿಗಳನ್ನು ಸೇರಿಸಿ ಹೊಲೆಯುವುದು.

**SYMPTOM** (ಸಿಂಪ್ಟಮ್): ಲಕ್ಷಣ; ರೋಗ ಅಥವಾ ಸೋಂಕಿನ ಲಕ್ಷಣ.

**SYNCOPE** (ಸಿಂಕೋಪ್): ಕವಳಿ, ಬವಳಿ; ಮೆದುಳಿನ ರಕ್ತ ಸಂಚಾರದ ತಾತ್ಕಾಲಿಕ ಅಡಚಣೆಯಿಂದ ಪ್ರಜ್ಞೆ ತಪ್ಪುವಿಕೆ.

# T

**TACHYCARDIA** (ಟೇಕಿಕಾರ್ಡಿಯ): ಕಾಯಿಲೆ, ಕೆಲವು ಔಷಧ, ಮಾದಕ ದ್ರವ್ಯ, ವ್ಯಾಯಾಮ ಅಥವಾ ಭಯ ಮಾನಸಿಕ ವ್ಯಥೆಗಳಂತಹ ಕಾರಣಗಳಿಂದಾಗಿ ಉಂಟಾಗುವ ಹೃದಯದ ಅಸಹಜ ವೇಗದ ಬಡಿತ.

**TAPEWORM** (ಟೇಪ್‌ವರ್ಮ್): ಲಾಡಿಹುಳು; ಕರುಳಿನಲ್ಲಿ ವಾಸಿಸಬಲ್ಲಂತಹ ಉದ್ದನೆಯ, ತೆಳು, ಚಪ್ಪಟೆಯಾದ ಕ್ರಿಮಿ (ಜಂತು).

ಈ ಕ್ರಿಮಿಗಳಿಂದಾಗಿ ನಿಯಮಿತವಾಗಿ ಹಸಿವಾಗಿ, ಆಹಾರ ಸೇವಿಸುವಂತಹ ವ್ಯಕ್ತಿಗಳಲ್ಲೂ ರಕ್ತಹೀನತೆ ಮತ್ತು ದೇಹದ ತೂಕದಲ್ಲಿ ಕ್ಷೀಣತೆ ಕಾಣಿಸಿಕೊಳ್ಳಬಹುದು.

**TENDON** (ಟೆಂಡಾನ್): ಕಂಡರ; ಮಾಂಸಖಂಡಗಳನ್ನು ಮೂಳೆಯೊಂದಿಗೆ ಸೇರಿಸುವ ಗಟ್ಟಿಯಾದ, ನಾರು ಜೋಡಣಾ ಅಂಗಾಂಶ.

**TERATOMA** (ಟೆರಟೋಮ): ಕಿರಾತಗಂತಿ; ಭ್ರೂಣ ಅಂಗಾಂಶಗಳಲ್ಲಿ ಕಾಣಿಸಿಕೊಳ್ಳುವ ಗಡ್ಡೆ. ಹಲ್ಲು, ಕೂದಲು, ಸ್ನಾಯು ಎಲ್ಲ ಈ ಗೆಡ್ಡೆಯಲ್ಲಿರುತ್ತದೆ.

**TETANUS** (ಟೆಟನಸ್): ಧನುರ್ವಾಯು, ಸೆಟೆಬೇನೆ, ಮಾಂಸಖಂಡಗಳ ತೀವ್ರತೆರನಾದ ಸಂಕುಚಿತತೆ ಲಕ್ಷಣವುಳ್ಳ ಸೋಂಕುಪೂರಿತ ರೋಗ.

ದೇಹದ ಯಾವುದೇ ರೀತಿಯ ತೆರೆದ ಗಾಯಗಳಿಂದಾಗಿ ಒಳಸೇರುವ ಈ ರೋಗದ ಬ್ಯಾಕ್ಟೀರಿಯ, ವಿಶೇಷ ರೀತಿಯ ನಂಜನ್ನು ಬಿಡುಗಡೆ ಮಾಡುತ್ತದೆ. ಇದರಿಂದಾಗಿ ದವಡೆಯ ಮಾಂಸಖಂಡಗಳು ಸಂಕುಚಿತತೆಗೊಳ್ಳುವುದರಿಂದ ದವಡೆಯನ್ನು ಚಲಿಸಲಾಗದಂತಾಗುತ್ತದೆ.

ಕ್ರಮೇಣ, ದವಡೆ ಮಾಂಸಖಂಡಗಳನ್ನಲ್ಲದೆ, ಇತರೆ ಮಾಂಸಖಂಡಗಳನ್ನೂ ಇದು ಬಾಧಿಸಬಹುದಾಗಿದ್ದು, ಅವು ತುಂಬಾ ನೋವುಪೂರಿತವಾಗಿರುತ್ತವೆ.

ಸಾವೂ ಸಂಭವಿಸಬಹುದು. ಆದ್ದರಿಂದ ಯಾವುದೇ ಗಾಯಕ್ಕೆ ಮಣ್ಣು / ಸೆಗಣಿ ಮೆತ್ತಬೇಡಿ. ಗಾಯವನ್ನು ತೊಳೆದು, ಕೂಡಲೇ ವೈದ್ಯರನ್ನು ಕಾಣಿ. ಟೆಟನಸ್ ಟಾಕ್ಸಾಯಿಡ್ (TT) ಇಂಜೆಕ್ಷನ್ ಹಾಕಿಸಿ.

**TETANY** (ಟೆಟನಿ): ಎಡೆ ಸೆಳವು, ಸ್ನಾಯು ಸೆಟೆತ; ರಕ್ತದಲ್ಲಿ ಕ್ಯಾಲ್ಸಿಯಂ ಪ್ರಮಾಣ ಕಡಿಮೆಯಾಗುವುದರಿಂದ ಕಾಣಿಸಿಕೊಳ್ಳುವ ರೋಗ.

**THERAPEUTICS** (ಥೆರಾಪೆಟಿಕ್ಸ್): ರೋಗ ಚಿಕಿತ್ಸೆ; ರೋಗದ ಚಿಕಿತ್ಸೆ ನೀಡುವ ವೈದ್ಯಕೀಯ ಶಾಖೆ.

**THROMBOSIS** (ಥ್ರೋಂಬೋಸಿಸ್): ಕೂಡ್ಗರಣಿಕೆ; ಹೃದಯ ಅಥವಾ ರಕ್ತನಾಳಗಳಲ್ಲಿ ಅಸಹಜ ರೀತಿಯ ರಕ್ತ ಹೆಪ್ಪುಗಟ್ಟುವಿಕೆ.

**THRUSH** (ಥ್ರಶ್): ಹುಗುಳು, ಅಗ್ರ; ಬಹುಮುಖ್ಯವಾಗಿ ಮಕ್ಕಳಲ್ಲಿ ಕಾಣಿಸಿಕೊಳ್ಳುವ ಶಿಲೀಂಧ್ರಕಾರಕ ಸೋಂಕು. ಸೋಂಕಿತರ ಬಾಯಿ ಮತ್ತು ಗಂಟಲಿನಲ್ಲಿ ಬಿಳಿಕಲೆ ಮತ್ತು ಹುಣ್ಣುಗಳು ಕಾಣಿಸಿಕೊಳ್ಳುತ್ತವೆ.

**THYROID GLAND** (ಥೈರಾಯ್ಡ್ ಗ್ಲ್ಯಾಂಡ್): ಗುರಾಣಿಕ ಗ್ರಂಥಿ; ದೇಹದ ಬೆಳವಣಿಗೆ ಮತ್ತು ಚಯಾಪಚಯ ಕ್ರಿಯೆಗಳನ್ನು ನಿಯಂತ್ರಿಸುವಂತಹ ಥೈರಾಕ್ಸಿನ್ ಹಾರ್ಮೋನನ್ನು ಸ್ರವಿಸುವ ಗಂಟಲು ಭಾಗದಲ್ಲಿರುವ ನಿರ್ನಾಳ ಗ್ರಂಥಿ.

**TISSUE** (ಟಿಶ್ಯು): ಅಂಗಾಂಶ; ನಿರ್ದಿಷ್ಟ ಕ್ರಿಯೆಗಾಗಿ, ನಿರ್ದಿಷ್ಟ ಕೋಶಗಳಿಂದ ರಚಿತವಾದ ದೇಹದ ಕ್ರಿಯೆ ಮತ್ತು ರಚನೆಯ ಘಟಕ.

**TONSILS** (ಟಾನ್ಸಿಲ್ಸ್): ಮೆಂಡಿಕೆ; ಗಂಟಲಿನ ಎರಡು ಬದಿಯಲ್ಲಿರುವ ಲಿಂಫ್‌ಗ್ರಂಥಿಗಳು.

**TONSILLECTOMY** (ಟಾನ್ಸಿಲೆಕ್ಟಮಿ): ಮೆಂಡಿಕೆ ಕೊಯ್ತೆಗೆತ; ಶಸ್ತ್ರಚಿಕಿತ್ಸೆಯ ಮೂಲಕ ಟಾನ್ಸಿಲ್‌ಗಳನ್ನು ತೆಗೆದು ಹಾಕುವುದು.

**TONSILLITIS** (ಟಾನ್ಸಿಲೈಟಿಸ್): ಮೆಂಡಿಕೆಯುರಿತ; ಟಾನ್ಸಿಲ್‌ಗಳ ಸೋಂಕು ಅಥವಾ ಉರಿಯೂತ. ಗಂಟಲು ನೋವು, ಜ್ವರ, ನುಂಗುವಿಕೆಯಲ್ಲಿ ತೊಂದರೆಯಂತಹ ಲಕ್ಷಣಗಳನ್ನು ಹೊಂದಿರಬಹುದಾಗಿದ್ದು, ಈ ಅಂಗಗಳು ಊದಿಕೊಳ್ಳಬಹುದಾಗಿದೆ.

**TOPICAL** (ಟಾಪಿಕಲ್): ತಾವಿನ, ಎಡೆಯ; ಔಷಧಿಗಳ ಲೇಪನದಂತಹ ಸಮಯದಲ್ಲಿ, ದೇಹದ ನಿರ್ದಿಷ್ಟ ಭಾಗ ಎಂಬುದನ್ನು ವಿವರಿಸುವ ಪದ.

**TOXEMIA** (ಟಾಕ್ಸೀಮಿಯ): ಜೀವಿಷದ, ವಿಷಕರ; ರಕ್ತದಲ್ಲಿ ನಂಜಿನ ಅಂಶಗಳು ಇದ್ದು, ಅವು ವ್ಯವಸ್ಥೆಯ ಪೂರ್ತಿ ಹರಡಿರುವ ಸ್ಥಿತಿ.

**TOXIN** (ಟಾಕ್ಸಿನ್): ಜೀವಿಷ, ರೋಧಜನಿಕ ವಿಷ; ಸೂಕ್ಷ್ಮಜೀವಿಗಳಿಂದ ಉತ್ಪತ್ತಿಯಾಗಿ ಮನುಷ್ಯನಲ್ಲಿ ಸೋಂಕು ಮತ್ತು ರೋಗಗಳನ್ನು ಉಂಟುಮಾಡಬಲ್ಲ ಯಾವುದೇ ಬಗೆಯ ಅಂಶ/ಪದಾರ್ಥ.

**TRACHEA** (ಟ್ರೇಕಿಯ): ಉಸಿರ್ನಾಳ; ಧ್ವನಿಪೆಟ್ಟಿಗೆಯಿಂದ, ಶ್ವಾಸಕೋಶದಲ್ಲಿ ವಿಭಜನೆಗೊಳಪಡುವವರೆಗಿನ ಶ್ವಾಸನಾಳ.

**TRACHEOTOMY** (ಟ್ರೇಕಿಯೋಟಮಿ): ಉಸಿರ್ನಾಳ ಕೊಯ್ತು; ಕುತ್ತಿಗೆಯ ಮುಂಭಾಗದಲ್ಲಿ ಶಸ್ತ್ರಚಿಕಿತ್ಸೆಯ ಕೊಯ್ತದ ಮೂಲಕ ಶ್ವಾಸನಾಳವನ್ನು ತೆರೆಯುವುದು.

ಕಾಯಿಲೆ ಅಥವಾ ಗಾಯಗಳಂತಹ ಸಂದರ್ಭದಲ್ಲಿ ಶ್ವಾಸನಾಳದಲ್ಲಿ ಗಾಳಿಯ ಹರಿವಿಗೆ ಅಡಚಣೆಯಾಗಿದ್ದರೆ ಇದನ್ನು ಮಾಡುತ್ತಾರೆ.

**TRANSPLANT** (ಟ್ರಾನ್ಸ್‌ಪ್ಲ್ಯಾಂಟ್): ನಾಟಿ, ನಾಟಿ ಹಾಕು; ಅಂಗ ಅಥವಾ ಅಂಗಾಂಶದ ವರ್ಗಾವಣೆ; ವರ್ಗಾಯಿಸಲ್ಪಟ್ಟ ಅಂಗ ಅಥವಾ ಅಂಗಾಂಶ.

ಕಾಯಿಲೆ ಅಥವಾ ಗಾಯದಂತಹ ಸಂದರ್ಭಗಳಲ್ಲಿ ಒಂದು ಅಂಗ ಅಥವಾ ಅಂಗಾಂಶ ಸರಿಪಡಿಸಲಾರದಷ್ಟು ನಾಶವಾಗಿದ್ದು, ಅದಕ್ಕೆ ಪರ್ಯಾಯವಾದ ಅಂಗ ಅಥವಾ ಅಂಗಾಂಶ ಬೇರೊಂದು ಭಾಗದಲ್ಲಿ ಲಭ್ಯವಿದ್ದು, ದೇಹದೊಂದಿಗೆ ಹೊಂದಾಣಿಕೆ ಸಾಧ್ಯವಿದ್ದರೆ, ಅದನ್ನು ನಾಶವಾದ ಜಾಗದಲ್ಲಿ ಶಸ್ತ್ರಚಿಕಿತ್ಸೆಯ ಮೂಲಕ ಜೋಡಿಸುವುದು.

ಈ ಕ್ರಿಯೆಗಾಗಿ ಅದೇ ದೇಹದ ಮತ್ತೊಂದು ಭಾಗ, ಇಲ್ಲವೆ ಬೇರೆ ದೇಹದ ಅದೇ ಅಂಗ / ಅಂಗಾಂಶ ಇಲ್ಲವೆ ಬೇರೆಯದೆ ಪ್ರಾಣಿ / ತಳಿಯ ಇಲ್ಲವೆ ಕೃತಕ ಉಪಕರಣಗಳನ್ನೂ ಬಳಸಬಹುದಾಗಿದೆ.

**TRAUMA** (ಟ್ರಾಮಾ): ಪೆಟ್ಟು, ಗಾಯ, ಹಾನಿ; ದೈಹಿಕ ಅಥವಾ ಮಾನಸಿಕವಾಗಿ ಉಂಟಾಗಬಹುದಾದ ತ್ರಾಸು ಅಥವಾ ವ್ಯಥೆ. ವೈದ್ಯಕೀಯ ಪರಿಭಾಷೆಯಲ್ಲಿ ಇದನ್ನು ಸಾಮಾನ್ಯವಾಗಿ ಆಘಾತ (Shock)ವನ್ನು ಉಂಟುಮಾಡಬಲ್ಲ ದೈಹಿಕ ಪೆಟ್ಟು ಅಥವಾ ದೈಹಿಕ ಲಕ್ಷಣಗಳನ್ನು ವಿವರಿಸಲು ಬಳಸಲಾಗುತ್ತದೆ.

**TREMOR** (ಟ್ರೆಮರ್): ನಡುಕ, ಕಂಪನ; ದೇಹದ ಯಾವುದಾದರೂ ಒಂದು ಭಾಗದ ಅನೈಚ್ಛಿಕ ನಡುಗುವಿಕೆ.

**TUBERCULOSIS** (ಟ್ಯುಬರ್‌ಕ್ಯುಲೋಸಿಸ್): ಕ್ಷಯರೋಗ. ಟುಬರ್‌ಕಲ್ ಬಾಸಿಲ್ಲೈ ಎಂಬ ಜೀವಾಣುವಿನಿಂದ ಉಂಟಾಗುವ ಈ ರೋಗ ಮುಖ್ಯವಾಗಿ ಶ್ವಾಸಕೋಶವನ್ನು ಬಾಧಿಸುತ್ತದೆ.

ದೇಹದ ಇತರೆ ಅಂಗಗಳಲ್ಲೂ ಇದು ಕಾಣಿಸಿಕೊಳ್ಳಬಹುದಾದರೂ ಅದರ ಪ್ರಮಾಣ ಕಡಿಮೆ. ಒಟ್ಟಿನಲ್ಲಿ ಪೀಡನೆಗೆ ಒಳಗಾದ ಅಂಗದ ಕ್ಷೀಣಿಸುವಿಕೆ ಅಥವಾ ನಾಶವೇ ಕ್ಷಯ. ಶ್ವಾಸಕೋಶದ ಕ್ಷಯವನ್ನು ಪಲ್ಮನರಿ ಟ್ಯುಬರ್‌ಕ್ಯುಲೋಸಿಸ್ ಎನ್ನಲಾಗುವುದು. ಮೂರು ವಾರಗಳಿಗಿಂತಲೂ ಹೆಚ್ಚಿನ ಅವಧಿಯ ಕೆಮ್ಮು, ದೇಹದ ತೂಕ ಕ್ಷೀಣಿಸುವುದು ಮುಂತಾದವು ಇದರ ಲಕ್ಷಣಗಳು. ಹೆಚ್.ಐ.ವಿ.ಯ ಒಂದು ಸಾಮಾನ್ಯ ಸಹ ಸೋಂಕು ಇದಾಗಿರುತ್ತದೆ.

**TUMOUR** (ಟ್ಯೂಮರ್): ಗಂತಿ, ಗಡ್ಡೆ, ಗಳಲೆ; ಸುತ್ತಲಿನ ಅಂಗಾಂಶಗಳಿಂದ ಸ್ವತಂತ್ರವಾದ ಯಾವುದೇ ರೀತಿಯ ಹೊಸ ಅಂಗಾಂಶದ ಬೆಳವಣಿಗೆ. ನಿಧಾನವಾಗಿ ಬೆಳೆಯಬಹುದು. ವೇಗವಾಗಿ ಬೆಳೆಯಬಹುದು. ಗೆಡ್ಡೆ ಸೌಮ್ಯ ಅಥವಾ ಮರಣಾಂತಿಕವಾಗಿರಬಹುದು. ಇದರ ಮೇಲೆ ಚಿಕಿತ್ಸೆ ನಿರ್ಧಾರವಾಗುತ್ತದೆ.

# U

**ULCER** (ಅಲ್ಸರ್): ಹುಣ್ಣು; ಉರಿಯೂತದಂತಹ ಸಮಸ್ಯೆಯಿಂದ ತನ್ನ ರಕ್ಷಣಾತ್ಮಕ ಮೇಲು ಪದರದ ಕೊರತೆ ಹೊಂದಿರುವ ಚರ್ಮ ಅಥವಾ ಶ್ಲೇಷ್ಮ ಪದರದ ಭಾಗ. ಗುಳ್ಳೆ ಅಥವಾ ಹೊಡೆದುಕೊಂಡ ಗಾಯ.

ಜೀರ್ಣನಾಳದಲ್ಲಿ ಕಾಣಿಸಿಕೊಳ್ಳುವ ಪೆಪ್ಟಿಕ್ ಅಲ್ಸರ್ ಇದಕ್ಕೆ ಉದಾಹರಣೆ.

**URINARY BLADDER** (ಯೂರಿನರಿ ಬ್ಲ್ಯಾಡರ್): ಮೂತ್ರಕ; ಮೂತ್ರವನ್ನು ಮೂತ್ರಪಿಂಡಗಳಿಂದ ಸ್ವೀಕರಿಸಿ, ಹಿಡಿದಿಟ್ಟುಕೊಂಡು ಸೂಕ್ತ ಸಮಯದಲ್ಲಿ ಹೊರ ಹರಿದುಬಿಡುವ ಚೀಲದಂತಹ ಅಂಗ.

**UROLOGY** (ಯೂರಾಲಜಿ): ಮೂತ್ರಶಾಸ್ತ್ರ; ಮೂತ್ರನಾಳ ಹಾಗೂ ಸಂತಾನೋತ್ಪತ್ತಿ ವ್ಯವಸ್ಥೆಗೆ ಸಂಬಂಧಿಸಿದ ರೋಗ ಮತ್ತು ವ್ಯಾಧಿಗಳ ಅಧ್ಯಯನ, ಪತ್ತೆಹಚ್ಚುವಿಕೆ ಮತ್ತು ಚಿಕಿತ್ಸೆಗೆ ಸಂಬಂಧಪಟ್ಟ ವೈದ್ಯಕೀಯ ಶಾಖೆ.

# V

**VARICOSE VEINS** (ವೆರಿಕೋಸ್ ವೇನ್ಸ್): ಊದಿಗಂಟಿಕ್ಕಿದ ರಕ್ತನಾಳಗಳು; ಉಬ್ಬಿದ, ಗಂಟು ಗಂಟಾದ ರಕ್ತನಾಳಗಳು. ಇವುಗಳನ್ನು ಸಾಮಾನ್ಯವಾಗಿ ಕಾಲುಗಳಲ್ಲಿ ಕಾಣಬಹುದು.

ಕಾಲುಗಳಲ್ಲಿನ ರಕ್ತವು ಹೃದಯಕ್ಕೆ ಹಿಂತಿರುಗಬೇಕೆಂದರೆ ಭೂಮಿಯ ಗುರುತ್ವಾಕರ್ಷಣೆಗೆ ವಿರುದ್ಧವಾಗಿ ಚಲಿಸಬೇಕಾಗಿರುತ್ತದೆ. ಈ ಸಂದರ್ಭದಲ್ಲಿ ರಕ್ತ ಪುನಃ ಕೆಳಗೆ ಹರಿಯದಂತೆ ತಡೆಯಲು ಕಾಲಿನ ಅಶುದ್ಧ ರಕ್ತನಾಳಗಳಲ್ಲಿ ವಿಶೇಷ ರೀತಿಯ ಕವಾಟಗಳಿರುತ್ತವೆ. ದೇಹ ಸ್ಥೂಲತೆ, ವ್ಯಾಯಾಮ ಮಾಡದಿರುವಿಕೆ, ದೀರ್ಘ ಅವಧಿಯ ನಿಲ್ಲುವಿಕೆ ಅಥವಾ ಕೂರುವಿಕೆಯಿಂದ ಅಶುದ್ಧ ರಕ್ತನಾಳಗಳು ಬಲಹೀನವಾಗುವುದರಿಂದ ಆ ಕವಾಟಗಳು ಸರಿಯಾಗಿ ಕಾರ್ಯ ನಿರ್ವಹಿಸುವುದಿಲ್ಲ. ಇದರಿಂದಾಗಿ ರಕ್ತವು ಸರಿಯಾಗಿ ಮೇಲೆ ಹೋಗದೆ ಸ್ವಲ್ಪ ಪ್ರಮಾಣ ಕೆಳಗೆ ಶೇಖರಣೆಯಾಗುವುದರಿಂದ ರಕ್ತನಾಳಗಳು ಮತ್ತಷ್ಟು ಬಲಹೀನತೆಗೊಂಡು ಈ ರೀತಿ ಗಂಟುಗಳಾಗುತ್ತವೆ.

**VASCULITIS** (ವ್ಯಾಸ್ಕುಲೈಟಿಸ್): ರಕ್ತ ನಾಳುರಿತ, ಹಾಲ್ರಸ ನಾಳುರಿತ; ರಕ್ತನಾಳಗಳ ಉರಿಯೂತ.

**VEIN** (ವೈನ್): ಹೃದಯಕ್ಕೆ ರಕ್ತವನ್ನು ವಾಪಸು ಕೊಂಡೊಯ್ಯುವ ರಕ್ತನಾಳಗಳು.

**VERTEBRAE** (ವರ್ಟೆಬ್ರೇ): ಬೆನ್ನೆಲುಬುಗಳು, ಬೆನ್ಮೂಳೆ; ಬೆನ್ನುಹುರಿಯನ್ನು ಸುರಕ್ಷಿತವಾಗಿ ತನ್ನೊಳಗೆ ಅಡಗಿಸಿಕೊಂಡು ಕೊಂಡೊಯ್ಯುವ ಬೆನ್ನುಮೂಳೆಯ ಸಣ್ಣ ಸಣ್ಣ ಭಾಗಗಳು.

**VERTIGO** (ವರ್ಟಿಗೋ): ತಲೆಸುತ್ತು, ತಲೆದಿಪ್ಪಟೆ; ಮಂಪರಿನ ಲಕ್ಷಣದೊಂದಿಗೆ ತಾನು ಚಲಿಸುತ್ತಿರುವ ಹಾಗೂ ಸುತ್ತಮುತ್ತಲಿನ ವಸ್ತುಗಳೂ ಚಲಿಸುತ್ತಿರುವಂತಹ ಅನುಭವವಾಗುವ ಬೇನೆ.

**VIRULENT** (ವಿರುಲೆಂಟ್): ಅತಿ ವಿಷಮ, ವಿಷಕರ; ದೇಹದ ರೋಗ ನಿರೋಧಕ ಶಕ್ತಿಯನ್ನು ಮೀರಿ, ಸೋಂಕನ್ನು ಉಂಟುಮಾಡಬಲ್ಲದು ಎಂಬುದನ್ನು ವಿವರಿಸುವ ಪದ.

**VITAMIN** (ವಿಟಮಿನ್): ಜೀವಸತ್ವ; ದೇಹದ ಸಾಮಾನ್ಯ ಬೆಳವಣಿಗೆ ಮತ್ತು ಕ್ರಿಯೆಗೆ ಅವಶ್ಯವಿರುವ ಯಾವುದೇ ರೀತಿಯ ಸಾವಯವ ಪದಾರ್ಥ/ಅಂಶ. ಬಹಳಷ್ಟು ವಿಟಮಿನ್‌ಗಳು ನಾವು ಸೇವಿಸುವ ಆಹಾರ ಪದಾರ್ಥಗಳಿಂದ ಲಭ್ಯವಾದರೆ, ಕೆಲವೊಂದು ನಮ್ಮ ದೇಹದಲ್ಲೇ ಉತ್ಪತ್ತಿಯಾಗುತ್ತವೆ.

**VITAMIN-A** (ವಿಟಮಿನ್ ಎ): ಜೀವಸತ್ವ'ಎ'; ರಾತ್ರಿ ದೃಷ್ಟಿ, ಚರ್ಮ ಹಾಗೂ ಶ್ಲೇಷ್ಮ ಪದರದ ಕೋಶಗಳ ಉತ್ಪಾದನೆಗೆ ಅಗತ್ಯವಾಗಿರುವ ಈ ವಿಟಮಿನ್ ಹಸಿರು ತರಕಾರಿ, ಮೊಟ್ಟೆ, ಬೆಣ್ಣೆ, ಹಾಲು, ಲಿವರ್ ಮತ್ತು ಮೀನೆಣ್ಣೆಗಳಲ್ಲಿ ದೊರಕುತ್ತದೆ. ಇದರ ಕೊರತೆಯಿಂದ ಇರುಳುಗುರುಡುತನ ಕಾಣಿಸಿಕೊಳ್ಳಬಹುದು.

**VITAMIN B COMPLEX** (ವಿಟಮಿನ್ 'ಬಿ' ಕಾಂಪ್ಲೆಕ್ಸ್): ಜೀವಸತ್ವ–ಬಿ; ಇವುಗಳನ್ನು ವಿವಿಧ ಘಟಕಗಳಾಗಿ ವಿಂಗಡಿಸಬಹುದಾಗಿದೆ. ವಿಟಮಿನ್ ಬಿ–1, (ಥಯಾಮಿನ್) ಎಂಬುದು ನರಗಳ ಬೆಳವಣಿಗೆ ಹಾಗೂ ಕಾರ್ಯಕ್ಷಮತೆಗೆ ಅಗತ್ಯವಾದುದಾಗಿದ್ದು, ಈಸ್ಟ್, ದವಸಧಾನ್ಯಗಳು, ಮಾಂಸ, ಮೊಟ್ಟೆ ಮತ್ತು ಆಲೂಗಡ್ಡೆಗಳಲ್ಲಿ ದೊರಕುತ್ತದೆ.

ವಿಟಮಿನ್ ಬಿ–2 (ರೈಬೋಫ್ಲೇವಿನ್) ಎಂಬುದು ದೇಹದ ಕೋಶಗಳ ಬೆಳವಣಿಗೆ ಮತ್ತು ಅವುಗಳ ಪಚನ ಕ್ರಿಯೆಗೆ ಅಗತ್ಯವಾದುದಾಗಿದ್ದು ಹಾಲು, ಮೊಟ್ಟೆ, ಗಿಣ್ಣ, ಲಿವರ್ ಮತ್ತು ಮಾಂಸಗಳಲ್ಲಿ ದೊರಕುತ್ತದೆ.

ವಿಟಮಿನ್ ಬಿ–6 ಎಂಬುದು ಸೋಂಕಿನ ವಿರುದ್ಧ ಹೋರಾಡುವ ಆ್ಯಂಟಿ–ಬಾಡಿಗಳ ಉತ್ಪಾದನೆ ಮತ್ತು ಪ್ರೊಟೀನುಗಳ ಚಯಾಪಚಯ ಕ್ರಿಯೆಗೆ ಅಗತ್ಯವಾದುದಾಗಿದ್ದು ಧಾನ್ಯ, ಮೀನು, ಲಿವರ್ ಮತ್ತು ಈಸ್ಟ್‌ಗಳಲ್ಲಿ ದೊರೆಯುತ್ತದೆ.

ವಿಟಮಿನ್ ಬಿ–12 ಎಂಬುದು ರಕ್ತದ ಉತ್ಪಾದನೆ, ಕೊಬ್ಬು ಮತ್ತು ಶರ್ಕರಗಳ ಚಯಾಪಚಯ ಕ್ರಿಯೆ, ಸಹಜ ಬೆಳವಣಿಗೆ ಮತ್ತು ನರಗಳ ಕ್ರಿಯೆಗೆ ಅಗತ್ಯವಾದುದಾಗಿದ್ದು ಹಾಲು, ಮೊಟ್ಟೆ, ಲಿವರ್ ಮತ್ತು ಮಾಂಸಗಳಲ್ಲಿ ದೊರೆಯುತ್ತದೆ.

ನಿಯಾಸಿನ್ (ನಿಕೋಟಿನಿಕ್ ಆ್ಯಸಿಡ್) ಎಂಬುದು ಶರ್ಕರದ ಚಯಾಪಚಯ ಕ್ರಿಯೆ ಮತ್ತು ಕರುಳಿನ ಸಹಜ ಕ್ರಿಯೆಗೆ ಅಗತ್ಯವಾದು–ದಾಗಿದ್ದು, ಈಸ್ಟ್, ಲಿವರ್, ಮಾಂಸ, ಧಾನ್ಯಗಳಲ್ಲಿ ದೊರೆಯುತ್ತದೆ.

ಫೋಲಿಕ್ ಆ್ಯಸಿಡ್ ಎಂಬುದು ಪ್ರೊಟೀನ್ ಘಟಕಗಳಾದ ಅಮೈನೋ ಆ್ಯಸಿಡ್‌ಗಳ ಮತ್ತು ಶರ್ಕರದ ಚಯಾಪಚಯ ಕ್ರಿಯೆಗೆ ಅಗತ್ಯವಾದು–ದಾಗಿದ್ದು ಹಸಿರು ತರಕಾರಿ, ಪಕ್ಷಿಯ ಪಿತ್ತಕೋಶ, ಲಿವರ್‌ಗಳಲ್ಲಿ ದೊರೆಯುತ್ತದೆ.

ಪ್ಯಾಂಟೋಥೆನಿಕ್ ಆ್ಯಸಿಡ್ ಎಂಬುದು ಕೋಶಗಳ ಬೆಳವಣಿಗೆಗೆ ಅಗತ್ಯ–ವಾದುದಾಗಿದ್ದು ಹಸಿರು ತರಕಾರಿ ಮತ್ತು ಮಾಂಸಗಳಲ್ಲಿ ದೊರೆಯುತ್ತದೆ.

ಬಯೋಟಿನ್ ಎಂಬುದು ಸಹಜ ಬೆಳವಣಿಗೆಗೆ ಅಗತ್ಯವಾದುದಾಗಿದ್ದು ಹಸಿರು ತರಕಾರಿ ಮತ್ತು ಮಾಂಸಗಳಲ್ಲಿ ದೊರೆಯುತ್ತದೆ. ಕೋಲಿನ್ ಎಂಬುದು ಕೊಬ್ಬಿನ ಚಯಾಪಚಯ ಕ್ರಿಯೆಗೆ ಅಗತ್ಯವಾದುದಾಗಿದ್ದು ಹಸಿರು ತರಕಾರಿ ಮತ್ತು ಮಾಂಸಗಳಲ್ಲಿ ದೊರೆಯುತ್ತದೆ.

ಐನೋಸಿಟಾಲ್ ಎಂಬುದು ಕೊಲೆಸ್ಟಿರಾಲ್‌ನ ಚಯಾಪಚಯ ಕ್ರಿಯೆಗೆ ಅಗತ್ಯವಾದುದಾಗಿದ್ದು ಹಸಿರು ತರಕಾರಿ ಮತ್ತು ಮಾಂಸಗಳಲ್ಲಿ ದೊರೆಯುತ್ತದೆ. ವಿಟಮಿನ್ 'ಬಿ' ಜೀವಸತ್ವಗಳ ಕೊರತೆಯಿಂದ ಬೆರಿಬೆರಿ ರೋಗ ಕಾಣಿಸಿಕೊಳ್ಳುತ್ತದೆ.

**VITAMIN-C** (ವಿಟಮಿನ್ 'ಸಿ'): ಆ್ಯಸ್ಕಾರ್ಬಿಕ್ ಆ್ಯಸಿಡ್ ಎಂತಲೂ ಕರೆಯುವ ಇದನ್ನು ಕಿತ್ತಳೆ, ನಿಂಬೆಹಣ್ಣು, ದ್ರಾಕ್ಷಿಹಣ್ಣು, ಟೊಮ್ಯಾಟೋ, ನೆಲ್ಲಿಕಾಯಿ ಮುಂತಾದವುಗಳಿಂದ ಪಡೆಯಬಹುದಾಗಿದೆ. ರಕ್ತನಾಳಗಳ ಸಹಜ ಕ್ರಿಯೆ, ಜೋಡಣೆ ಅಂಗಾಂಶಗಳ ಗುಣವಾಗುವಿಕೆ (ಮಾಯುವಿಕೆ) ಹಾಗೂ

ಉತ್ಪತ್ತಿಗೆ ತುಂಬಾ ಅಗತ್ಯವಾದುದಾಗಿದೆ. ಇದರ ಕೊರತೆಯಿಂದ ಸ್ಕರ್ವಿ ರೋಗ ಕಾಣಿಸಿಕೊಳ್ಳುತ್ತದೆ.

**VITAMIN-D** (ವಿಟಮಿನ್ 'ಡಿ'): ಮೀನೆಣ್ಣೆ ಮತ್ತು ಹಾಲುಗಳಲ್ಲಿ ದೊರಕುವ ಇದು ನಮ್ಮ ದೇಹದ ಚರ್ಮದಲ್ಲೂ ಸೂರ್ಯನ ಬೆಳಕಿನಿಂದಾಗಿ ಉತ್ಪತ್ತಿಯಾಗುತ್ತದೆ. ಕ್ಯಾಲ್ಷಿಯಂನ ಚಯಾಪಚಯ ಕ್ರಿಯೆಗೆ ಅಗತ್ಯವಾಗಿರುವ ಇದು ಹಲ್ಲು ಮತ್ತು ಮೂಳೆಗಳ ಸಹಜ ರಚನೆ ಮತ್ತು ಕ್ರಿಯೆಗೆ ಅಗತ್ಯವಾಗಿದೆ. ಇದರ ಕೊರತೆಯಿಂದ ರಿಕೆಟ್ಸ್ ರೋಗ ಕಾಣಿಸಿಕೊಳ್ಳುತ್ತದೆ.

**VITAMIN-E** (ವಿಟಮಿನ್ 'ಇ'): ಮೊಳಕೆ ಕಟ್ಟಿದ ಗೋಧಿ ಮತ್ತು ಎಲ್ಲ ರೀತಿಯ ಧಾನ್ಯಗಳಿಂದ ಪಡೆಯುಬಹುದಾದ ಇದು ರಕ್ತದ ಉತ್ಪಾದನೆ, ಸಂತಾನೋತ್ಪತ್ತಿ ಸೇರಿದಂತೆ ದೇಹದ ಹಲವಾರು ಕ್ರಿಯೆಗಳಿಗೆ ಅಗತ್ಯವಾಗಿದೆ.

**VITAMIN-K** (ವಿಟಮಿನ್ 'ಕೆ'): ಸಹಜ ರೀತಿಯ ರಕ್ತ ಹೆಪ್ಪುಗಟ್ಟುವಿಕೆಗೆ ಅಗತ್ಯವಾಗಿರುವ ಇದು ಹಸಿರು ತರಕಾರಿ, ಮೀನು ಮುಂತಾದವುಗಳಲ್ಲಿ ದೊರಕುತ್ತದೆ.

**VITILIGO** (ವಿಟಿಲ್‌ಗೋ): ತೊನ್ನು, ಹಾಲ್ಚರ್ಮ, ಬಿಳಿಮಚ್ಚೆ; ಚರ್ಮ ಅಥವಾ ಕೂದಲಿನ ಯಾವುದೇ ಭಾಗದಲ್ಲಿ ಸಾಮಾನ್ಯ ಬಣ್ಣದ ಅಂಶದ ಕೊರತೆಯಿಂದಾಗಿ ಬಿಳಿಯಾಗಿರುವ ಇಲ್ಲವೆ ಬಿಳಿ ಕಲೆಗಳಾಗಿರುವ ಸ್ಥಿತಿ.

**VOMIT** (ವಾಮಿಟ್): ಕಕ್ಕು, ವಾಂತಿ ಮಾಡು, ವಾಂತಿ, ಕಾರು; ಹೊಟ್ಟೆಯಲ್ಲಿರುವ ಆಹಾರ ಪದಾರ್ಥವನ್ನು ಬಾಯಿಯ ಮೂಲಕ ವೇಗವಾಗಿ (ಶಕ್ತಿಯುತವಾಗಿ) ಹೊರ ಹಾಕುವುದು.

# W

**WART** (ವಾರ್ಟ್): ನರೂಲಿ, ನರಹುಲಿ; ಚರ್ಮದ ಮೇಲಿನ ಸಣ್ಣ ಮತ್ತು ಒಣಗಿದ ಬೆಳವಣಿಗೆ.

**WEAN** (ವೀನ್): ಮೊಲೆ ಬಿಡಿಸು; ತಾಯಿಯ ಎದೆಹಾಲಿನ ಹೊರತಾಗಿ ಬೇರೆ ಆಹಾರ ಪದಾರ್ಥಗಳನ್ನು ತಿನ್ನಲು ಮಗುವಿಗೆ ಕಲಿಸುವುದು.

**WHEEZE** (ವ್ಹೀಜ್): ಸೇದು, ಗೊರದನಿ; ಶಿಳ್ಳೆಯಂತಹ ಶಬ್ದವನ್ನು ಹೊಂದಿದ ಉಸಿರಾಟದಲ್ಲಿನ ತೊಂದರೆ (ಪ್ರಯಾಸ).

**WHOOPING COUGH** (ವೂಫಿಂಗ್ ಕಾಫ್): ನಾಯಿಕೆಮ್ಮು; ಗಾಳಿನಾಳದ ಶ್ಲೇಷ್ಮ ಪದರದ ಮೇಲೆ ಪರಿಣಾಮ ಬೀರುವ ಉಸಿರಾಟ ವ್ಯವಸ್ಥೆಯ ಸೋಂಕುಪೂರಿತ ರೋಗ. ಸಾಮಾನ್ಯವಾಗಿ ಮಕ್ಕಳಲ್ಲಿ ಕಾಣಿಸಿಕೊಳ್ಳುವ ಇದರಲ್ಲಿ ಕೆಮ್ಮು ಮತ್ತು ವಿಭಿನ್ನ ರೀತಿಯ ಶಬ್ಧವನ್ನು ಉಂಟುಮಾಡುವ ನಿಚ್ವಾಸದ ಲಕ್ಷಣಗಳಿರುತ್ತವೆ.

# X

**X-RAYS** (ಎಕ್ಸ್–ರೇಸ್): ಕ್ಷ–ಕಿರಣಗಳು; ಘನವಸ್ತುವಿನ ಮೂಲಕ ಹಾದು ಹೋಗಬಲ್ಲಂತಹ ಬಲಿಷ್ಠವಾದ ವಿದ್ಯುದ್ಕಾಂತೀಯ ಅಲೆಗಳು. ಇವು ಹೆಚ್ಚಿನ ತರಾಂಗಂತರವನ್ನು ಹೊಂದಿದ್ದು, ಪದೇ ಪದೇ ಅಥವಾ ದೀರ್ಘಾವಧಿಯ ಕಾಲದವರೆಗೆ ಇವುಗಳಿಗೆ ದೇಹವನ್ನು ತೆರೆದಿಟ್ಟರೆ ಅಂಗಾಂಶಗಳಿಗೆ ಘಾಸಿಯಾಗಬಹುದಾಗಿದೆ.

ಇವುಗಳನ್ನು ಬಳಸಿ ದೇಹದ ಮೂಳೆಗಳ ಫ್ಲೂರೆಸೆಂಟ್ ಪ್ರತಿಬಿಂಬವನ್ನು ಪಡೆಯಬಹುದಾಗಿದೆ.

# Y

**YELLOW-FEVER** (ಯಲ್ಲೋ–ಫೀವರ್): ಪಳದಿಜ್ವರ; ಸೋಂಕಿತ ಸೊಳ್ಳೆಯ ಕಚ್ಚುವಿಕೆಯಿಂದ ಹರಡಬಲ್ಲ ಮಾರಕ ವೈರಸ್ ಸೋಂಕು.

ಪಿತ್ತಾಶಯ (ಲಿವರ್) ಮತ್ತು ಮೂತ್ರಪಿಂಡಗಳ ಮೇಲೆ ಪರಿಣಾಮ ಬೀರುವ ಈ ರೋಗದಲ್ಲಿ ಜ್ವರ, ನಡುಕ, ಕಾಮಾಲೆ ಮತ್ತು ಆಂತರಿಕ ರಕ್ತಸ್ರಾವದಂತಹ ಲಕ್ಷಣಗಳಿರುತ್ತವೆ.

# Z

**ZOONOSIS** (ಝೂನೋಸಿಸ್): ಪ್ರಾಣಿಜನಿತ ಬೇನೆ; ಮಾನವನಿಗೆ ಹರಡಬಲ್ಲಂತಹ, ಪ್ರಾಣಿಗಳಲ್ಲಿರುವ ಯಾವುದೇ ರೀತಿಯ ರೋಗ.

**ZYGOTE :** ಅಂಡಾಣು–ವೀರ್ಯಾಣು ಸಂಯೋಗವಾಗಿ ಉಂಟಾಗುವ ಜೀವಕಣ–ಯುಗ್ಮ

# ಲೈಂಗಿಕ ವಿಜ್ಞಾನ

## A

**Abortion** (ಅಬಾರ್ಶನ್): ಗರ್ಭಪಾತ; ಮೈಯಿಳಿತ ಗರ್ಭಕೋಶದಲ್ಲಿ ಬೆಳೆಯುತ್ತಿರುವ, ಹೊರಬಿದ್ದರೆ ಬದುಕುಳಿಯಲಾರದಷ್ಟು ಎಳೆಯದಾಗಿರು-ವಾಗಲೇ ಹೆರಿಗೆಯಾಗಿ ಹೊರಬಿದ್ದು ಬಸಿರು ನಾಶವಾಗುವಿಕೆ.

**Adoption** (ಅಡಾಪ್ಷನ್): ದತ್ತು ಸ್ವೀಕಾರ, ಯಾವುದೇ ಮಗುವನ್ನು, ಮಕ್ಕಳಿಲ್ಲದ ದಂಪತಿಗಳು ಸಾಕಿಕೊಂಡು ಪೋಷಿಸುವಿಕೆ

**Afterglow** (ಆಫ್ಟರ್ ಗ್ಲೋ) ಭಾವಪ್ರಾಪ್ತಿ ಹೊಂದಿದ ತತ್‌ಕ್ಷಣವೇ ಮುಖದಲ್ಲಿ ಕಾಣುವ ರಿಲಾಕ್ಸೇಷನ್, ಮುಖದಲ್ಲಿ ಸಂತಸ.

**After - play** (ಆಫ್ಟರ್-ಪ್ಲೇ): ಲೈಂಗಿಕ ಸಂಭೋಗ ಮುಗಿದ ನಂತರ ದಂಪತಿಗಳು ನಡೆಸುವ ಪ್ರೇಮ ಚಟುವಟಿಕೆ. ಪ್ರೇಮಸಲ್ಲಾಪ.

**Aggression** (ಅಗ್ರೆಶನ್): ಆಕ್ರಮಣ, ಅತಿಕ್ರಮಣ ಜಗಳ ಹೂಡುವಿಕೆ, ಮನೋವೈಜ್ಞಾನಿಕವಾಗಿ ಈ ಪದ ನಮ್ಮ ಆಕ್ರಮಣ ಪ್ರವೃತ್ತಿಯನ್ನು ತೋರಿಸುತ್ತದೆ. ಈ ಪ್ರವೃತ್ತಿ ಇಲ್ಲದಿದ್ದರೆ ನಮ್ಮನ್ನು ನಾವು ರಕ್ಷಿಸಿಕೊಳ್ಳಲಾಗು-ವುದಿಲ್ಲ. ಇನ್ನೊಬ್ಬರ ಮೇಲೆ ಅತಿಕ್ರಮಣ ಮಾಡಲಾಗುವುದಿಲ್ಲ. ಸಾಮಾಜಿಕ ಪ್ರಗತಿಯಿಂದ ಆಕ್ರಮಣ ಮನೋಭಾವನೆಯನ್ನು ನಿಯಂತ್ರಿಸಿಕೊಂಡು ಸೃಜನಾತ್ಮಕವಾಗಿ ಇಂದು ಅಭಿವ್ಯಕ್ತಿಸುತ್ತಿದ್ದೇವೆ. ಆದರೆ, ಲೈಂಗಿಕ ಪ್ರವೃತ್ತಿಯಲ್ಲಿ ಆಕ್ರಮಣ ಭಾವನೆ ಉಂಟಾದರೆ ಅಪಾಯಕಾರಿ.

**Ambivalence** (ಅಂಬಿವಲೆನ್ಸ್): ಸಂದಿಗ್ಧ, ಉಭಯ ಪಕ್ಷಪಾತಿ, ನಮ್ಮಲ್ಲಿ ನಾವು ಒಂದೇ ವಸ್ತುವಿನ ಬಗ್ಗೆ ವಿರೋಧ ಅಥವಾ ದ್ವಂದ್ವ ಮನೋಭಾವನೆ ತಾಳಿರುವುದು. ಈ ರೀತಿಯಾದ ಅನುಭವವನ್ನು ಆಗಿಂದಾಗ್ಗೆ ಲೈಂಗಿಕ ಜೀವನದಲ್ಲಿ ಸ್ತ್ರೀ-ಪುರುಷರು ಅನುಭವಿಸುತ್ತಾರೆ.

**Amoral** (ಎಮಾರಲ್): ಅನೀತಿ, ನೀತಿಗೆಟ್ಟ, ನೀತಿಗೆ ಸಂಬಂಧಪಡದ ವ್ಯಕ್ತಿಯಲ್ಲಿ ನೈತಿಕ ಪ್ರಜ್ಞೆಯ ಕೊರತೆ.

**Anal intercourse** (ಏನಲ್ ಇಂಟರ್ ಕೋರ್ಸ್) : ಗುದ ಲೈಂಗಿಕ ಸಂಭೋಗ. ಈ ಕ್ರಿಯೆ ಇಬ್ಬರು ಪುರುಷರ ನಡುವೆ ಅಥವಾ ಸ್ತ್ರೀ ಪುರುಷರ ನಡುವೆ ನಡೆಯುತ್ತದೆ. ಈ ಲೈಂಗಿಕ ಸಂಭೋಗದಲ್ಲಿ ಶಿಶ್ನ (ಪಿನಿಸ್) ವನ್ನು ಯೋನಿಯಲ್ಲಿ ಸೇರಿಸದೆ, ಗುದ (ಏನಸ್) ದ್ವಾರದಲ್ಲಿ ಸೇರಿಸಲಾಗುತ್ತದೆ. ಇದು ಅಸಹಜ. ಮಾಡದಿರುವುದೇ ಕ್ಷೇಮ.

**Androgen** (ಅಂಡ್ರೋಜೆನ್) : ಗಂಡುಜನಕ, ಸ್ತ್ರೀ, ಪುರುಷರಿಬ್ಬರಲ್ಲೂ ಲೈಂಗಿಕ ಚೇತರಿಕೆ ಮೂಡಿಸುವ ಹಾರ್ಮೋನ್. ಅಲ್ಲದೆ, ಪುರುಷ ಗುಣಗಳು, ಚರ್ಯೆ ಮೂಡಬೇಕಾದರೆ ಮತ್ತು ವೀರ್ಯಾಣುಗಳ ಉತ್ಪತ್ತಿಗೆ ಕಾರಣವಾದ ಹಾರ್ಮೋನ್.

**Anus** (ಏನಸ್) : ಗುದದ್ವಾರ.

**Artificial Insemination** (ಆರ್ಟಿಫಿಶಿಯಲ್ ಇನ್‌ಸೆಮಿನೇಷನ್): ಕೃತಕ ಗರ್ಭಧಾರಣೆ: ಕೃತಕ ಬಸಿರ್ದುಂಬಿಕೆ. ಅಂಡಾಣು ಫಲವಂತಿಕೆ (ಸ್ತ್ರೀಯ ಸಂತಾನೋತ್ಪತ್ತಿಯ ಜೀವಕೋಶ) ಲೈಂಗಿಕ ಸಂಭೋಗದ ಮೂಲಕ ನಡೆಯದೆ ಪುರುಷನ ವೀರ್ಯಾಣುವನ್ನು ಸಿರೆಂಜ್ ಮೂಲಕ ಸ್ತ್ರೀಯ ಯೋನಿಗೆ ಸೇರಿಸಲ್ಪಡುವ ವಿಧಾನ. ಈ ವಿಧಾನಕ್ಕೆ ಗಂಡನ ಅಥವಾ ಬೇರೊಬ್ಬ ಗಂಡಸಿನ ವೀರ್ಯವನ್ನು ಬಳಸಲ್ಪಡುತ್ತದೆ. ಈ ವಿಧಾನವನ್ನು ಗಂಡ ಶಿಶ್ನದ ಉದ್ರೇಕವನ್ನು ಇರಿಸಿಕೊಳ್ಳಲು ಅಥವಾ ಇತರೆ ಕಾರಣಗಳಿಂದ ಅಥವಾ ಗಂಡನ ವೀರ್‍ಯಾಣುಗಳು ಅಶಕ್ತವಾಗಿದ್ದರೆ ಬೇರೊಬ್ಬ ಪುರುಷನಿಂದ ವೀರ್ಯಾಣುಗಳನ್ನು ದಾನ ಪಡೆದು ಉಪಯೋಗಿಸಲ್ಪಡುತ್ತದೆ. ಅವಿವಾಹಿತ ಸ್ತ್ರೀ ಲೈಂಗಿಕ ಸಂಭೋಗ ನಡೆಸದೆಯೇ ಮಗುವನ್ನು ಬಯಸಿದರೆ, ಈ ಕೃತಕ ವಿಧಾನದಿಂದ ಆಕೆಯನ್ನು ಗರ್ಭವತಿ ಆಗುವಂತೆ ಮಾಡಲಾಗುವುದು.

**Aphrodisiac** (ಅಪ್ರೋಡಿಸಿಯಾಕ್) ಕಾಮೋತ್ತೇಜಕ, ಕಾಮವನ್ನು ಕೆರಳಿಸುವ ವಸ್ತು. ವಾಸ್ತವದಲ್ಲಿ ಇಂತಹ ವಸ್ತು ಲಭ್ಯವಿಲ್ಲ.

**Autoeroticism** (ಆಟೋಎರೋಟಿಸಮ್): ಹಸ್ತಮೈಥುನ, ಮುಷ್ಟಿಮೈಥುನ.

(**Azoospermia**) (ಏಜೋಸ್ಪರೀಯಾ) : ವೀರ್ಯದಲ್ಲಿ ವೀರ್ಯಾಣುಗಳು ಇಲ್ಲದಿರುವುದು (ಇದು ವೃಷಣಗಳಲ್ಲಿ ವೀರ್ಯಾಣು ಉತ್ಪತ್ತಿಯಾಗದೇ ಅಥವಾ ಉತ್ಪತ್ತಿಯಾದ ವೀರ್ಯಾಣು ಹೊರ ಬರಲಾಗದೇ ಈ ಸ್ಥಿತಿ ಉಂಟಾಗುತ್ತದೆ).

# B

**B-Girls** (ಬಿ–ಗರ್ಲ್ಸ್) : ಬಾರ್‌ಗಳಲ್ಲಿ ಗಿರಾಕಿಗಳನ್ನು ಭೇಟಿಯಾಗುವ ವೇಶ್ಯೆಯರು.

**Balls** (ಬಾಲ್ಸ್–ಟೆಸ್ಟೀಕಲ್ಸ್) ವೃಷಣಗಳು.

**Bartholin's glands** (ಬಾರ್ಥೋಲಿನ್ಸ್ ಗ್ಲಾಂಡ್ಸ್) : ಬಾರ್ಥೋಲಿನ್ಸ್‌ನ ಗ್ರಂಥಿಗಳು, ಗೊಲ್ಲಿಯೋನಿ ಗ್ರಂಥಿಗಳು, ಯೋನಿಯ ಪ್ರವೇಶ ದ್ವಾರದಲ್ಲಿರುವ ಗ್ರಂಥಿಗಳು. ಸ್ತ್ರೀಯಲ್ಲಿ ಕಾಮೋದ್ರೇಕದ ಸಮಯದಲ್ಲಿ ಸ್ರಾವವನ್ನು (ಲೂಬ್ರಿಕೇಟಿಂಗ್ ಫ್ಲೂಯಿಡ್) ಉತ್ಪತ್ತಿ ಮಾಡುತ್ತದೆ. ಗ್ರಂಥಿಗಳು ಯೋನಿಯ ಒಳಭಾಗದಲ್ಲಿದ್ದು ಪ್ರತಿಗ್ರಂಥಿಯೂ ಸಣ್ಣಗೆ ತತ್ತಿಯ ಆಕಾರದಲ್ಲಿದ್ದು ಯೋನಿದ್ವಾರದ ಎರಡೂ ಬದಿಗಳಲ್ಲಿ, ಸಣ್ಣನಳಿಕೆಯ ಮೂಲಕ ತೆಳ್ಳನೆಯ ಲೋಳೆಯಂಥ ದ್ರವವನ್ನು ಸ್ರವಿಸುವುದು ಇವುಗಳ ಮುಖ್ಯ ಕೆಲಸ.

**Beat off** (ಬೀಟ್ ಆಫ್): ಪುರುಷರಲ್ಲಿ ಹಸ್ತಮೈಥುನ..

**Bestiality** (ಬೆಸ್ಟಿಯಾಲಿಟಿ) : ಪ್ರಾಣಿಗಳ ಜೊತೆ ಲೈಂಗಿಕ ಸಂಬಂಧ, (ಪ್ರಾಣಿಗಳ ಜೊತೆ ಸಂಭೋಗಿಸುವುದು ಇದು ಅಪರಾಧ; ಅಪಾಯ.)

**Birth Control** (ಬರ್ತ್ ಕಂಟ್ರೋಲ್) : ಜನನ ನಿಯಂತ್ರಣ, ರಾಸಾಯನಿಕ, ತಾಂತ್ರಿಕ ಅಥವಾ ಇತರೆ ವಿಧಾನದಿಂದ ವೀರ್ಯಾಣು, ಅಂಡಾಣುವನ್ನು ಸೇರಿ ಫಲವಂತಿಕೆ ನಡೆಯದಂತೆ ತಡೆಗಟ್ಟುವುದು, ಬಸರಿನ ತಡೆ.

**Birthing chair** (ಬರ್ತಿಂಗ್ ಛೇರ್) : ಪ್ರಸವವನ್ನು ನಿರ್ವಹಿಸಲು ಪ್ರತ್ಯೇಕವಾಗಿ ತಯಾರು ಮಾಡಿದ ಕುರ್ಚಿ.

**Bisexual** (ಬೈಸೆಕ್ಷುಯಲ್) : ಉಭಯಲಿಂಗಿ, ಪ್ರತಿಯೊಬ್ಬ ಪುರುಷ, ಸ್ತ್ರೀಯ ಅಂಶವನ್ನು ಸ್ವಲ್ಪಮಟ್ಟಿಗಾದರೂ ಹೊಂದಿರುತ್ತಾನೆ. ಪ್ರತಿ ಸ್ತ್ರೀ, ಪುರುಷನ ಅಂಶವನ್ನು ಹೊಂದಿರುತ್ತಾಳೆ. ನಾವು ಪ್ರಜ್ಞಾಪೂರ್ವಕವಾಗಿ ಯಾವಾಗಲೂ ಗುರ್ತಿಸಲಾಗುವುದಿಲ್ಲ. ಸ್ತ್ರೀಯಲ್ಲಿ ಪುರುಷ ಚರ್ಯೆ ಅತಿಯಾದರೆ, ಪುರುಷನಲ್ಲಿ ಸ್ತ್ರೀಯ ಚರ್ಯೆ ಅತಿಯಾದರೆ ಪರಸ್ಪರ ಲೈಂಗಿಕ ಸಂಭೋಗ ನಡೆಸಲು ಅನರ್ಹತೆ ಉಂಟಾಗಬಹುದು.

ಒಬ್ಬ ಪುರುಷ, ಪುರುಷ ಮತ್ತು ಸ್ತ್ರೀಯೊಂದಿಗೆ ಒಬ್ಬ ಸ್ತ್ರೀ, ಪುರುಷ ಸ್ತ್ರೀಯೊಂದಿಗೆ ಲೈಂಗಿಕ ಸಂಪರ್ಕ ಮಾಡುವುದಕ್ಕೂ ಈ ಪದವನ್ನು ಉಪಯೋಗಿಸಲಾಗುತ್ತದೆ.

**Body of the Uterus** (ಬಾಡಿ ಆಫ್ ದಿ ಯೂಟೆರಸ್) : ಗರ್ಭಕೋಶದ ಕಾಯ, ಕೆಳಗಿರುವ ಚಿಕ್ಕಗರ್ಭಗೊರಳು ಬಿಟ್ಟು ಉಳಿದ ಗರ್ಭಕೋಶ ಭಾಗ.

**Bladder** (ಬ್ಲಾಡರ್) : ಮೂತ್ರಕೋಶ, ರಕ್ತದಿಂದ ದೇಹದೊಳಗೆ ಶೋಧಿಸಲ್ಪಟ್ಟು ಸಂಚಯಿಸಿರುವ ಹೊರಬರುವ ತನಕ ಅದನ್ನು ಶೇಖರಿಸಿಡುವ ಚೀಲವೇ ಮೂತ್ರಕೋಶ.

**Blue Films** (ಬ್ಲೂ ಫಿಲಂಸ್) : ಬ್ಲೂಫಿಲಂಸ್, ನೀಲಿ ಚಿತ್ರಗಳು, ಯಥಾವತ್ತಾಗಿ ಲೈಂಗಿಕ ಕ್ರೀಡೆಗಳನ್ನು ಚಿತ್ರಿಸಿರುವ ಚಲನಚಿತ್ರಗಳು, ವಿಶೇಷವಾಗಿ ವಿಕೃತಕಾಮ ಹಾಗೂ ಕಾಮೋದ್ರೇಕದ ಚಿತ್ರಗಳಿಂದ ಕೂಡಿರುತ್ತವೆ.

**Brests** (ಬ್ರೆಸ್ಟ್ಸ್) : ಮೊಲೆಗಳು, ಸ್ತನಗಳು, ಪ್ರಕೃತಿದೇವಿ ಮಕ್ಕಳಿಗೆ ಹಾಲುಣಿಸಲೆಂದು ತಾಯಂದಿರಿಗೆ ಮೊಲೆಗಳನ್ನು ಕೊಟ್ಟಿದ್ದಾಳೆ. ಸ್ತ್ರೀಯರ ಮೊಲೆಗಳು ಸ್ತ್ರೀತ್ವದ ಲಾಂಛನ. ಅಲ್ಲದೇ, ಹೆಣ್ತನದ ಚಿಹ್ನೆ. ಇದರ ಮೂಲ ಚರ್ಮದ ಗ್ರಂಥಿಗಳು ವಿಶೇಷವಾಗಿ ಬೆವರು ಗ್ರಂಥಿಗಳು – ಇವು ಅಭಿವೃದ್ಧಿ ಹೊಂದಲು ವಿವಿಧ ರೀತಿಯ ಹೊರ್ಮೊಳೆಚರ್ಮ (ಎಕ್ಟೊ ಡರ್ಮಲ್)ದ ಮೇಲ್ಪರೆ (ಎಪಿಥೀಲಿಯಂ) ಕಾರಣವಾಗಿವೆ. ಮೊಲೆಗಳನ್ನು ಪುರುಷರಲ್ಲೂ ಕಾಣಬಹುದು. ಇವು ಚಪ್ಪಟೆಯಾಗಿರುತ್ತವೆ. ಗುರ್ತು ಹಚ್ಚಲಾಗದ, ಶಾಶ್ವತವಾದ ನಿಶ್ಚಲ ಸ್ಥಿತಿಯಲ್ಲಿರುತ್ತವೆ. ಸ್ತ್ರೀಯರಲ್ಲಿ ನೆರೆತಾಗಿನಿಂದ ಸಾವಿನ ತನಕ ಮೊಲೆಗಳು ಕ್ರಿಯಾತ್ಮಕವಾಗಿ ಪಾತ್ರವಹಿಸಿ ಶರೀರದಲ್ಲಿ ಭೌತಿಕ ಬದಲಾವಣೆ, ಮೊಲೆಗಳ ಊತಕ (ಟಿಶ್ಯೂ) ಗಳಲ್ಲಿ, ಮಾಸಿಕ ಚಕ್ರದಲ್ಲಿ, ಗರ್ಭಿಣಿ ಆಗಿದ್ದಾಗ ಮತ್ತು ಹಾಲುಣಿಸುವ ಸಂದರ್ಭದಲ್ಲಿ ಮತ್ತು ಮುಟ್ಟುತೀರ್ವೆ (ಮೆನೋಪಾಸ್) ಸಮಯದಲ್ಲಿ ಉಂಟಾಗುತ್ತದೆ. ಮೊಲೆಗಳು ಮೊತ್ತ ಮೊದಲು ಕಾಣಿಸಿಕೊಳ್ಳುವುದು ಪಿಂಡ ಅಭಿವೃದ್ಧಿಗೊಳ್ಳುತ್ತಿರುವ ಆರನೆ ವಾರದಲ್ಲಿ, ಮೊಲೆಗಳ ವಿನ್ಯಾಸ ಮತ್ತು ಅವುಗಳ ಬಿರುಸುತನ ಹೆಂಗಸೊಬ್ಬಳ ಕಾಮುಕತೆಯ ಕುರುಹಲ್ಲ. ಅಥವಾ ತನ್ನ ಕಂದನಿಗೆ ಎಷ್ಟರಮಟ್ಟಿಗೆ ಎದೆಹಾಲನ್ನು ಉಣಿಸಬಲ್ಲಳೆಂಬುದನ್ನೂ ಸೂಚಿಸುವುದಿಲ್ಲ. ಮೊಲೆಗಳ ಗಾತ್ರ ಅನುವಂಶಿಕ ಸಂಗತಿ.

**Brothel** (ಬ್ರಾತಲ್) : ವೇಶ್ಯೆಯರ ಮನೆ.

# C

**Carezza** (ಕೇರೆಜ್ಜಾ) : ದೀರ್ಘಕಾಲದ ಸಂಭೋಗ. ಸಾಮಾನ್ಯವಾಗಿ ಸ್ತ್ರೀ-ಪುರುಷರಿಬ್ಬರಲ್ಲೂ ಪರಾಕಾಷ್ಠತೆ ಮುಟ್ಟದಿರುವುದು. ಈ ವಿಧಾನದಿಂದ ಶಾರೀರಿಕ ಮತ್ತು ಆಧ್ಯಾತ್ಮಿಕ ಸಂಬಂಧ ಸಾಧ್ಯವಾಗುತ್ತದೆ ಎಂದು ಹೇಳುತ್ತಾರೆ.

**Castration** (ಕ್ಯಾಸ್ಟ್ರೇಷನ್) : ಬೀಜತೆಗೆತ, ಶಸ್ತ್ರಚಿಕಿತ್ಸೆಯ ಮೂಲಕ ಪುರುಷನ ವೃಷಣಗಳನ್ನು ತೆಗೆದುಹಾಕುವಿಕೆ.

**Celibacy** (ಸೆಲಿಬೆಸಿ) : ಅವಿವಾಹಿತ ಸ್ಥಿತಿ, ಸಾಮಾನ್ಯವಾಗಿ ಲೈಂಗಿಕ ಬ್ರಹ್ಮ ಚರ್ಯೆ ಎಂದು ಹೇಳಬಹುದು.

**Cervix** (ಸೆರ್‌ವಿಕ್ಸ್) : ಗರ್ಭಕೊರಳು, ಗರ್ಭಕೊರಳು ಯೋನಿಯ ಮೇಲ್ತುದಿಗೆ ಚಾಚಿಕೊಂಡಿರುವ ಗರ್ಭಕೋಶದ ಭಾಗ, ಹೆರಿಗೆಯಾಗುವಾಗ ಮಗುವಿನ ತಲೆ ಯೋನಿಯೊಳಗೆ ಬರಲು ಅನುಕೂಲವಾಗುವಂತೆ ನಿಧಾನವಾಗಿ ಹಿಗ್ಗುತ್ತಾ ಹೋಗುವುದು.

**Chastity** (ಚೇಸ್ಟಿಟಿ) : ಪಾತಿವ್ರತ್ಯ, ಬ್ರಹ್ಮಚರ್ಯೆ, ಮದುವೆಗೆ ಮೊದಲೇ ಲೈಂಗಿಕ ಸಂಭೋಗ ಮಾಡದಿರುವುದು. ಪಾತಿವ್ರತ್ಯದಿಂದ ಅನೇಕ ಅನುಕೂಲಗಳಿವೆ – ಮದುವೆಗೆ ಮುಂಚೆಯೇ ಮಕ್ಕಳಾಗುವುದಿಲ್ಲ. ರತಿರೋಗ ಅಥವಾ ಸಂಭೋಗ ಸಂಬಂಧಿತಮೇಹ ರೋಗಗಳು ಬರುವ ಭಯವಿಲ್ಲ.

**Cohabitation** (ಕೊಹ್ಯಾಬಿಟೇಷನ್) : ಮದುವೆಯನ್ನು ಮಾಡಿಕೊಳ್ಳದೆಯೇ ಗಂಡ-ಹೆಂಡತಿಯಾಗಿ ಒಂದೇ ಕಡೆ ವಾಸಿಸುವುದು.

**Chancroid** (ಶಾಂಕ್ರಾಯ್ಡ್) : ಲೈಂಗಿಕರೋಗ, ಅತಿಯಾಗಿ ಸೋಂಕು ಅಂಟಿಸುವ, ಸಿಫಿಲಿಸ್ ಅಲ್ಲದ ಒಂದು ಮೇಹ ರೋಗದ ಹುಣ್ಣು. ಮೆತ್ತಗಿರುವ ಈ ಹುಣ್ಣಿಗೆ ಹಿಮೋಫಿಲಸ್ ಡುಕ್ರಿಯೆ ದಂಡಾಣು ಜೀವಿ ಕಾರಣ.

**Circumcision** (ಸರ್‌ಕಂಸಿಷನ್) : ಸುತ್ತುಕರ್ತನ, ಸುನತಿ, ಹೊದಿಕೆಯಂತಿರುವ ಮಾಣಿ (ಶಿಶ್ನ)ಯ ಮುಂಗೊನೆಯ ಚರ್ಮ ಮಂದೊಗಲನ್ನು ಶಸ್ತ್ರ ಚಿಕಿತ್ಸೆಯಿಂದ ತೆಗೆಯುವುದು.

**Climax** (ಕ್ಲೈಮ್ಯಾಕ್ಸ್) : ಪರಮಾವಧಿ, ಲೈಂಗಿಕ ಪರಾಕಾಷ್ಠತೆ, ಕಾಮಾವೇಶ, ಭಾವಪ್ರಾಪ್ತಿ, ಲೈಂಗಿಕ ಸಂಭೋಗದಲ್ಲಿ ಉಂಟಾಗುವ ಪರಮೋದ್ವೇಗ.

**Clit** (ಕ್ಲೈಟ್) : ಕ್ಲೈಟೋರಿಸ್, ಭಗಾಂಕುರ, ಚಂದ್ರನಾಡಿ.

**Clitoris** (ಕ್ಲೈಟೋರಿಸ್) : ಭಗಾಂಕುರ, ಯೋನಿ ತುಟಿಯ ಮೇಲ್ಭಾಗದಲ್ಲಿದೆ. ಇದನ್ನು ಪುರುಷನ ಶಿಶ್ನಕ್ಕೆ ಹೋಲಿಸಬಹುದು. ಲೈಂಗಿಕ ಉತ್ತೇಜನದಿಂದ ಉದ್ರೇಕಗೊಳ್ಳುತ್ತದೆ. ಈ ಭಾಗವನ್ನು ಸ್ತ್ರೀ ಹಸ್ತ ಮೈಥುನ ಮಾಡಿಕೊಳ್ಳು-ವುದರಿಂದ ಅಥವಾ ಪುರುಷ ಸ್ಪರ್ಶಿಸುವುದರಿಂದ ಕಾಮೋದ್ರೇಕವಾಗುತ್ತದೆ.

**Climacteric** (ಕ್ಲೈಮಾಕ್‌ಟೆರಿಕ್) : ಋತುಬಂಧ, ಮುಟ್ಟುತೀರುವೆ, ಈ ಅವಧಿಯಲ್ಲಿ ಸ್ತ್ರೀಗೆ ಮುಟ್ಟು ನಿಂತುಹೋಗುತ್ತದೆ. ಅನಂತರ, ಸ್ತ್ರೀಮಕ್ಕಳನ್ನು ಹೆರುವುದಿಲ್ಲ. ಬದುಕಿನ ಬದಲಾವಣೆ ಎಂತಲೂ ಕರೆಯುತ್ತಾರೆ. ಈ ಅವಧಿಯಲ್ಲಿ ಕೆಲವೊಂದು ಮಾನಸಿಕ ಬದಲಾವಣೆಗಳು ಉಂಟಾಗುತ್ತವೆ. ಸಾಮಾನ್ಯವಾಗಿ 40 ಅಥವಾ 50 ವರ್ಷದ ಅಂತರದಲ್ಲಿ ಮುಟ್ಟು ತೀರುವೆ ಉಂಟಾಗುತ್ತದೆ. ಮುಟ್ಟು ನಿಂತ ನಂತರ ಸ್ತ್ರೀಯರಲ್ಲಿ ಲೈಂಗಿಕ ಆಸಕ್ತಿ ಕಡಿಮೆ ಆಗುವುದಿಲ್ಲ.

**Clitorism** (ಕ್ಲೈಟೋರಿಸಂ) : ಭಗಾಂಕುರ ಅತಿ ಹೆಚ್ಚಾಗಿ ಅಭಿವೃದ್ಧಿಗೊಂಡಿರು ವುದು, ಅಥವಾ ಭಗಾಂಕುರ ಹೆಚ್ಚುಕಾಲ ಉದ್ರೇಕಗೊಂಡಿರುವುದು.

**Cock** (ಕಾಕ್) : ಪೆನಿಸ್, ಶಿಶ್ನ.

**Coitus** (ಕಾಯ್ಟಸ್) : ಲೈಂಗಿಕ ಸಂಭೋಗ. ಉದ್ರೇಕಿತ ಶಿಶ್ನವನ್ನು ಯೋನಿ-ಯೊಳಗಡೆ ಸೇರಿಸಿ ಚಾಲನೆ ಮಾಡುವುದರಿಂದ ವೀರ್ಯಸ್ಖಲನಗೊಂಡು ಲೈಂಗಿಕ ಪರಾಕಾಷ್ಠತೆ (ಆರ್ಗ್ಯಾಸಮ್) ಉಂಟಾಗುತ್ತದೆ.

**Coitus Interuptus** (ಕಾಯಿಟಸ್ ಇಂಟರಪ್ಟಸ್) : ಸಂಭೋಗದಲ್ಲಿ ಶಿಶ್ನವನ್ನು ಹಿಂದೆಗೆಯುವುದು. ಅಂದರೆ ವೀರ್ಯಸ್ಖಲನ ಆಗುವ ಮೊದಲೇ ಯೋನಿಯಿಂದ ಶಿಶ್ನವನ್ನು ಹಿಂದೆಗೆಯುವುದು. ಇದರಿಂದ ವೀರ್ಯ ಯೋನಿಯಲ್ಲಿ ಚೆಲ್ಲುವುದಿಲ್ಲ.

**Come** (ಕಮ್) : ಬಾ, ಸಾಮಾನ್ಯವಾಗಿ ಪುರುಷನಲ್ಲಿ ಉಂಟಾಗುವ ವೀರ್ಯ ವಿಸರ್ಜನೆ ಮತ್ತು ಸ್ತ್ರೀಯಲ್ಲಿ ಉಂಟಾಗುವ ಲೈಂಗಿಕ ಪರಾಕಾಷ್ಠತೆ (ಆರ್ಗ್ಯಾಸಮ್) ಯನ್ನು ಸೂಚಿಸುತ್ತದೆ.

**Crown** (ಕ್ರೌನ್) : ಶಿಶ್ನದ ಮುಂಗೊನೆ, ಶಿಶ್ನದ ಮುಂಭಾಗ.

**Curettage** (ಕ್ಯೂರೆಟೇಜ್) : ಹೆರೆತ, ವೈದ್ಯಕೀಯ ಕಾರಣಕ್ಕಾಗಿ ಅಥವಾ ಆರಂಭದ ಗರ್ಭವನ್ನು ತೆಗೆಯುವುದಕ್ಕಾಗಿ ಗರ್ಭಕೋಶದ ಒಳಪದರವನ್ನು ಹೆರೆಯುವುದು.

**Cystitis** (ಸಿಸ್ಟೈಟಿಸ್) : ಕಂಕೋಶುರಿತ ಎಂದರೆ ಮೂತ್ರಕೋಶದ ಸೋಂಕಿನಿಂದೇ-ಳುವ ಉರಿತ ಎಂದರ್ಥ. ಈ ಸೋಂಕು ಸ್ತ್ರೀ-ಪುರುಷರಿಬ್ಬರಿಗೂ ಉಂಟಾಗಬಹುದು. ನಿಜವಾದ ಕಂಕೋಶುರಿತ ಅಥವಾ ಸಿಸ್ಟೈಟಿಸ್‌ನಲ್ಲಿ ನಾಲ್ಕು ರೀತಿಯ ಚಿಹ್ನೆಗಳಿರುತ್ತವೆ. ಅವುಗಳೆಂದರೆ 1. ಮೂತ್ರ ವಿಸರ್ಜಿಸುವಾಗ ನೋವು. 2. ಪದೇ ಪದೇ ಮೂತ್ರ ವಿಸರ್ಜಿಸುವುದು. 3. ಕೆಲವೊಮ್ಮೆ ಮೂತ್ರದಲ್ಲಿ ರಕ್ತಕಾಣಿಸಿಕೊಳ್ಳಬಹುದು. 4. ಜ್ವರ, ಚಳಿ, ಕೆಳಬೆನ್ನಿನಲ್ಲಿ ನೋವು ಇರಬಹುದು.

**Conception** (ಕಾನ್‌ಸೆಪ್‌ಷನ್) : ಬಸಿರು, ಗರ್ಭಧಾರಣೆ, ಸ್ತ್ರೀಯ ಅಂಡಾಣು ಫಲವಂತಿಕೆ ಪಡೆಯುವುದು.

ದಂಪತಿಗಳು ಲೈಂಗಿಕ ಸಂಭೋಗಕ್ರಿಯೆ ನಡೆಸುತ್ತಿದ್ದಾಗ ಗಂಡಸು ಸುಖಾನುಭವ ಅಥವಾ ಆರ್ಗ್ಯಾಸಮ್‌ನ್ನು ಪಡೆದಾಗ ಸುಮಾರು ಒಂದು ಸಣ್ಣಚಮಚದಷ್ಟುದ್ರವವು ಆತನ ಶಿಶ್ನದಿಂದ ಯೋನಿಯೊಳಕ್ಕೆ ಚಿಮ್ಮುತ್ತದೆ, ಇದೇ ವೀರ್ಯ. ಇದರಲ್ಲಿ ಸುಮಾರು 10 ರಿಂದ 30 ಕೋಟಿ ವೀರ್ಯಾಣುಗಳಿರುತ್ತವೆ. ವೀರ್ಯಾಣುಗಳು ಯೋನಿಯ ಮುಖಾಂತರ ಹೊರಟು ಗರ್ಭಗೊರಳಿನ ಮೂಲಕ ಗರ್ಭಕೋಶವನ್ನು ಸೇರಿ ಅಲ್ಲಿಂದ ಮುಂದೆ ಗರ್ಭನಾಳವನ್ನು ಸೇರುತ್ತವೆ. ಯಾವುದಾದರೂ ಡಿಂಬನಳಿಕೆಯಲ್ಲಿ (ಫೆಲೋಪನ್ ಟ್ಯೂಬ್) ಒಂದು ಪಕ್ವ ಅಂಡಾಣು ಇತ್ತೆಂದರೆ ಅಷ್ಟು ವೀರ್ಯಾಣುಗಳಲ್ಲಿ ಯಾವುದಾದರೂ ಒಂದು ಮಾತ್ರ ಅಂಡಾಣುವಿನ ಜೊತೆಗೆ ಸೇರುತ್ತದೆ. ಇದನ್ನು ಗರ್ಭಧಾರಣೆ ಅಥವಾ ಫಲವಂತಿಕೆ ಎಂದು ಕರೆಯುತ್ತೇವೆ. ಅಥವಾ ಹೆಂಗಸು ಗರ್ಭವತಿಯಾಗಿದ್ದಾಳೆ ಎನ್ನುತ್ತೇವೆ. ಋತುಚಕ್ರದ 12 ರಿಂದ 18ನೇ ದಿನದ ಅವಧಿಯಲ್ಲಿ ಗರ್ಭಧಾರಣೆಯಾಗು ವುದು. ಗರ್ಭದಾರಣೆ ಬೇಡವೆಂದರೆ ಈ ಅವಧಿಯಲ್ಲಿ ಸಂಭೋಗ ಮಾಡಬಾರದು.

**Condom** (ಕಾಂಡೋಮ್) : ನಿರೋಧ್: ಯೋನಿಯೊಳಗಡೆ ಸೇರಿಸುವ ಮುನ್ನ ಶಿಶ್ನಕ್ಕೆ ತೊಡಿಸುವ ತೆಳು ರಬ್ಬರಿನ ಚೀಲ. ಇದನ್ನು ಧರಿಸುವ ಉದ್ದೇಶ ಗರ್ಭಧಾರಣೆಯನ್ನು ತಡೆಗಟ್ಟುವುದು.

**Cowpers Glands** (ಕೂಪರ್ಸ್ ಗ್ಲಾಂಡ್ಸ್) : ಕೂಪರನ ಗ್ರಂಥಿಗಳು, ಪುರುಷನ ಮೂತ್ರನಾಳದ ಪಕ್ಕದಲ್ಲಿವೆ. ವೀರ್ಯಸ್ಖಲನದ ಮೊದಲು ದ್ರವವನ್ನು ಸ್ರವಿಸುತ್ತವೆ.

**Cunnilingus** (ಕನ್ನಿಲಿಂಗಸ್) : ಗೊಲ್ಲಿನೆಕ್ಕುವೆ, ಗಂಡಸು ತನ್ನ ಬಾಯಿಂದ ಸ್ತ್ರೀಯ ಜನನೇಂದ್ರಿಯಗಳನ್ನುನೆಕ್ಕುವುದು.

# D

**Defloration** (ಡಿಫ್ಲೋರೇಶನ್) : ಕನ್ಯೆತನ ಕಳೆತ, ಯೋನಿಪೊರೆಯ ಕನ್ಯಾಪೊರೆಯ ಹರಿತ, ಪುರುಷ ಲೈಂಗಿಕ ಸಂಭೋಗಕ್ಕಾಗಿ ಶಿಶ್ನವನ್ನು ಹೆಣ್ಣಿನ ಯೋನಿಯೊಳಕ್ಕೆ ಸೇರಿಸಲು ಹೋದಾಗ ಯೋನಿಯಲ್ಲಿ ಅಡ್ಡನಾಗಿರುವ ತೆಳುಪೊರೆ ಹರಿಯಬಹುದು ಅಥವಾ ವಿವಾಹಕ್ಕೆ ಮೊದಲೇ ಹೆಣ್ಣು ಆಟವಾಡುವಾಗ, ಸೈಕಲ್ ತುಳಿಯುವಾಗ ಹರಿದಿರಬಹುದು.

**Derriere** (ಡೆರ‍್ರೈರೆ) : ದೇಶಿಯ ಇಂಗ್ಲಿಷಿನಲ್ಲಿ ಕುಂಡಿಗಳಿಗಿರುವ ಹೆಸರು.

**Detumescense** (ಡಿಟುಮೆಸೆನ್ಸ್) : ಊದುಕುಂದು, ಲೈಂಗಿಕ ಪರಾಕಾಷ್ಠತೆ ಅಥವಾ ಆರ್ಗ್ಯಾಸಮ್ ನಂತರ ಲೈಂಗಿಕಾಂಗಗಳು ವಿಶ್ರಾಂತಿ ಹೊಂದುವ ಸ್ಥಿತಿ.

**Dilation** (ಡೈಲೇಷನ್) : ಹಿಗ್ಗಲಿಕೆ, ವಿಸ್ತರಿಸುವ ಕ್ರಿಯೆ.

**Discharge** (ಡಿಸ್‌ಚಾರ್ಜ್) : ಸುರಿತ, ಗರ್ಭಕೋಶದ ಬಾಯಿಯ ಮೂಲಕ ಉಂಟಾಗುವ ಸ್ರಾವ. ಈ ರೀತಿಯ ಸ್ರಾವ ಮುಟ್ಟಿನ ಅವಧಿಯಲ್ಲೂ ಉಂಟಾಗುವುದು ಅನಾರೋಗ್ಯಕರ ಚಿಹ್ನೆಯೇನಲ್ಲ. ಅಂದರೆ, ಸೋಂಕು ಉಂಟಾದರೆ ಈ ಸ್ರಾವ ಹಳದಿ ಬಣ್ಣದಾಗಿರುತ್ತದೆ. ಇಂಥ ಸಂದರ್ಭದಲ್ಲಿ ಮೆಡಿಕಲ್ ಡಾಕ್ಟರ್‌ರನ್ನು ಕಾಣುವುದು ಅಗತ್ಯ.

**Dildo** (ಡಿಲ್‌ಡೋ) ನಕಲಿ ಶಿಶ್ನ, ಕೃತ್ರಿಮ ಪುರುಷಾಂಗ ಸಾಧನ.

**Doodad** (ಡೂಡ್ಯಾಡ್) : ಶಿಶ್ನಕ್ಕೆ ಇಂಗ್ಲೀಷಿನ ಜನ ಸಾಮಾನ್ಯರು ಕರೆಯುವ ಹೆಸರು

**Dysmenorrhoea** (ಡಿಸ್‌ಮೆನೋರಿಯಾ): ನೋವು ಮುಟ್ಟು; ಮುಟ್ಟಿನ ನೋವು, ಸಾಮಾನ್ಯವಾಗಿ ಮುಟ್ಟಿಗೆ ಮೊದಲು, ಮುಟ್ಟಿನ ಸಂದರ್ಭದಲ್ಲಿ ಮತ್ತು ಅನಂತರ ಉಂಟಾಗುವ ನೋವು.

**Dyspareunia** (ಡಿಸ್‌ಪ್ಯಾರೊನಿಯಾ): ನೋವು ಕೂಟ, ಲೈಂಗಿಕ ಸಂಭೋಗ ಮಾಡುವಾಗ ಸ್ತ್ರೀಗೆ ನೋವಾಗುವುದು.

**D. and C. operation** (ಡಿ. ಅಂಡ್.ಸಿ. ಆಪರೇಷನ್): ಡಿ. ಅಂಡ್ ಸಿ. ಶಸ್ತ್ರಕ್ರಿಯೆ, ಗರ್ಭಗೊರಳನ್ನು ನಿಧಾನವಾಗಿ ಹಿಗ್ಗಲಿಸಿ, ಒಳಗಿನ ಪದರ ಅಥವಾ ಭ್ರೂಣವನ್ನು ಹೆರೆದು ತೆಗೆದು ಹಾಕುವ ಶಸ್ತ್ರಕ್ರಿಯೆ.

# E

**Early ejaculation** (ಅರ್ಲಿ ಇಜಾಕ್ಯುಲೇಷನ್): ತ್ವರಿತ ಸ್ಖಲನ, ಮತ್ತೊಂದು ಹೆಸರು ಶೀಘ್ರ ಸ್ಖಲನ.

**Ecdysiaism** (ಎಕೆಡಿಜಿಯಾಜಮ್) :ಎಲ್ಲರ ಮುಂದೆಯು ಉಡುಪನ್ನು ಬದಲಾಯಿಸುವುದು, ತನ್ನ ಮುಂದಿರುವವರಲ್ಲಿ ಕಾಮಾಸಕ್ತಿಯನ್ನು ಮೂಡಿಸಬೇಕೆಂಬ ಬಲವಾದ ವಾಂಛೆ, ಎಕ್ಸಿಬಿಷನಿಜಂನಲ್ಲಿ ಒಂದು ವಿಧ.

**Ecouteurism** (ಎಕೌಟ್ಯೂರಿಜಮ್): ಅಸಾಧಾರಣ ಕಾಮ ಪ್ರವೃತ್ತಿಯ ಒಂದು ವಿಧ. ರತಿಕೇಳಿಯಲ್ಲಿ ತೊಡಗಿರುವ ದಂಪತಿಗಳು ಮಾಡುವ ಶಬ್ದಗಳನ್ನು ಆಲಿಸುವ ಮೂಲಕ, ರತಿ, ಶೃಂಗಾರ ವರ್ಣನೆಗಳನ್ನು ಕೇಳುವುದರ ಮೂಲಕ ಮಾತ್ರವೇ ಪ್ರಧಾನವಾಗಿ ಕಾಮೋದ್ರೇಕವನ್ನು ಹೊಂದುವ ಸ್ವಭಾವ.

**Ecstasy** (ಎಕ್‌ಸ್ಟಸಿ) : ಲೈಂಗಿಕ ಆನಂದದ ಪರಾಕಾಷ್ಠೆ.

**Ectopic testis** (ಎಕ್ಟೋಪಿಕ್‌ಟೆಸ್ಟೀಸ್) ಇರಬೇಕಾದ ಜಾಗದಲ್ಲಿ ಇರದೆ, ಶರೀರದ ಇತರ ಭಾಗದಲ್ಲಿ ವೃಷಣ ಇರುವುದು.

**Effeminate** (ಎಫೆಮಿನೇಟ್) : ಸ್ತ್ರೀಯ ನಡಿಗೆ, ವರ್ತನೆ – ವಸ್ತ್ರಧಾರಣೆಯನ್ನು ಅನುಸರಿಸುವ ವಿಧ. (ವರ್ತಿಸುವುದು)

**Eiphebiophilia** (ಎಫಿಬೊಫಿಲಿಯಾ) : ಯೌವನದಲ್ಲೇ ಯುವಕ, ಯುವತಿಯರಲ್ಲಿ ಸೆಕ್ಸ್ ಸಂಬಂಧಗಳ ಬಗ್ಗೆ ಅಸಾಧಾರಣವಾದ ಆಸಕ್ತಿ, ಕಾಮಕಲ್ಪಭ್ರಮೆಗಳು, ಹಸ್ತಮೈಥುನ ಸಂದರ್ಭದಲ್ಲಿ ಯುವಕ/ ಯುವತಿಯರನ್ನು ನೆನಪಿಸಿಕೊಳ್ಳುವುದು.

**Ejaculation** (ಎಜಾಕ್ಯುಲೇಷನ್) : ವೀರ್ಯ ಚಿಮ್ಮುವಿಕೆ, ಲೈಂಗಿಕ ಸಂಭೋಗದಲ್ಲಾಗಲಿ, ಕಾಮಕಲ್ಪಭ್ರಮೆ (ಸೆಕ್ಸ್‌ಫ್ಯಾಂಟಸಿ) (ಹಗಲು ಗನಸು)ಅಥವಾ ಮುಷ್ಟಿಮೈಥುನದಲ್ಲಾಗಲಿ ವೀರ್ಯ ಶಿಶ್ನದಿಂದ ಹೊರಬರುವುದನ್ನು ವೈಜ್ಞಾನಿಕವಾಗಿ ವೀರ್ಯ ಚಿಮ್ಮುಗೆ ಎಂದು ಕರೆಯುತ್ತಾರೆ. ಶಿಶ್ನದ ಸ್ನಾಯುಗಳ ಕುಗ್ಗುವಿಕೆ ಮತ್ತು ಹಿಗ್ಗುವಿಕೆಯಿಂದಾಗಿ ವೀರ್ಯ ವೇಗವಾಗಿ ಚಿಮ್ಮಲ್ಪಡುತ್ತದೆ. ಈ ಅವಧಿಯಲ್ಲಿ ಪುರುಷ ಭಾವಪ್ರಾಪ್ತಿಯ ಸ್ಥಿತಿಯನ್ನು ಮುಟ್ಟಿರುತ್ತಾನೆ.

**Ejaculatory Incompetene** (ಎಜಾಕ್ಯೂಲೇಟರಿ ಇನ್‌ಕಾಂಪಿಟೆನ್ಸ್) : ವೀರ್ಯ ಸ್ಖಲನ ಅಶಕ್ತತೆ, ವೀರ್ಯ ಚಿಮ್ಮುವಿಕೆಯ ದುರ್ಬಲತೆ, ಪುರುಷ ವೀರ್ಯವನ್ನು ವಿಸರ್ಜಿಸಲು ಆಗದಿರುವುದು.

**Elopement** (ಎಲೋಪ್‌ಮೆಂಟ್) : ಪ್ರಿಯತಮನ ಜೊತೆ ಓಡಿ ಹೋಗುವುದು.

**Emission** (ಎಮಿಷನ್) : ಸಂಭೋಗದ ಕೊನೆಯಲ್ಲಿ ಪುರುಷ ಕ್ಷಿಪ್ರಗತಿಯಲ್ಲಿ ವೀರ್ಯವನ್ನು ವಿಸರ್ಜಿಸುವುದು.

**Eonism** (ಇಓನಿಜಮ್) : ಗಂಡಸರು ಹೆಂಗಸರಂತೆ ಅಲಂಕರಿಸಿಕೊಳ್ಳುವುದಕ್ಕೆ ಟ್ರಾನ್ಸ್‌ವೆಸ್ಟಿಜಮ್ ಎಂದು ಹ್ಯಾವ್‌ಲ್ಯಾಕ್ ಎಲ್ಲಿಸ್ ನಾಮಕರಣ ಮಾಡಿದರು. ಪುರುಷನಿಗೆ ಸ್ತ್ರೀಯಂತೆ ಅಲಂಕರಿಸಿಕೊಳ್ಳಬೇಕೆಂಬ ಅಭಿಲಾಶೆ.

**Erection** (ಎರೆಕ್‌ಷನ್) : ನಿಗುರುವಿಕೆ, ಉದ್ರೇಕ, ಶಿಶ್ನ (ಲಿಂಗ) ನಿಗುರಿದಾಗ ಬಳುಕದಂತೆ ಗಡುಸಾಗಿ ದೇಹದಿಂದ ಮುಂದಕ್ಕೆ ಚಾಚಿಕೊಂಡಿರುತ್ತದೆ. ಗಂಡಸು ತನ್ನ ಶಿಶ್ನವನ್ನು ಹೆಂಗಸಿನ ಯೋನಿಯೊಳಕ್ಕೆ ಸೇರಿಸುವಾಗ ಶಿಶ್ನ ನಿಗುರಿರಲೇಬೇಕು. ಶಿಶ್ನದ ಸಿರ ಅಥವಾ ಅಭಿಧಮನಿಗಳಲ್ಲಿ ರಕ್ತ ತುಂಬಿಕೊಂಡಾಗ ಅದು ನಿಗುರುತ್ತದೆ. ನಿಗುರುವಿಕೆ. ಹುಡುಗಿಯರ ಶರೀರದ ಕೆಲವು ಭಾಗಗಳಲ್ಲೂ ಆಗುತ್ತದೆ. ಆದರೆ, ಅವು ಎದ್ದುಕಾಣುವುದಿಲ್ಲ. ಅವರಲ್ಲಿ ಉದ್ರೇಕ ಉಂಟಾದಾಗ ಮೊಲೆ ತೊಟ್ಟುಗಳು ಗಡುಸಾಗಿ ನಿಮಿರಿಕೊಳ್ಳುವಂತೆಯೇ ಭಗಾಂಕರವೂ ನೆಟ್ಟಗಾಗುತ್ತದೆ.

**Erotic Aritculation** (ಎರೋಟಿಕ್ ಆರ್ಟಿಕ್ಯುಲೇಷನ್) : ಉನ್ನತ ಉದ್ರೇಕದ ಸಮಯದಲ್ಲಿ ಅರಿವಿಲ್ಲದೆಯೆ ಮಾಡುವ ಮಧುರ ಶಬ್ದ ಲಹರಿ.

**Erogenous Zones** (ಎರೋಜಿನಸ್ ಜೋನ್ಸ್) ಕಾಮ ಕೆರಳಿಕೆಯ ಭಾಗಗಳು. ಪ್ರಣಯ ಅಥವಾ ಪ್ರೀತಿಯ ಸಮಯದಲ್ಲಿ ಮುಟ್ಟಿದಾಗ ಕಾಮುಕ ಅಥವಾ ಲೈಂಗಿಕ ಭಾವನೆಯನ್ನು ಮೂಡಿಸುವ ಅನೇಕ ಅಂಗಗಳು ಸ್ತ್ರೀ–ಪುರುಷರ ಶರೀರದಲ್ಲಿವೆ. ಅವುಗಳೆಂದರೆ : ಬಾಯಿ, ಮುಖ, ತುಟಿ, ಕಿವಿ, ಮೂಗು, ಮೊಲೆ, ತೊಡೆ, ತೊಡೆಸಂದು, ಕುಂಡಿಗಳು, ಜನನೇಂದ್ರಿಯ ಮುಂತಾದವು.

**Erotolalia** (ಎರೋಟೊಲ್ಲಾ) : ಅಶ್ಲೀಲ ಸಂತೋಷ, ಅಶ್ಲೀಲ ಪದಗಳು; ಮಾತುಗಳು, ಹಾಡುಗಳ ಮೂಲಕ ಲೈಂಗಿಕ ಸಂತೋಷ ಹೊಂದುವಿಕೆ.

**Endometrium** (ಎಂಡೋಮೆಟ್ರಿಯಂ) : ಗರ್ಭ (ಕೋಶ) ದೊಳ್ಪರೆ, ಗರ್ಭಕೋಶದ ಮೂರು ಪದರಗಳಲ್ಲಿ ತೀರ ಒಳಗಿನದು.

**Epididymis** (ಎಪಿಡಿಡಿಮಿಸ್) : ತಡ್ಡುಮೇಲ್ನಾಳ. ಇದೊಂದು ಸುರಳಿ ನಾಳ. ಎಪಿಡಿಡಿಮಿಸ್ ಎಂದರೆ ಗ್ರೀಕ್ ಮೂಲ. ಅರ್ಥ ಅವಳಿ ಜವಳಿಗಳ ಮೇಲೆ ಎಂದರೆ ಎರಡು ವೃಷಣಗಳನ್ನು ಉದ್ದೇಶಿಸಿದ್ದು, ಇಲ್ಲಿ ವೀರಾಣುಗಳು ಸಂಗ್ರಹವಾಗಿ ಪಕ್ವವಾಗುತ್ತವೆ. ತಡ್ಡುಮೇಲ್ನಾಳ ವೃಷಣದ ತಲೆಯ ಮೇಲಿನಿಂದ ಕೆಳಗಿನವರೆಗೂ ಬಂದು ಮತ್ತೇ ತಿರುಗಿ ಮೇಲೇಳುತ್ತದೆ.

**Estrogen** (ಈಸ್ಟ್ರೋಜನ್) : ಬೆದೆಜನಕ, ಈಸ್ಟ್ರೋಜನ್ ಅಂಡಾಂಶಯಗಳಲ್ಲಿ ತಯಾರಾಗುವ ಬೆದೆ ಹುಟ್ಟಿಸುವ ಒಂದು ಒಳಸುರಿಕ ವಸ್ತು, ಜನನೇಂದ್ರಿಯಗಳು ಮತ್ತು ಮೊಲೆಗಳು ಅಭಿವೃದ್ಧಿ ಹೊಂದಲು ಸಹಾಯ ಮಾಡುತ್ತದೆ. ಇದೀಗ ಕೃತಕ ರಸಾಯನಿಕವಾಗೂ ತಯಾರಾಗುವುದು.

**Eros** (ಇರೋಸ್) : ಗ್ರೀಕರ ಕಾಮದೇವ, ಅಪ್ರೋಕುಮಾರ, ಸೈಕ್ ದೇವತೆಗೆ ಪ್ರೇಮಿಕ. ಕ್ಯೂಪಿಡ್ ಎನ್ನುವುದು ಈತನ ಮತ್ತೊಂದು ಹೆಸರು. ಫ್ರಾಯಿಡ್‌ನ ಪದಜಾಲದಲ್ಲಿ ಇರೋಸ್ ಎಂದರೆ, ಜೀವನಕ್ಕೆ ಆಧಾರ ಭೂತವಾದ ಮಾನಸಿಕ ಶಕ್ತಿಗಳು. ಸೈಕೊ ಅನಾಲಿಸಿಸ್ ಥಿಯರಿ ಪ್ರಕಾರ ವ್ಯಕ್ತಿಯ ಕಾಮವಾಂಛೆ, ಪ್ರತ್ಯುತ್ಪತ್ತಿವಾಂಛೆಯನ್ನು ಪ್ರದರ್ಶಿಸುವುದಕ್ಕೆ ಪಡುವ ಪರದಾಟಕ್ಕೆ ಇರೋಸ್ ಎನ್ನುತ್ತಾರೆ.

**Erotic aids** (ಎರಾಟಿಕ್ ಏಡ್ಸ್) ಕಾಮೋದ್ರೇಕ ಸಹಾಯಕಗಳು ಅವುಗಳೆಂದರೆ ನಗ್ನ ಚಿತ್ರಗಳು, ಕಾಮೋದ್ರೇಕದ ಕತೆಗಳು, ಕಾಮೋದ್ರೇಕ ಚಲನಚಿತ್ರಗಳು, ಮುಂತಾದವು.

**Excitement Phase** (ಎಕ್ಸೈಟ್‌ಮೆಂಟ್ ಪೇಸ್) : ಕಾಮೋದ್ರೇಕದ ಮೊದಲ ಹಂತ.

**Exhibitionism** (ಎಕ್ಸಿಬಿಶನಿಸಂ) : ಕಾಮಾಂಗ ತೋರಿಕೆ, ವಿಕಲವರ್ತನೆ, ಪ್ರದರ್ಶನ ರತಿ, ಸಾಮಾನ್ಯವಾಗಿ ಪುರುಷ ತನ್ನ ಲೈಂಗಿಕಾಂಗಗಳನ್ನು ಅನಿರೀಕ್ಷಿತ ವ್ಯಕ್ತಿಗೆ. ವಿಶೇಷವಾಗಿ ಸ್ತ್ರೀಗೆ ಅಥವಾ ಮಕ್ಕಳಿಗೆ ತೋರಿಸುವುದರ ಮೂಲಕ ಲೈಂಗಿಕ ತೃಪ್ತಿ ಸಂತೋಷವನ್ನು ಹೊಂದುತ್ತಾನೆ. (ಕಾಮಾಂಗ ತೋರುವ ವ್ಯಕ್ತಿಯನ್ನು ಮನೋವೈದ್ಯರಲ್ಲಿ ತೋರಿಸಿ ಚಿಕಿತ್ಸೆಕೊಡಿಸಬೇಕು.)

**Extramarital** (ಎಕ್ಸ್ಟ್ರಾಮೆರೈಟಲ್) ವಿವಾಹೇತರ. ಇಂತಹ ಲೈಂಗಿಕ ಸಂಬಂಧದಿಂದ ಅನೇಕ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಕುಟುಂಬ ವ್ಯವಸ್ಥೆ ಹಾಳಾಗುತ್ತದೆ. ಪ್ರೀತಿ, ವಿಶ್ವಾಸ ಸಡಿಲಗೊಳ್ಳುತ್ತದೆ. ವಿವಾಹೇತರ ಲೈಂಗಿಕ

ಸಂಬಂಧ ಒಂದು ಕಡೆ ಸುಖದಾಯಕ, ಆಕರ್ಷಕ. ಇನ್ನೊಂದು ಕಡೆ ಇದು ಅಪಾಯಕಾರಿ. ಅನಾರೋಗ್ಯಕಾರಿ.

# F

**Fallopian Tubs** (ಫೆಲೋಪಿಯನ್ ಟ್ಯೂಬ್ಸ್) ಗರ್ಭನಾಳಗಳು ಹೆಂಗಸಿನ ಅಂಡಾಂಶಯಗಳಿಂದ ಗರ್ಭಕೋಶಕ್ಕೆ ತಗುಲಿಕೊಂಡಿರುವ ತೆಳುವಾದ ಹಾಗೂ ಮೆತ್ತನೆಯ ಎರಡು ನಾಳಗಳಿವು. ಹುಡುಗಿ ಮೈನೆರೆದ ದಿನದಿಂದ ಮುಟ್ಟು ಕೊನೆಯಾಗಿ ನಿಲ್ಲುವ ತನಕ ತಿಂಗಳಿಗೊಂದರಂತೆ ಅಂಡಾಣು ಈ ನಾಳಗಳ ಮೂಲಕ ಗರ್ಭಕೋಶವನ್ನು ತಲುಪುತ್ತದೆ.

**False negative** (ಫಾಲ್ಸ್ ನೆಗೆಟಿವ್) : ಪರೀಕ್ಷೆ ಮಾಡಿದಾಗ ಯಾವುದಾದರೂ ಪದಾರ್ಥ, ಜೀವಿ ಅಥವಾ ವ್ಯಾಧಿ ಇಲ್ಲವೆಂದು ತಪ್ಪಾದ ಫಲಿತಾಂಶ ಬರುವಂತಹುದು.

**False positive** (ಫಾಲ್ಸ್ ಪಾಸಿಟೀವ್) : ಪರೀಕ್ಷೆ ಮಾಡಿದಾಗ, ವ್ಯಾಧಿ, ಜೀವಿ, ಅಥವಾ ಇಲ್ಲದಿದ್ದರೂ ಇದೆಯೆಂದು ತಪ್ಪಾದ ಫಲಿತಾಂಶ ಬರುವಂತಹುದು.

**False pregnancy** (ಫಾಲ್ಸ್‌ಪ್ರೆಗ್ನೆನ್ಸಿ) (ಮಿಥ್ಯಾಗರ್ಭ) : ಇದನ್ನೇ ಕೊವೆಡ್ ಎಂತಲೂ ಹೇಳುತ್ತಾರೆ. ಗರ್ಭ ಉಂಟಾಗದೆಯೇ ಗರ್ಭಕ್ಕೆ ಸಂಬಂಧಿಸಿದ ಎಲ್ಲ ಚಿಹ್ನೆಗಳನ್ನು ಅನುಭವಿಸುತ್ತಾ ಗರ್ಭಿಣಿ ಎಂಬ ಭ್ರಾಂತಿಗೊಳಗಾ-ಗುವುದು. ಇದೊಂದು ಮನೋಶಾರೀರಕ ಸಮಸ್ಯೆ. ಮುಟ್ಟು ನಿಂತು ಹೋಗುವುದು, ಹೊಟ್ಟೆ ಗಾತ್ರದಲ್ಲಿ ದೊಡ್ಡದಾಗುವುದು, ವಮನ ಪ್ರವೃತ್ತಿ ಎಲ್ಲವೂ ಇರುತ್ತದೆ. ಆದರೆ ಗರ್ಭ ಇರುವುದಿಲ್ಲ.

**Father Fixation** (ಫಾದರ್ ಫಿಕ್ಸೆಷನ್) : ಸೈಕೋ ಅನಾಲಿಸಿಸ್ ಸಿದ್ಧಾಂತದ ಪ್ರಕಾರ ಮಗುವಿಗೆ ತಂದೆಯ ಮೇಲೆ ಅಸಾಧಾರಣವಾದ ಅಗತ್ಯಕ್ಕೆ ಮೀರಿದ ಆರಾಧನೆ ಮೂಡುವುದನ್ನು ಫಾದರ್ ಫಿಕ್ಸೆಷನ್ ಎನ್ನುತ್ತಾರೆ. ಇಂತಹ ಹುಡುಗರು ತಂದೆಯನ್ನು ಪ್ರೇಮಿಸುತ್ತ, ಹೆಂಡತಿಯ ಜೊತೆ ಪ್ರೌಢವಾದ ಸೆಕ್ಸುಯಲ್ ರಿಲೇಷನ್ ಏರ್ಪಡಿಸಿಕೊಳ್ಳುವುದರಲ್ಲಿ ವಿಫಲರಾಗುತ್ತಾರೆ. ಹುಡುಗಿಯರು ತಂದೆಯಂತಹ ವ್ಯಕ್ತಿಗಳನ್ನೇ ಹೆಚ್ಚಾಗಿ ಇಷ್ಟಪಡುತ್ತಾರೆ.

**Fantasy** (ಫಾಂಟಸಿ) : ಕಾಮಕಲ್ಪಭ್ರಮೆ; ಹಗಲುಗನಸು ಲೈಂಗಿಕ ವಿಷಯಗಳಿಂದ ಕೂಡಿರುತ್ತದೆ.

**Fary** (ಫಾರಿ) : ಪುರುಷ ಸಲಿಂಗರತಿ.

**Fecundity** (ಫಿಕಂಡಿಟಿ) : ಸಂತಾನ ಉಂಟಾಗುವ ಶಕ್ತಿ ಇರುವಂತವರನ್ನು ಫಿಕಂಡಿಟಿ ಎನ್ನುತ್ತಾರೆ. ವಾಸ್ತವವಾಗಿ ಸಂತಾನ ಹೊಂದುವವರನ್ನು ಫರ್ಟಿಲಿಟಿ ಎನ್ನುತ್ತೇವೆ.

**Feel** (ಫೀಲ್) ದೇಶಿಯ ಇಂಗ್ಲೀಷಿನಲ್ಲಿ ಸ್ಪರ್ಶ ಕ್ರಿಯೆಗಿರುವ ಹೆಸರು.

**Fellatio** (ಫೆಲಿಶಿಯೋ) : ಪುರುಷನ ಜನನೇಂದ್ರಿಯಗಳನ್ನು ಬಾಯಿಯಿಂದ ಚೀಪುವುದು, ನೆಕ್ಕುವುದು, ಚುಂಬಿಸುವುದು ಇತ್ಯಾದಿ.

**Female Vindictiveness** (ಫಿಮೇಲ್ ವಿಂಡಿಕ್ಟಿವ್‌ನೆಸ್) : ಒಬ್ಬ ಪುರುಷನನ್ನು ನೈತಿಕವಾಗಿ, ಸಾಮಾಜಿಕವಾಗಿ ಅಪಮಾನಗೊಳಿಸುವ ಉದ್ದೇಶದಿಂದ ಸ್ತ್ರೀ, ಸೆಕ್ಸ್‌ನ್ನು ಆಯುಧವಾಗಿ ಬಳಸುವುದು. ಉದಾ: Y ಎನ್ನುವ ವ್ಯಕ್ತಿ ನನ್ನನ್ನು ರೇಪ್ ಮಾಡಿದ, ಈತನಿಗೆ ಗಂಡಸುತನವೇ ಇಲ್ಲ. ಇತ್ಯಾದಿ ಆರೋಪಗಳನ್ನು ಮಾಡಿ ಪುರುಷನನ್ನು ಎಲ್ಲ ರೀತಿಯಲ್ಲೂ ಅಪಮಾನಗೊಳಿಸುವಂತಹುದು.

**Female sex organs** (ಫಿಮೇಲ್ ಸೆಕ್ಸ್ ಆರ್ಗನ್ಸ್) ಹೆಣ್ಣಿನ ಲೈಂಗಿಕಾಂಗಗಳು (ಜನನೇಂದ್ರಿಯಗಳು).

1. ಫೆಲೋಪಿಯನ್ ನಾಳಗಳು 2. ಗರ್ಭಕೋಶ 3. ಪ್ಯೂಬಿಕ್ ಮೂಳೆ (ಗುಂಚೆಲು ಭಾಗ) 4. ಗರ್ಭಗೊರಳು 5. ಯೋನಿ 6. ಕ್ಲೈಟೋರಿಸ್ 7. ಬಾರ್ಥೋಲಿನ್ಸ್ ಗ್ರಂಥಿಗಳು 8. ಲೆಬಿಯಾ ಮಿನೋರಾ ಲೆಬಿಯಾ ಮಜೋರಾ 9. ಅಂಡಾಶಯ (ಓವರಿ).

**Feminine Mystique** (ಫೆಮಿನೈನ್ ಮಿಸ್ಟಿಕ್) : ಸ್ತ್ರೀ ಜನ್ಮದ ಸಾರ್ಥಕತೆ ಮಾತೃತ್ವದಲ್ಲಿಯೂ, ಗೃಹಿಣಿಯಾಗಿಯೂ ಮಾತ್ರವೇ ಇರುತ್ತದೆಂಬ ಸಿದ್ಧಾಂತ.

**Feminism** (ಫೆಮಿನಿಸಮ್) : ಸ್ತ್ರೀವಾದ : ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ, ಲೈಂಗಿಕವಾಗಿ ಸ್ತ್ರೀಗೆ ಸಮಾನವಾಗಿ ಹಕ್ಕು ಸಿಗಬೇಕೆಂದು ಹೋರಾಟ ಮಾಡಲು ಉದ್ಭವಿಸಿದ ಒಂದು ಸಿದ್ಧಾಂತ.

**Feminist** (ಫೆಮಿನಿಸ್ಟ್) : ಸ್ತ್ರೀವಾದಿ, ಸ್ತ್ರೀವಾದವನ್ನು ಬಲಪಡಿಸುವಂತಹ ವ್ಯಕ್ತಿ. ಆ ಸಿದ್ಧಾಂತದ ಯಶಸ್ಸಿಗೆ ಕೃಷಿ ಮಾಡುವ ವ್ಯಕ್ತಿ, ಮುಖ್ಯವಾಗಿ ಸ್ತ್ರೀ.

**Feminization** (ಫೆಮಿನೈಜೇಷನ್) : ಸ್ತ್ರೀಯಾಗಿ ಮಾರ್ಪಡುವುದು.

**Festishism** (ಫೆಸ್ಟಿಶಿಯಿಸಂ) : ಹೆಣ್ವಸ್ತುಕಾಮನೆ, ಕುರುಡು ಕಾಮ, ಸಾಮಾನ್ಯವಾಗಿ ಎಲ್ಲ ವ್ಯಕ್ತಿಗಳ ಲೈಂಗಿಕ ಜೀವನದಲ್ಲೂ ಹೆಣ್ವಸ್ತುಕಾಮನೆ ಸ್ವಲ್ಪಮಟ್ಟಿಗೆ ಇರುತ್ತದೆ. ಆದರೆ ನಿಜವಾದ ಹೆಣ್ವಸ್ತು ಕಾಮಿಗೆ, ಸ್ತ್ರೀಯು ಧರಿಸುವ ಯಾವುದಾದರೂ ವಸ್ತು, ವಸ್ತ್ರ ಇಲ್ಲದಿದ್ದರೆ, ಲೈಂಗಿಕ ಸಂತೋಷ ಆತನಲ್ಲಿ ಉಂಟಾಗುವುದಿಲ್ಲ. ಇದಕ್ಕೆ ಕಾರಣ ಬಾಲ್ಯದಿಂದಲೂ ವ್ಯಕ್ತಿಯ ನಡುವೆ ಇರುವ ಅತೃಪ್ತಿಯ ಸಂಬಂಧ.

**Fixation** (ಫಿಕ್ಸೇಷನ್) : ಲೈಂಗಿಕವಾಗಿ ಅಥವಾ ಮಾನಸಿಕವಾಗಿ ಒಬ್ಬರ ಮೇಲೆ ಮನಸ್ಸನ್ನು ಇಟ್ಟುಕೊಂಡಿರುವುದು. ಇದು ಅಪಕ್ವ ಸ್ವಭಾವವಾಗಿರುತ್ತದೆ. ನ್ಯೂರೊಟಿಕ್ ಪರ್ಸನಾಲಿಟಿಯ ಚಿಹ್ನೆ.

**Foetus** (ಫೀಟಸ್) : ಪಿಂಡಗೂಸು, ತಾಯಿಯ ಗರ್ಭಕೋಶದೊಳಗೆ ಬೆಳೆಯುತ್ತಿರುವ ಮೂರು ತಿಂಗಳು ತುಂಬಿದ ಮಗು.

**Fondling** (ಫಾಂಡಲಿಂಗ್) : ಶರೀರದಲ್ಲಿರುವ ಕಾಮ ಪ್ರೇರಣೆಯ ಕೇಂದ್ರಗಳನ್ನು ಜನನೇಂದ್ರಿಯವನ್ನು ಮೃದುವಾಗಿ, ಸ್ಪರ್ಶಿಸುವುದು, ಉದ್ರೇಕಿಸುವುದು ಇದು ಪ್ರಣಯ ಕಲೆಯ (ದಂಪತಿಗಳಲ್ಲಿ) ಮುಖ್ಯ ಪ್ರಕ್ರಿಯೆ.

**Foreplay** (ಫೋರ್‌ಪ್ಲೇ) : ಕೂಟಮುನ್ನಲಿವು, ಸಂಭೋಗಪೂರ್ವ ಕಾಮಕೇಳಿ, ಲೈಂಗಿಕ ಪ್ರೀತಿಯ ಚಟುವಟಿಕೆ. ಯಾವುದೇ ರೀತಿಯ ಸಂಭೋಗ ಕ್ರಿಯೆ ನಡೆಸದೆ ಪ್ರೀತಿಯ ಆಟ ಆಡುವುದು. ಅವುಗಳೆಂದರೆ ಆಲಿಂಗನ, ಚುಂಬನ, ಸ್ಪರ್ಶಿಸುವುದು. ಇತ್ಯಾದಿ.

**Foreskin** (ಫೋರ್‌ಸ್ಕಿನ್) : ಶಿಶ್ನಮುಂದೊಗಲು.

**Formicophilia** (ಫಾರ್ಮಿಕೋಫಿಲಿಯಾ) : ಇರುವೆ, ಕಪ್ಪೆ, ವಗ್ಯೆರೆ ಜಂತುಗಳನ್ನು, ಕ್ರಿಮಿಗಳನ್ನು ಜನನಾಂಗದ ಬಳಿ ಇಟ್ಟುಕೊಂಡು ಅವುಗಳ ಸಹಾಯದಿಂದ ಮಾತ್ರವೇ ಕಾಮೋದ್ರೇಕವನ್ನು ಹೊಂದುವ ಪ್ರವೃತ್ತಿ. ಇದೊಂದು ಕಾಮವಿಕಾರ, ಇಂತಹವರನ್ನು ಮನೋವೈದ್ಯರಿಗೆ ತೋರಿಸಬೇಕು.

**Frigidity** (ಫ್ರಿಜಿಡಿಟಿ) : ಬೇಕಾಮನೆ, ಕಾಮನಿರಾಸಕ್ತಿ, ಲೈಂಗಿಕ ಆನುಭವದ ಚೇತರಿಕೆ ಹೊಂದುವಲ್ಲಿ ಸೋಲುವುದು. ಸ್ತ್ರೀಯರಲ್ಲಿ ಲೈಂಗಿಕ ನಿರಾಸಕ್ತಿ.

**Frottage** (ಫ್ರಾಟೇಜ್) : ಮೈತೀಡಿಕೆಯ ಚಟ, ವ್ಯಕ್ತಿ ಬೇರೊಬ್ಬ ವ್ಯಕ್ತಿಯ ಶರೀರಕ್ಕೆ ಅಥವಾ ಆತನು, ಆಕೆಯೂ ಧರಿಸಿರುವ ಉಡುಪಿಗೆ ಮೈ ಉಜ್ಜುವ ಒಂದು ವಿಕಲ ವರ್ತನೆ.

**Folicle** (ಫಾಲಿಕಲ್) : ಕೋಶಿಕ, ರಸಸುರಿಸುವ ಕಿರುಕೋಶ.

**Fertility** (ಫರ್ಟಿಲಿಟಿ): ಫಲವಂತತೆ, ಸಂತಾನವೀಯುವ ಬಲ ಇರುವಿಕೆ, ಬಸಿರಾಗುವಂತಿರುವಿಕೆ.

**Fibroids** (ಫೈಬ್ರಾಯಿಡ್ಸ್) : ಸಾಮಾನ್ಯವಾಗಿ ಗರ್ಭಕೋಶದಲ್ಲಿ ಬೆಳೆಯುವ ನಾರುಗೆಡ್ಡೆಗಳು.

**Fuck** (ಪಕ್) : ಲೈಂಗಿಕ ಕ್ರಿಯೆಗೆ ಇಂಗ್ಲಿಷ್ ಜನ ಸಾಮಾನ್ಯರು ಬಳಸುವ ಪದ.

**Fuck-hole** (ಪಕ್‌ಹೋಲ್) : ವಜೈನಾ, ಯೋನಿ.

**Fucksome** (ಫಕ್ ಸಮ್): ಲೈಂಗಿಕಾಸೆ.

**Fuck stick** (ಫಕ್ ಸ್ಟಿಕ್) : ಇಂಗ್ಲೆಂಡ್‌ನ ಗ್ರಾಮ ಭಾಷೆಯಲ್ಲಿ ಶಿಶ್ನದ ಶಬ್ದಕ್ಕೆ ಇರುವ ಶಬ್ದ.

**Fur** (ಫರ್) : ದೇಶೀಯ ಭಾಷೆಯಲ್ಲಿ ಪ್ಯೂಬಿಕ್ ಹೇರ್‌ಗೆ ಇರುವ ಹೆಸರು (ಜನನೇಂದ್ರಿಯಗಳ) ಸುತ್ತಬೆಳೆದಿರುವ ಕೂದಲು).

# G

**Gamophobia** (ಗಾಮೋಫೋಬಿಯಾ) : ವಿವಾಹದ ಭಯ.

**Genitals** ( ಜನಿಟಲ್ಸ್) : ಜನನಾಂಗಗಳು, ಗಂಡಸಿನ ಶಿಶ್ನ ಮತ್ತು ತರಡು ಚೀಲ. ಹೆಂಗಸಿನ ಯೋನಿ ಮೊಗ (Vulva) ಯೋನಿಯ ಸುತ್ತ ಇರುವ ಮೆತ್ತನೆಯ ಚರ್ಮದ ಮಡಿಕೆಗಳು, ಯೋನಿ ಮತ್ತು ಭಗಾಂಕುರ ಇವುಗಳನ್ನು ಜನನೇಂದ್ರಿಯಗಳೆಂದು ಕರೆಯುತ್ತಾರೆ.

**Genitals Warts** (ಜೆನಿಟಲ್ ವಾರ್ಟ್ಸ್) : ಜನನೇಂದ್ರಿಯಗಳಲ್ಲಿ ವೈರಸ್ ಸೋಂಕು.

**Glans penis** (ಗ್ಲಾನ್ಸ್ ಪೆನಿಸ್) : ಶಿಶ್ನದ ಶಿರೋಭಾಗ.

**Gonorrhoea** (ಗನೋರಿಯಾ): ಜನನಾಂಗಗಳ ಲೋಳೆಪರೆಗೆ ಹತ್ತುವ ಮೇಹದ ಒಂದು ವಿಶಿಷ್ಟಸೋಂಕು ರೋಗ. ಈ ರೋಗದಲ್ಲಿ ಲೋಳೆ ಸುರಿತ ಒಂದು ಮುಖ್ಯ ಲಕ್ಷಣ.

**Gonad** (ಗೋನಡ್) : ಜನನಗ್ರಂಥಿ, ಅಂಡಾಶಯ, ಲಿಂಗಗ್ರಂಥಿ.

**Gravid** (ಗ್ರಾವಿಡ್) : ಗರ್ಭ ಧರಿಸಿದ.

**Grid** (ಗ್ರಿಡ್) : ಏಯ್ಡ್ಸ್ ಎಂಬ ಹೆಸರು ನಾಮಕರಣವಾಗುವ ಮೊದಲು ಕೆಲವರು ಗ್ರಿಡ್ ಎಂದು ಹೇಳುತ್ತಿದ್ದರು. Gay related immune deficiency ಎಂದು

**Guilty Feeling** (ಗಿಲ್ಟಿಫೀಲಿಂಗ್ಸ್) : ಅಪರಾಧ ಮನೋಭಾವನೆ.

**Gumma** (ಗಮ್ಮ) : ಅಂಟುಗತಿ, ಉಪದಂಶ ಮೇಹರೋಗದಲ್ಲಿ (ಸಿಫಿಲಿಸ್) ಮೂರನೆಯ ಹಂತದಲ್ಲಿ ವಿಶಿಷ್ಟವಾಗಿ ಏಳುವ, ಅಂಟಂಟಾದ ರಬ್ಬರ್‌ನಂತೆ ಮೆತ್ತಗಿರುವ ಗಂತಿ.

**Gynophobia** (ಗೈನೋಫೋಬಿಯಾ) : ಸ್ತ್ರೀಯರನ್ನು ಕಂಡರೆ ಭಯ.

# H

**Hermophrodite** (ಹೆರ್ಮೋರ್ಫ್ರೋಡೈಟ್: ಇರ್ಲಿಂಗಿತನ, ಒಬ್ಬ ವ್ಯಕ್ತಿ ಸ್ತ್ರೀ ಮತ್ತು ಪುರುಷನ ಜನನಾಂಗಗಳನ್ನು ಹೊಂದಿ ಎರಡು ಲೈಂಗಿಕಾಂಕ್ಷೆಗಳನ್ನು ಹೊಂದಿರುವಿಕೆ.

**Herpes** (ಹರ್ಪಿಸ್) : ಒಂದು ವಿಧದ ವೈರಸ್ ಸೋಂಕು. ಇದು ಜನನೇಂದ್ರಿಯಗಳ ಮೇಲು ಉಂಟಾಗುತ್ತದೆ. ಹಾಗೂ ವಿಪರೀತ ನೋವನ್ನುಂಟು ಮಾಡುತ್ತದೆ.

**Herpes sipmlex** (ಹರ್ಪಿಸ್ ಸಿಂಪ್ಲೆಕ್ಸ್) : ಸರಳ ಪಾಮ. ಒಂದು ವೈರಸ್ ಅಂಟುರೋಗ, ಸಾಮಾನ್ಯವಾಗಿ ಬಾಯಿ ಇಲ್ಲವೇ ಜನನಾಂಗಗಳಲ್ಲಿ, ಲೋಳೆಪದರದ ಚರ್ಮವನ್ನು ಸೇರುವೆಡೆಗಳಲ್ಲಿ ಮತ್ತೆ ಮತ್ತೆ ಸಣ್ಣಗುಳ್ಳೆ ಬೊಬ್ಬೆಗಳು ಏಳುತ್ತಿರುವಿಕೆ.

**Heterosexual** (ಹೆಟ್ರೊಸೆಕ್ಸುಯಲ್) : ಹೆರಲಿಂಗಾಸೆ, ಹೆರಲಿಂಗಕಾಮ, ಹೆಣ್ಣು – ಗಂಡಿನಲ್ಲೂ, ಗಂಡು–ಹೆಣ್ಣಿನಲ್ಲೂ ಸಹಜವಾಗಿ ತೋರುವಂತೆ, ಹೆರಲಿಂಗದ ಬಗ್ಗೆ ಲೈಂಗಿಕ ಆಕರ್ಷಣೆ ತೋರುವುದು ಅಥವಾ ಲೈಂಗಿಕವಾಗಿ ವರ್ತಿಸುವುದು.

**Homosexual** (ಹೋವೋಸೆಕ್ಸುಯಲ್) : ಸಲಿಂಗರತಿ, ಗಂಡಸು ಗಂಡಸಿನೊಂದಿಗೂ ಹೆಂಗಸು ಹೆಂಗಸಿನೊಂದಿಗೂ ಲೈಂಗಿಕವಾಗಿ ಆಕರ್ಷಿತವಾಗಿ ಸಂಭೋಗಿಸುವುದು.

**Homo Sexual Rape** (ಹೋಮೋ ಸೆಕ್ಸುಯಲ್ ರೇಪ್) : ಒಬ್ಬ ಪುರುಷ ಇನ್ನೊಬ್ಬ ಪುರುಷನನ್ನಾಗಲಿ, ಒಬ್ಬ ಸ್ತ್ರೀ ಮತ್ತೋರ್ವ ಸ್ತ್ರೀಯನ್ನಾಗಲಿ ಲೈಂಗಿಕವಾಗಿ ಬಲತ್ಕಾರವನ್ನು ಮಾಡಿ ಅನುಭವಿಸುವುದು.

**Home Sexology** (ಹೊಮೋ ಸೆಕ್ಸಾಲಜಿ) : ಹೋಮೋಸೆಕ್ಸುಯಾಲಿಟಿ (ಸಲಿಂಗ ರತಿ) ಆಧ್ಯಯನಕ್ಕೆ ಸಂಬಂಧಿಸಿದ ಶಾಸ್ತ್ರ.

**Hot** (ಹಾಟ್) : ದೇಶಿಯ ಇಂಗ್ಲಿಷಿನಲ್ಲಿ ವ್ಯಕ್ತಿಗೆ ಲೈಂಗಿಕಾಸೆಗಿರುವ ಹೆಸರು.

**Hot Box** (ಹಾಟ್ ಬಾಕ್ಸ್) : ದೇಶಿಯ ಇಂಗ್ಲಿಷಿನಲ್ಲಿ ಯೋನಿಗಿರುವ ಹೆಸರು.

**Hymen** (ಹೈಮೆನ್) : ಯೋನಿಪೊರೆ, ಇದು ಸ್ತ್ರೀಯ ಯೋನಿಯನ್ನು ಅರ್ಧಮರ್ಧ ಮುಚ್ಚಿರುವ ಸಣ್ಣ ಚಕ್ರಾಕಾರದ ಪೊರೆ.

**Hysterectomy** (ಹಿಸ್ಟರೆಕ್ಟೊಮಿ) : ಗರ್ಭಕೋಶವನ್ನು ಕೊಯ್ದು ತೆಗೆದು ಹಾಕುವಿಕೆ.

**Hyperphilia** (ಹೈಪರ್ ಪೀಲಿಯಾ) : ಅತಿಯಾದ ಲೈಂಗಿಕಾಸೆ.

**Hyper sexuality** (ಹೈಪರ್ ಸೆಕ್ಸುಯಾಲ್ಟಿ) : ಅತಿಯಾದ ಲೈಂಗಿಕ ಚಟುವಟಿಕೆ.

**Hypolibido** (ಹೈಪೋಲಿಬಿಡೋ) : ಸೆಕ್ಸ್ ಬಗ್ಗೆ ಆಸಕ್ತಿ ಕಡಿಮೆಯಾಗಿರುವುದು.

**Hypomastia** (ಹೈಪೋಮಾಸ್ಟಿಯಾ) : ಸ್ತನಗಳು ಸರಿಯಾಗಿ ಬೆಳವಣಿಗೆ ಹೊಂದದ ಸ್ಥಿತಿ.

**Hysterosalpingogram** (ಹಿಸ್ಟೆರೋಸಾಲ್‌ಪಿಂಗೋಗ್ರಾಂ) : ವಿಕರಣ ತೋರದ ದ್ರಾವಣವೊಂದನ್ನು ಗರ್ಭಕೋಶ ಮತ್ತು ಗರ್ಭನಾಳಗಳೊಳಕ್ಕೆ ಹೋಗುವಂತೆ ಹಾಕಿಟ್ಟು ಎಕ್ಸ್‌ರೇ ಕಿರಣಗಳಿಂದ ತೆಗೆದ ಚಿತ್ರ.

# I

**Impotence** (ಇಂಪೋಟೆನ್ಸ್) : ಲೈಂಗಿಕ ದುರ್ಬಲತೆ, ತೃಪ್ತಿಕರವಾಗಿ ಶಿಶ್ನ ನಿಗರಿ ಸಂಭೋಗಿಸಲಾಗದಿರುವಿಕೆ. ನಿಮಿರು ದೌರ್ಬಲ್ಯ: ಲೈಂಗಿಕ ದೌರ್ಬಲ್ಯ.

**Incest** (ಇನ್‌ಸೆಸ್ಟ್) : ನೆಂಟಕೂಟ, ಸಂಬಂಧಿ ಸಂಗ. ಹತ್ತಿರದ ಸಂಬಂಧಿಕರೊಡನೆ ಲೈಂಗಿಕ ಸಂಭೋಗ. ಉದಾ: ಪೋಷಕರು – ಮಕ್ಕಳು, ಸೋದರ – ಸೋದರಿ. ಇದೊಂದು ಕಾಮ ವಿಕಾರವಾಗಿರುತ್ತದೆ.

**Infertility** (ಇನ್‌ಪರ್ಟಿಲಿಟಿ) : ಬಂಜೆತನ, ಸಂತಾನೋತ್ಪತ್ತಿ ಹೊಂದಲು ಅನರ್ಹತೆ, ಇದಕ್ಕೆ ಕಾರಣ ಸ್ತ್ರೀ-ಪುರುಷರ ಜನನೇಂದ್ರಿಯಗಳ ನಿಜಗೆಲಸದಲ್ಲಿ ತೊಡಕು (ಡಿಸ್‌ಫಂಕ್ಷನ್).

**I.U.D** (ಐಯುಡಿ) : ಇಂಟ್ರಯಟೆರೈನ್ ಡಿವೈಸ್. ಬಸಿರನ್ನು ತಡೆಗಟ್ಟಲು ಸ್ತ್ರೀಯ ಗರ್ಭಕೋಶದಲ್ಲಿ ಅಳವಡಿಸಲ್ಪಡುವ ಸಾಧನ. ಪ್ಲಾಸ್ಟಿಕ್ ವಂಕಿ ಅಥವಾ ತಾಮ್ರದ (ಕಾಪರ್ ಟಿ.)

**Insemination** (ಇನ್‌ಸೆಮಿನೇಷನ್) : ವೀರ್ಯ ಹಾಕಣೆ : ಸಂಭೋಗ ಕ್ರಿಯೆಯಲ್ಲಿ ವೀರ್ಯವನ್ನು ಯೋನಿಯಲ್ಲಿ ಸ್ಖಲಿಸುವುದು.

**Intercourse sexual** (ಇಂಟರ್‌ಕೋರ್ಸ್ ಸೆಕ್ಸುಯಲ್) : ಲೈಂಗಿಕ ಸಂಭೋಗ, ಲೈಂಗಿಕ ಕೂಟ, ಲಿಂಗಕೂಟ. ರತಿಕ್ರಿಯೆ.

**Intersex** (ಇಂಟರ್‌ಸೆಕ್ಸ್): ವ್ಯಕ್ತಿಯೋರ್ವ ಸ್ತ್ರೀ, ಪುರುಷರಿಬ್ಬರ ಲಕ್ಷಣಗಳನ್ನು ಅಥವಾ ಲೈಂಗಿಕಾಂಗಗಳನ್ನು ಹೊಂದಿರುವುದು.

# K

**Kissing** (ಕಿಸ್ಸಿಂಗ್) : ಚುಂಬನ, ಮುತ್ತು, ದಂಪತಿಗಳು ಪರಸ್ಪರ ತಮ್ಮ ತುಟಿಗಳನ್ನು ಸೇರಿಸಿ ಚುಂಬಿಸುವುದರಿಂದ ಹೆಚ್ಚಿನ ಸಾಮೀಪ್ಯವನ್ನು ಅನುಭವಿಸಬಹುದು. ತುಟಿ ಚುಂಬನದ ಮೂಲಕ ಆಳವಾದ ಚುಂಬನವನ್ನು ಆನಂದಿಸಬಹುದು. ನಾಲಿಗೆ-ತುಟಿಗಳಿಂದ, ಸಂಗಾತಿಯ

ದೇಹದ ಕಾಮ ಕೆರಳಿಕೆಯ ಭಾಗಗಳನ್ನು ಸ್ಪರ್ಶಿಸಿ, ಸಂಗಾತಿಯನ್ನು ಉದ್ರೇಕಿಸಬಹುದು. ಲೈಂಗಿಕ ಆನಂದವನ್ನು ಪಡೆಯಬಹುದು ಮತ್ತು ನೀಡಬಹುದು.

# L

**Labium** (ಲೇಬಿಯಂ) : ಯೋನಿದುಟಿ.

**Labia Majora** (ಲೇಬಿಯಾ ಮಜೋರ) : ಹಿರಿ ಭಗೋಷ್ಠ. ಯೋನಿ ದುಟಿ, ಗೊಲ್ಲಿಯ ಅಗಲವಾದ ಎರಡು ಜೊತೆ ತುಟಿಗಳು. ಇದು ಹೊರಭಾಗದಲ್ಲಿ ಕೂದಲುಗಳನ್ನು ಹೊಂದಿರುತ್ತದೆ.

**Labia Minora** (ಲೆಬಿಯ ಮಿನೋರಾ) : ಕಿರಿ ಭಗೋಷ್ಠ. ಯೋನಿಯ ಕಿರುದುಟಿಗಳು.

**Labour** (ಲೇಬರ್): ಹೆರಿಗೆ, ಹಡೆ, ಜನನ ನೀಡುವ ಪ್ರಕ್ರಿಯೆ

**Laparoscopic Sterilization** (ಲ್ಯಾಪರೋಸ್ಕೋಪಿಕ್ ಸ್ಟೆರ್ಲೈಜೇಷನ್) : ಉದರದರ್ಶಕ ಸಂತಾನಶಕ್ತಿಹರಣ.

**Lay** (ಲೇ): ಇಂಟರ್ ಕೋರ್ಸ್, ಸಂಭೋಗ

**Lesbian** (ಲೆಸ್‌ಬಿಯನ್): ಹೆಂಗಸು ಹೆಂಗಸಿನೊಂದಿಗೆ ಲೈಂಗಿಕವಾಗಿ ಆಕರ್ಷಕಗೊಳ್ಳುವಿಕೆ.

**Lez** (ಲೆಜ಼್) : ಸ್ತ್ರೀ ಸಲಿಂಗರತಿ.

**Libido** (ಲಿಬಿಡೋ) : ಕಾಮ, ಕಾಮಬಲ, ರತಿಯಾಸೆ, ಈ ಪದವನ್ನು ಮೊದಲು ಫ್ರಾಯ್ಡ್ ಲೈಂಗಿಕ ಶಕ್ತಿಯನ್ನು ವಿವರಿಸಲು ಉಪಯೋಗಿಸುತ್ತಿದ್ದನು. ಆದರೆ ಇತ್ತೀಚೆಗೆ ಈ ಪದವನ್ನು ಲೈಂಗಿಕ ಕಾಮನೆ ಹಾಗೂ ಆಸೆಯನ್ನು ವಿವರಿಸಲು ಉಪಯೋಗಿಸಲಾಗುತ್ತಿದೆ.

**Love** (ಲವ್): ಪ್ರೀತಿ, ಒಲವು, ಮಮತೆ, ಪ್ರೇಮ, ಇಷ್ಟ, ಅನೇಕ ವಿಧವಾದ ಪ್ರೀತಿಯಿದೆ, ಅವುಗಳೆಂದರೆ: ಲೈಂಗಿಕ ಪ್ರೀತಿ, ಸ್ವಯಂಪ್ರೀತಿ, ವಸ್ತುಪ್ರೀತಿ, ತನ್ನದೇಶದ ಬಗ್ಗೆ ಪ್ರೀತಿ ಮೊದಲಾದವು. ಪ್ರೀತಿಸುವ ಸಾಮರ್ಥ್ಯ ವ್ಯಕ್ತಿಯಿಂದ

ವ್ಯಕ್ತಿಗೆ ಭಿನ್ನವಾಗಿರುತ್ತದೆ. ಲೈಂಗಿಕ ಪ್ರೀತಿ, ನಮ್ಮ ಲೈಂಗಿಕತೆಯ ಅಭಿವ್ಯಕ್ತಿಯಾಗಿರುತ್ತದೆ.

**Loveplay** (ಲವ್‌ಪ್ಲೇ) : ಪ್ರೇಮದಾಟ, ಪ್ರೀತಿಯ ಆಟ, ಲೈಂಗಿಕ ಉತ್ತೇಜನದ ಒಂದು ಪ್ರಕಾರ ಲವ್ ಪ್ಲೇ, ಇದನ್ನು ಶಾರೀರಿಕ ಸಂಪರ್ಕದಿಂದಲ್ಲದೆ, ನವಿರಾದ ಮಾತು, ನೋಟದಿಂದಲೂ ಪ್ರಣಯಿಗಳು ನಡೆಸುತ್ತಾರೆ.

**Lust** (ಲಸ್ಟ್) : ಕಾಮನೆ, ಕಾಮಪಿಪಾಸೆ. ವ್ಯಕ್ತಿಯೊಂದಿಗೆ ಪ್ರೀತಿಯ ಸಂಬಂಧವನ್ನು ಬಯಸದೆ, ಬರೀ ಲೈಂಗಿಕ ಸುಖಕ್ಕಾಗಿ ಆಸೆ ಪಡುವುದು ಲಸ್ಟ್ ಆಗುತ್ತದೆ. ಇದು ಇದ್ದಾಗ, ವ್ಯಕ್ತಿ ಬಹಳ ಹೀನಾಯವಾಗಿ ವರ್ತಿಸುತ್ತಾನೆ. ಬಲಾತ್ಕಾರ ಸಂಭೋಗಕ್ಕೂ ಸಿದ್ಧನಾಗುತ್ತಾನೆ.

**Lymphogranuloma venereum** (ಲಿಂಫೋಗ್ರಾನುಲೋಮಾ ವೆನೆರೆಯಂ): ವೈರಸ್‌ನಿಂದ ಉಂಟಾಗುತ್ತದೆ. ಇದು ಮೇಹ ರೋಗಗಳ ಗುಂಪಿಗೆ ಸೇರುತ್ತದೆ.

**Leucorrhoea** (ಲ್ಯೂಕೋರಿಯಾ) : ಬಿಳಿ ಸೆರಗು, ವೈಟ್ ಡಿಸ್‌ಚಾರ್ಜ್, ಯೋನಿಯಿಂದ ಬಿಳುಪು ಸುರಿಯುತ್ತಿರುವಿಕೆ. ಬಿಳಿಪು ಹೋಗುವಿಕೆ.

# M

**Macrocmastia** (ಮಾಕ್ರೋಮಾಸ್ಟಿಯಾ) : ಅತಿದೊಡ್ಡದಾದ ಸ್ತನಗಳು.

**Marriage** (ಮ್ಯಾರೇಜ್) : ವಿವಾಹ, ಮದುವೆ, ಲಗ್ನ, ಮೂಲಭೂತವಾಗಿ ವಿವಾಹವು ಸಾಮಾಜಿಕ ಮತ್ತು ಕಾನೂನು ಬದ್ಧ ಒಪ್ಪಂದವಾಗಿರುತ್ತದೆ.

**Masochism** (ಮಸೋಚಿಸಂ) : ಹಿಂಸಾರತಿಯಾಸೆ, ಕಾಮ ತೃಪ್ತಿಗಾಗಿ ಮಾನಸಿಕವಾಗಿ ಅಥವಾ ಶಾರೀರಿಕವಾಗಿ ಹಿಂಸಿಸುವ ಆಸೆ. ಇಂತಹವರಿಗೆ ಮನೋವೈದ್ಯರಿಂದ ಚಿಕಿತ್ಸೆ ಮಾಡಿಸಬೇಕು.

**Mastectomy** (ಮಾಸ್ಟೆಕ್ಟೊಮಿ) : ಮೊಲೆ ಕೊಯ್ತೆಗೆತ, ಸ್ತ್ರೀಯ ಸ್ತನಗಳನ್ನು ಶಸ್ತ್ರಚಿಕಿತ್ಸೆಯ ಮೂಲಕ ತೆಗೆಯುವುದು, ಸಾಮಾನ್ಯವಾಗಿ ಕ್ಯಾನ್ಸರ್ ಬೆಳವಣಿಗೆಯ ಕಾರಣದಿಂದ ತೆಗೆಯುವುದುಂಟು.

**Masturbation** (ಮಾಸ್ಟರ್ ಬೇಶನ್) : ಹಸ್ತಮೈಥುನ, ಮುಷ್ಟಿ ಮೈಥುನ. ಬೇರೊಬ್ಬ ವ್ಯಕ್ತಿಯ ಸಂಗಡ ಶಾರೀರಿಕ ಸಂಪರ್ಕ ಹೊಂದದೆ, ತನ್ನ ಜನನಾಂಗವನ್ನು ತೀಡುತ್ತ ಲೈಂಗಿಕವಾಗಿ ಸ್ವಯಂ ಉತ್ತೇಜನಗೊಂಡು, ಭಾವಪ್ರಾಪ್ತಿ ಹೊಂದುವುದು. ಸಂಗಾತಿಯಿಂದಲೂ ಮಾಡಿಸಿಕೊಳ್ಳಬಹುದು. ಇದು ಸಹಜ, ಸ್ವಾಭಾವಿಕ. ಇದರಿಂದ ಯಾವ ಹಾನಿಯೂ ಇಲ್ಲ.

**Menopause** (ಮೆನೋಪಾಸ್) : ಋತುಬಂಧ, ಮುಟ್ಟುನಿಂತಿರುವಿಕೆ. ಮುಟ್ಟಿನ ಅಂತ್ಯ.

**Menstrual cycle** (ಮೆನ್‌ಸ್ಟುರಲ್ ಸೈಕಲ್) : ಮುಟ್ಟಿನ ಚಕ್ರ, ಋತು ಚಕ್ರ.

**Menstruation** (ಮೆನ್‌ಸ್ಟುರೇಷನ್) : ಮುಟ್ಟು, ಗರ್ಭಕೋಶದ ಒಳಹೊದಿಕೆಯು ಪ್ರತಿ ತಿಂಗಳು ಕಳಚಿ ಬೀಳುವುದಕ್ಕೆ ಮುಟ್ಟಾಗುವುದು ಎನ್ನುತ್ತಾರೆ.

**Middle leg** (ಮಿಡ್ಲಲೆಗ್)ಇಂಗ್ಲೀಷಿನ ದೇಶಿಯ ಭಾಷೆಯಲ್ಲಿ ಶಿಶ್ನಕ್ಕೆ ಇರುವ ಹೆಸರು.

**Misandria** (ಮಿಸ್‌ಆ್ಯಂಡ್ರಿಯಾ) : ಕೆಲವು ಸ್ತ್ರೀಯರಿಗೆ ಪುರುಷರನ್ನು ಕಂಡರೆ ಭಯ.

**Miscarriage** (ಮಿಸ್‌ಕ್ಯಾರೇಜ್) : ಮೈಯಿಳಿತ, ಗರ್ಭಪಾತ.

**Misogyn** (ಮಿಸೋಗೈನ್) : ಸ್ತ್ರೀಯರನ್ನು ಇಷ್ಟಪಡದ ಪುರುಷರು.

**Missionary Position** (ಮಿಷನರಿ ಪೊಸಿಷನ್) : ಪುರುಷ ಮೇಲಿನ ಭಂಗಿ ಪುರುಷ ಪ್ರಧಾನ ಲೈಂಗಿಕ ಸಂಭೋಗದ ಭಂಗಿ.

**Mixophilia** (ಮಿಕ್ಸೋಫೀಲಿಯಾ) : ಲೈಂಗಿಕ ಕ್ರಿಯೆಯನ್ನು ವೀಕ್ಷಿಸುವುದರ ಮೂಲಕ ಲೈಂಗಿಕ ಸಂತೋಷವನ್ನು ಹೊಂದುವುದು.

**Mixoscopy** (ಮಿಕ್ಸೋಸ್ಕೋಪಿ) : ಇತರರ ಜನನೇಂದ್ರಿಯಗಳನ್ನು ವೀಕ್ಷಿಸಿ ಲೈಂಗಿಕ ಚೇತರಿಕೆ ಅಥವಾ ಸಂತೋಷ ಹೊಂದುವ ವರ್ತನೆ ಅಥವಾ ಇತರರು ನಡೆಸುತ್ತಿರುವ ಲೈಂಗಿಕ ಕ್ರಿಯೆಗಳನ್ನು ನೋಡಿ, ಕಾಮ ಸುಖವನ್ನು ಹೊಂದುವ ಒಂದು ವಿಚಿತ್ರ ವರ್ತನೆ.

**Molestation** (ಮೊಲೆಸ್ಟೇಷನ್) : ಲೈಂಗಿಕ ಅತ್ಯಾಚಾರ, ಸೆಕ್ಸ್‌ಗಾಗಿ ಬಲವಂತ ಮಾಡುವಂತಹುದು.

**Moll** (ಮೊಲ್): ಸೂಳೆ, ವೇಶ್ಯೆ.

**Monsveneris** (ಮಾನ್ಸ್‌ವೆನೆರಿಸ್): ರತಿದಿಮ್ಮು, ಗುಂಜೆಲ್ಲುದಿಮ್ಮು, ಗುಂಜೆಲು ಕೂದಲುಗಳಿಂದ ಕೂಡಿದ ಉಬ್ಬಿದ ಭಾಗ.

**Muff** (ಮಫ್) : ದೇಶಿಯ ಇಂಗ್ಲಿಷಿನಲ್ಲಿ ಸ್ತ್ರೀಯ ಜನನೇಂದ್ರಿಯಗಳ ಸುತ್ತ ಇರುವ ಕೂದಲಿಗಿರುವ ಹೆಸರು.

**Multipara** (ಮಲ್ಟಿಪಾರಾ) : ಸ್ತ್ರೀ, ಎರಡು ಅಥವಾ ಅದಕ್ಕಿಂತಲೂ ಹೆಚ್ಚು ಮಕ್ಕಳಿಗೆ ಜನನ ನೀಡಿರುವುದು.

# N

**Naked** (ನೇಕೆಡ್) : ಬೆತ್ತಲೆ, ಬಟ್ಟೆ ಧರಿಸದಿರುವುದು.

**Narratophilia** (ನರೇಟೋಫೀಲಿಯಾ) : ಶೃಂಗಾರ ಅಥವಾ ಕಾಮ ಸಂಬಂಧವಾದ ಕಥೆಯನ್ನು ಇತರರಿಗೆ ಹೇಳುವ ಮೂಲಕ ಲೈಂಗಿಕ ಸಂತೋಷವನ್ನು ಹೊಂದುವುದು.

**Narcissim** (ನಾರ್ಸಿಸಮ್) : ತನ್ನ ಸ್ವಂತ ಶರೀರವನ್ನು ಲೈಂಗಿಕತೆಗಾಗಿ ಉತ್ತೇಜಿಸಿಕೊಳ್ಳುವುದು. ಸ್ವಮೋಹ.

**Nacrophilie** (ನೆಕ್ರೋಫಿಲಿಯಾ) : ಹೆಣಸಂಗ ಕೂಟ, ಸತ್ತ ಹೆಣದೊಂದಿಗೆ ಲೈಂಗಿಕ ಸಂಬಂಧ.

**Nipple** (ನಿಪ್ಪಲ್) : ಮೊಲೆತೊಟ್ಟು.

**Nymphomania** (ನಿಂಫೋಮೇನಿಯ) : ಸ್ತ್ರೀಯಲ್ಲಿ ಅತಿಯಾದ ಕಾಮೋನ್ಮಾದ, ದೀರ್ಘಕಾಲ ರತಿಸುಖ ಬಯಸುವುದು, ಹಲವು ಸಂಗಾತಿಗಳಿಂದ ಕಾಮಸುಖವನ್ನು ಬಯಸುವುದು.

**Nude, Nudity** (ನ್ಯೂಡಿಟಿ) : ನಗ್ನ, ಬೆತ್ತಲೆತನ

**Nuts** (ನಟ್ಸ್) : ದೇಶೀಯ ಇಂಗ್ಲಿಷಿನಲ್ಲಿ ವೃಷಣಗಳಿಗಿರುವ ಹೆಸರು ಅಂದರೆ, ಟೆಸ್ಟೀಕಲ್ಸ್‌ಗೆ ಇರುವ ಹೆಸರು.

# O

**Obscenity** (ಅಬ್‌ಸೆನಟಿ) : ಅಶ್ಲೀಲತೆ.

**Oral sex** (ಓರಲ್‌ಸೆಕ್ಸ್) ಮುಖರತಿ, ಬಾಯಿ ಜನನಾಂಗ ಕಾಮ.

**Orgasm** (ಆರ್ಗ್ಯಾಸಮ್) : ಭಾವಪ್ರಾಪ್ತಿ, ಕಾಮ ಸಂತೃಪ್ತಿ, ಲೈಂಗಿಕ ಪರಾಕಾಷ್ಠತೆ ವಿಶೇಷವಾಗಿ ಲೈಂಗಿಕ ಸಂಭೋಗದ ತುತ್ತತುದಿಯಲ್ಲಿ ಅನುಭವವಾಗುವ ಮಾನಸಿಕ ತೃಪ್ತಿ. ಸುಖಶಿಖರ, ಚರಮ ಸುಖ.

**Ovary** (ಓವರಿ) : ಅಂಡಾಶಯ. ಪ್ರತಿ ಹೆಂಗಸಿನಲ್ಲೂ ಎರಡು ಅಂಡಾಶಯಗಳಿವೆ. ಗಂಡಸಿನ ವೀರ್ಯಾಣುವಿನಿಂದ ಫಲವಂತವಾಗಿ ಹೊಸ ವ್ಯಕ್ತಿ ಬೆಳೆಯಲು ಅಂಡಾಣು (ಮೊಟ್ಟೆ) ತಯಾರಾಗುವುದು ಅಂಡಾಶಯಗಳಲ್ಲೇ.

**Ovulation** (ಓವ್ಯುಲೇಷನ್) : ಅಂಡಕೋಶದಿಂದ ಅಂಡಾಣು ಬಿಡುಗಡೆಗೊಳ್ಳುವುದು.

**Ovum** (ಓವಮ್) : ಅಂಡಾಣು.

**Oxytocin** (ಆಕ್ಸಿಟೋಸಿನ್) : ಪಿಟ್ಯೂಟರಿ ಗ್ರಂಥಿಯಿಂದ ಬಿಡುಗಡೆಗೊಳ್ಳುವ ಈ ಹಾರ್ಮೋನ್ ಪ್ರಸವಿಸಿದ ಸ್ತ್ರೀಯರಲ್ಲಿ ಹಾಲನ್ನು ಉತ್ಪಾದಿಸಲು ಪ್ರೇರೇಪಿಸುತ್ತದೆ.

# P

**Painful Intercourse** (ಪೇಯಿನ್‌ಫುಲ್ ಇಂಟರ್ ಕೋರ್ಸ್) : ನೋವಿನ ಸಂಭೋಗ. ಪುರುಷರು ಅಥವಾ ಸ್ತ್ರೀಯರು ಸಂಭೋಗದಲ್ಲಿ ನೋವನ್ನು ಅನುಭವಿಸುವುದು.

ಪುರುಷರಲ್ಲಿ ಶಿಶ್ನದ ತುದಿ (**Tip**)ಯಲ್ಲಿ ನೋವು ಉಂಟಾದರೆ ಅದು, ಪ್ರಾಸ್ಟೇಟ್ ಗ್ಲಾಂಡ್ ತೊಡಕಿನಿಂದ ಉಂಟಾಗಿರಬಹುದು. ಮತ್ತು ವೃಷಣಗಳ ನೋವಿನಿಂದಲೂ ನೋವು ಉಂಟಾಗಬಹುದು. ಉರಿಯುವ ನೋವು ಮೂತ್ರಕೋಶ. ಪ್ರಾಸ್ಟೇಟ್ ಮತ್ತು ವೀರ್ಯವಾಹಕಗಳಿಂದ ಉಂಟಾಗಬಹುದು. ಶಿಶ್ನದ ಮುಂದೊಗಲು ಬಹಳ ಬಿಗಿಯಾಗಿದ್ದಾಗಲೂ ನೋವಾಗುತ್ತದೆ.

ಸ್ತ್ರೀಯರಲ್ಲಿ ಕ್ಲೈಟೋರಿಸ್ (ಭಗಾಂಕುರ) ಭಾಗದಲ್ಲಿ ನವೆ ಉಂಟಾಗಬಹುದು. ನೋವು, ನವೆ, ಯೋನಿಯ ಮೇಲೆ ಪರಿಣಾಮ ಬೀರುತ್ತದೆ. ಲೈಂಗಿಕ ಸಮಯ–ದಲ್ಲಿ ನೋವು ಕಾಣಿಸಿಕೊಳ್ಳಲು ಸಾಮಾನ್ಯ ಕಾರಣ. ಜನನೇಂದ್ರಿಯ –ಗಳಿಗೆ ಉಂಟಾಗುವ ಸೋಂಕು (ಇನ್‌ಫೆಕ್ಷನ್). ಮಾನಸಿಕ ಕಾರಣ–ಗಳಿಂದಲೂ ಉದಾ: ಇಷ್ಟವಿಲ್ಲದ ಸಂಭೋಗದಿಂದಲೂ ನೋವಾಗುತ್ತದೆ.

**Pederasty** (ಪೆಡೆರಾಸ್ಟಿ) : ಪುರುಷನ ಮತ್ತು ಚಿಕ್ಕ ಹುಡುಗನ ನಡುವಿನ ಲೈಂಗಿಕ ಸಂಭೋಗ. ಇದೊಂದು ಅಪರಾಧವಾಗಿರುತ್ತದೆ, ಈ ಚಟ ಇರುವವರನ್ನು ಮನೋವೈದ್ಯರಲ್ಲಿ ತೋರಿಸಿ ಚಿಕಿತ್ಸೆ ಮಾಡಿಸಬೇಕು.

**Pedophiles** (ಪೆಡೋಫಿಲೆಸ್) : ಮಕ್ಕಳೊಡನೆ ರತಿಕೂಟ. ವಯಸ್ಕರು ಮಕ್ಕಳೊಂದಿಗೆ ಸಂಬಂಧ ಬೆಳೆಸಿ ಕಾಮನೆಯ ಸಂತೋಷ ಹೊಂದುವಿಕೆ. ಇದು ಅಪರಾಧವಾಗಿರುತ್ತದೆ.

**Peeping** (ಪೀಪಿಂಗ್) : ಇಣಕು ಕಾಮ. ಇತರರ ಲೈಂಗಿಕ ಕ್ರಿಯೆಯನ್ನು ಕದ್ದು ನೋಡುವುದು.

**Pelvic infection** (ಪೆಲ್ವಿಕ್ ಇನ್‌ಫೆಕ್ಷನ್) : ಕಿಳ್ಗುಳಿಯ ಸೋಂಕು.

**Penetration** (ಪೆನಿಟ್ರೇಷನ್) : ಒಳನಾಟು, ಒಳತೂರು, ದಂಪತಿಗಳಿಬ್ಬರು ಪೂರ್ಣವಾಗಿ ಕಾಮೋದ್ರೇಕಗೊಂಡ ನಂತರ, ಲೈಂಗಿಕ ಸಂಭೋಗಕ್ಕಾಗಿ ಉದ್ರೇಕಿತ ಶಿಶ್ನವನ್ನು ಯೋನಿಯೊಳಕ್ಕೆ ತೂರಿಸುವುದು.

**Perineum** (ಪೆರಿನಿಯಂ) : ಗುದಮುಂದಾಣ. ಗುದಕ್ಕೂ ಮೂತ್ರನಾಳಕ್ಕೂ ನಡುವೆ ಇರುವ ಜಾಗ.

**Petting** (ಪೆಟಿಂಗ್) : ರಮಿಸುವಿಕೆ, ದಂಪತಿಗಳು ಕಾಮೋದ್ರೇಕಗೊಳ್ಳಲು ಪರಸ್ಪರ ಶರೀರವನ್ನು ಮುಟ್ಟಿಸಿಕೊಳ್ಳುವುದು. ಅಂದರೆ ಆಲಿಂಗನ, ಚುಂಬನ, ಹಿಸುಕುವಿಕೆ, ಉಜ್ಜುವಿಕೆ ಮೊದಲಾದ ಪ್ರಣಯ ಚೇಷ್ಟೆಗಳನ್ನು ನಡೆಸುವುದು.

**Phallus** (ಫ್ಯಾಲಸ್) : ಶಿಶ್ನ, ಪುರುಷ ಜನನಾಂಗ.

**Phimosis** (ಫೈಮೋಸಿಸ್): ಮುಂದೊಗಲು ಹಿಂಬಿಗಿತ, ಲಿಂಗದ ಮುಂದೊಗಲು ಬಿಗಿಯಾಗಿ ಹಿಂದಕ್ಕೆ ಸರಿಯದಿರುವುದು.

**Pictophilia** (ಫಿಕ್ಟೋಫೀಲಿಯಾ) : ಶೃಂಗಾರ ಅಥವಾ ಕಾಮಸಂಬಂಧವಾದ ಗ್ರಾಫಿಕ್ಸ್ ಅಥವಾ ಫಿಲ್ಂಗಳನ್ನು ನೋಡುವುದರ ಮೂಲಕ ಲೈಂಗಿಕ ಸಂತೋಷ ಹೊಂದುವುದು.

**Placenta** (ಪ್ಲಸೆಂಟಾ) : ಮಾಸು

**Plateau Phase** (ಪ್ಲೇಟೋಫೇಸ್) : ಉನ್ನತ ಉದ್ರೇಕ ಹಂತ. ಲೈಂಗಿಕ ಕ್ರಿಯೆ ನಡೆಸಲು, ದಂಪತಿಗಳು ಕೂಡಿದ್ದಾಗ ಅವರಿಬ್ಬರ ಶರೀರ ಮತ್ತು ಜನನೇಂದ್ರಿಯಗಳಲ್ಲಿ ವಿಶಿಷ್ಟಬದಲಾವಣೆ ಉಂಟಾಗುವ ಎರಡನೆಯ ಹಂತ.

**Polyandry** (ಪಾಲಿಯಾಂಡ್ರಿ) : ಇದೊಂದು ವಿವಾಹ ಪದ್ಧತಿ. ಇದರಲ್ಲಿ ಒಂದು ಹೆಣ್ಣು ಒಬ್ಬನಿಗಿಂತ ಹೆಚ್ಚುಮಂದಿ ಗಂಡಂದಿರನ್ನು ಏಕಕಾಲದಲ್ಲಿ ಹೊಂದಿರುತ್ತಾಳೆ. (ಉದಾ: ದ್ರೌಪತಿ)

**Poop** (ಪೂಪ್) : ದೇಶಿಯ ಇಂಗ್ಲಿಷಿನಲ್ಲಿ ಪೃಷ್ಟಕ್ಕೆ ಇರುವ ಹೆಸರು; ಕುಂಡಿಗಳು, ಪಿರ್ರೆಗಳು.

**Potency** (ಪೊಟೆನ್ಸಿ) : ಸಬಲತೆ, ವೀರ್ಯತೆ, ಶಿಶ್ನದಲ್ಲಿ ಉದ್ರೇಕ ಸ್ಥಿತಿಯನ್ನು ಇರಿಸಿಕೊಂಡಿರುವುದು.

**Prepuce** (ಪ್ರೆಪ್ಯೂಸ್) : ಮುಂದೊಗಲು, ಗಂಡಸಿನ ಲಿಂಗದ ಮುಂದಿನ ತುದಿಯನ್ನು ಮುಚ್ಚಿರುವ, ಹಿಂದಕ್ಕೆ ಸರಿಸಬಹುದಾದ ಚರ್ಮದ ಮಡಿಕೆ.

**Pornography** (ಪೋರ್ನಾಗ್ರಫಿ) : ಪೋರ್ನಾಗ್ರಫಿ ಎಂಬ ಪದಕ್ಕೆ ಕನ್ನಡದಲ್ಲಿ ಅಶ್ಲೀಲ ಬರಹ ಅಥವಾ ಹಾದರ ಬರಹ ಎಂದು ಕರೆಯುತ್ತೇವೆ. ಆದರೆ, ಪೋರ್ನಾಗ್ರಾಫಿ ಎಂದರೆ ವೇಶ್ಯೆಯರನ್ನು ಕುರಿತು ಬರೆದ ಬರಹ ಎಂದರ್ಥ. ಆದರೆ, ಇತ್ತೀಚೆಗೆ ಕನ್ನಡದಲ್ಲಿ ಪೋರ್ನಾಗ್ರಫಿಗೆ ಕಾಮೋದ್ರೇಕ (ಚಿತ್ರ) ಸಾಹಿತ್ಯ, ನಗ್ನಚಿತ್ರ ಸಾಹಿತ್ಯ ಎಂದು ಕರೆಯುತ್ತಾರೆ.

**Positions, intercourse** (ಪೊಜಿಷನ್ಸ್ ಇಂಟೆರ್‌ಕೋರ್ಸ್) : ಆಸನಗಳು (ಭಂಗಿ) ಸಂಭೋಗಕ್ಕಾಗಿ.

**man-on-top** (ಮ್ಯಾನ್ ಆನ್ ಟಾಪ್) ಪುರುಷ ಮೇಲಿನ ಭಂಗಿ.

**rear entry** (ರೇರ್ ಎಂಟ್ರಿ) : ಹಿಂಬದಿಯ ಭಂಗಿ

**Side-by-side** (ಸೈಡ್-ಬೈ-ಸೈಡ್) : ಪಕ್ಕದ ಭಂಗಿ ಅಥವಾ ಪಾರ್ಶ್ವ ಸಂಭೋಗಾಸನ ಭಂಗಿ.

**standing position** (ಸ್ಟ್ಯಾಂಡಿಂಗ್ ಪೊಜಿಷನ್) : ನಿಂತಿರುವ ಭಂಗಿ.

**woman on top** (ವುಮನ್ ಆನ್ ಟಾಪ್) : (ಹೆಣ್ಣು) ಸ್ತ್ರೀ ಮೇಲಿನ ಭಂಗಿ.

**Pregnancy** (ಪ್ರೆಗ್‌ನನ್ಸಿ) : ಬಸಿರು, ಗರ್ಭ, ವೀರ್ಯಾಣು ಅಂಡಾಣುವಿನೊಳಕ್ಕೆ ಹೊಕ್ಕಾಗ ಬಸಿರು ಆರಂಭವಾಗುತ್ತದೆ.

**Progesterone** (ಪ್ರೊಜೆಸ್ಟರೋನ್) : ಬಸಿರಣಿಕ, ಮಾಸು, ಅಂಡಾಶಯ, ಅಡ್ರಿನಲ್ ಗ್ರಂಥಿಗಳಲ್ಲಿ ತಯಾರಾಗುವ ಒಂದು ಸ್ಟಿರಾಯ್ಡ್ ಒಳಸುರಿಕ ರಸ, ಮುಟ್ಟಿನ ಚಕ್ರದ ಕೊನೆ ಅರ್ಧದಲ್ಲಿ ಗರ್ಭಕೋಶದಲ್ಲಿ ಬಸರಿಗೆ ಅಣಿ ಮಾಡುವುದು ಇದರು ಮುಖ್ಯ ಕೆಲಸ.

**Premartial sex** (ಪ್ರೀಮಾರಿಟಲ್ ಸೆಕ್ಸ್) : ಮದುವೆಗೆ ಮೊದಲೇ ಹೊಂದುವ ಲೈಂಗಿಕ ಅನುಭವ.

**Promiscuity** (ಪ್ರಾಮಿಸ್‌ಕ್ಯುಟಿ) : ಸ್ವೇಚ್ಛಾಚಾರ, ಕೇವಲ ದೈಹಿಕ ಚಪಲಕ್ಕಾಗಿ ಲಿಂಗ ಸಂಗ ಮಾಡುವುದು. ಪ್ರಚೋದಕ ರೀತಿಯಲ್ಲಿ

**Prostitution** (ಪ್ರಾಸ್ಟಿಟ್ಯೂಷನ್) : ಸೂಳೆಗಾರಿಕೆ, ವ್ಯಭಿಚಾರ

**Premature Ejaculation** (ಪ್ರಿಮೆಚ್ಯೂರ್ ಎಜಾಕ್ಯುಲೇಷನ್) : ಶೀಘ್ರ ವೀರ್ಯ ಸ್ಖಲನ, ಲೈಂಗಿಕ ಸಂಭೋಗಕ್ಕೆ ಮುನ್ನ ಅಥವಾ ಭಾವಪ್ರಾಪ್ತಿಗೆ ಮೊದಲೇ ವೀರ್ಯಸ್ಖಲನವಾಗುವುದು. ಇದಕ್ಕೆ ಕಾರಣ, ಪುರುಷನಲ್ಲಿರುವ ಆತಂಕ ಆತುರ–ಭಯ.

**Prostate Gland** (ಪ್ರಾಸ್ಟೇಟ್ ಗ್ಲಾಂಡ್) : ಮುನ್ನಿಲುಗ, ಪ್ರಾಸ್ಟೇಟ್ ಗ್ರಂಥಿ. ಗಂಡಸಿನಲ್ಲಿ ಮೂತ್ರಕೋಶದ ಕೆಳತುದಿ ಮತ್ತು ಮೂತ್ರನಾಳದ ಸುತ್ತಲೂ ಆವರಿಸಿರುವ ಒಂದು ಗ್ರಂಥಿ. ಈ ಗ್ರಂಥಿಕಾರ್ಯ, ಸ್ಖಲನಕ್ಕಾಗಿ ಪ್ರಾಸ್ಟೆಟಿಕ್ ದ್ರವವನ್ನು ತಯಾರಿಸುವುದು.

**Pubic Hair** (ಪ್ಯೂಬಿಕ್ ಹೇರ್) : ಗುಂಜೆಲು ಭಾಗ. ಇದು ಹೊಟ್ಟೆಯ ಕೆಳಭಾಗ. ಈ ಭಾಗದಲ್ಲಿ ಬೆಳೆಯುವ ಕೂದಲಿಗೆ ಗುಂಜುಗೂದಲು ಅಥವಾ ಪ್ಯೂಬಿಕ್ ಹೇರ್ ಎಂದು ಹೆಸರು.

**Pudenda** (ಪ್ಯುಡೆಂಡಾ) : ಜನನೇಂದ್ರಿಯಗಳು, ಮುಖ್ಯವಾಗಿ ಸ್ತ್ರೀ ಜನನಾಂಗಗಳು.

# Q

**Queer** (ಕ್ವೀರ್) : ಇಬ್ಬರು ಪುರುಷರ ನಡುವೆ ನಡೆಯುವ ರತಿಕಾರ್ಯ.

# R

**Rape** (ರೇಪ್) : ಹಟಕೂಟ, ಬಲಾತ್ಕಾರ ಸಂಗ, ಅತ್ಯಾಚಾರ.

**Reproduction** (ರಿಪ್ರೊಡಕ್ಷನ್) : ಸಂತಾನೋತ್ಪತ್ತಿ.

**Resolution Phase of Intercourse** (ರೆಸ್ಯುಲೂಶನ್ ಫೇಸ್ ಆಫ್ ಇಂಟರ್ ಕೋರ್ಸ್) : ಸಂಭೋಗದ ಇಳಿಗಡೆಯ ಹಂತ.

**Rod** (ರಾಡ್) : ದೇಶಿಯ ಇಂಗ್ಲಿಷಿನಲ್ಲಿ ಶಿಶ್ನಕ್ಕಿರುವ ಹೆಸರು.

**Ruboff** (ರಬ್ಆಫ್) : ದೇಶಿಯ ಇಂಗ್ಲಿಷಿನಲ್ಲಿ ಹಸ್ತಮೈಥುನಕ್ಕಿರುವ ಹೆಸರು.

# S

**Sadomasochism** (ಸ್ಯಾಡೋಮೆಸಾಕಿಸಂ): ಹಿಂಸಾವೇದನಾರತಿ, ಹಿಂಸಾ ಕಾಮ, ಹಿಂಸಾರತಿ, ವೇದನಾರತಿಗಳೆರಡೂ ಒಂದೇ, ಹಿಂಸೆ ಮತ್ತು ಲೈಂಗಿಕ ತೃಪ್ತಿ ಇವುಗಳ ಲಕ್ಷಣ.

ಇನ್ನೊಬ್ಬ ವ್ಯಕ್ತಿಯನ್ನು ಹಿಂಸೆಗೆ ಗುರಿಪಡಿಸಿ, ಆ ವ್ಯಕ್ತಿ ತೀವ್ರ ವೇದನೆಯಲ್ಲಿ-ರುವಾಗ ಅದನ್ನು ಕಂಡೇ ಲೈಂಗಿಕ ತೃಪ್ತಿ ಪಡೆದುಕೊಳ್ಳುವುದು. ಇಂಥ ಲೈಂಗಿಕ ವೈಚಿತ್ರದಲ್ಲಿ ತುಂಬಾ ಖ್ಯಾತನಾದವನು ಫ್ರಾನ್ಸಿನ ಮಾರ್ಕ್ವಿಸ್ ಡೆ-ಸಾಡೆ.

**Sadism** (ಸ್ಯಾಡಿಸಂ) ಹಿಂಸಾರತಿ, ಇತರರಿಗೆ ನೋವು ಕೊಡುವುದು, ಹಿಂಸಿಸುವುದರ ಮೂಲಕ ಲೈಂಗಿಕ ಸಂತೋಷವನ್ನು ಹೊಂದುವುದು.

**Safe period** (ಸೇಫ್ ಪಿರಿಯಡ್) : ಗರ್ಭಧಾರಣೆ ಆಗದಿರಲು ಸುರಕ್ಷಿತ ಅವಧಿ. ಮೂವತ್ತು ದಿನಗಳಿಗೊಮ್ಮೆ ಕ್ರಮಬದ್ಧವಾಗಿ ಮುಟ್ಟಾದ ಮೊದಲ

ಹತ್ತು ದಿನಗಳೂ, ಕಡೆಯ ಹತ್ತು ದಿನಗಳೂ ಸುರಕ್ಷಿತ ಅವಧಿ ಎನ್ನಬಹುದು. ಈ ಅವಧಿಯಲ್ಲಿ ಸಂಭೋಗ ಮಾಡಿದರೆ ಗರ್ಭಕಟ್ಟುವುದಿಲ್ಲ.

**Salpingitis** (ಸಾಲ್ಪಿಂಜಿಟಸ್): ಗರ್ಭನಾಳುರಿತ, ಆಲಿಕೆನಾಳುರಿತ.

**Salpingogram** (ಸ್ಕಾಲ್‌ಪಿಂಗೋಗ್ರಾಂ) : ಗರ್ಭನಾಳ ಚಿತ್ರ.

**Scoptophilia** (ಸ್ಕಾಪೋಟೋಪೀಲಿಯಾ): ನಿಟ್ಟುಕಾಮನೆ, ಕಾಣಿಕಾಮನೆ, ಬೆತ್ತನೆಕಾಮ, ಇಣುಕುಕಾಮ. ಇನ್ನೊಬ್ಬರ ಜನನೇಂದ್ರಿಯಗಳನ್ನು ಅಥವಾ ಲೈಂಗಿಕಕ್ರಿಯೆಗಳನ್ನು ನೋಡಿ ಸಂತೋಷ ಹೊಂದುವಿಕೆ.

**Scrotum** (ಸ್ಕ್ರೋಟಂ) ತಡ್ಡುಚೀಲ, ವೃಷಣಚೀಲ, ತರಡುಚೀಲ. ತರಡುಚೀಲವು ಶಿಶ್ನದ ಹಿಂಬದಿಯಲ್ಲಿರುವ ಒಂದು ರೀತಿ ಸಿಕ್ಕುಗಟ್ಟಿದ ಗೂಡಿನಂತಿದೆ. ವೀರ್ಯಾಣುಗಳನ್ನು ತಯಾರಿಸುವ ಬೀಜಗಳು ಈ ಚೀಲದೊಳಗಿವೆ.

**Self- Pollution** (ಸೆಲ್ಫ್ ಪಲ್ಯೂಷನ್) : ದೇಸಿಂಯ ಇಂಗ್ಲಿಷಿನಲ್ಲಿ ಹಸ್ತಮೈಥುನಕ್ಕಿರುವ ಹೆಸರು. ಹಸ್ತಮೈಥುನ.

**Semen** (ಸೇಮೆನ್) : ರೇತಸ್ಸು, ಶುಕ್ಲ, ವೀರ್ಯ, ಬೀಜರೇತು. ಇದು ಬಣ್ಣವಿಲ್ಲದ ಅಥವಾ ಮಾಸಲು ಬಣ್ಣದ ದ್ರವ. ಒಂದು ಸಾರಿ ಆಗುವ ವೀರ್ಯಚಿಮ್ಮುಗೆಯಲ್ಲಿ ಸುಮಾರು 100 ರಿಂದ 300 ದಶಲಕ್ಷ ವೀರ್ಯಾಣುಗಳಿರುತ್ತವೆ.

**Sex hormones** (ಸೆಕ್ಸ್‌ಹಾರ್ಮೋನ್ಸ್) : ಆಂಡ್ರೋಜೆನ್ಸ್, ವೃಷಣಗಳಿಂದ ಉತ್ಪತ್ತಿಂಯಾಗುತ್ತದೆ ಮತ್ತು ಓವರೀಸ್‌ನಿಂದ ಈಸ್ಟ್ರೋಜೆನ್ ಉತ್ಪತ್ತಿಯಾಗುತ್ತದೆ.

**Seminology** (ಸೆಮಿನೋಲಜಿ) : ವೀರ್ಯದ ಅಧ್ಯಯನ.

**Sexology** (ಸೆಕ್ಸಾಲಜಿ) : ಲೈಂಗಿಕತೆಯ ಬಗ್ಗೆ ಅಧ್ಯಯನ ಮಾಡುವ ಶಾಸ್ತ್ರ. ಲೈಂಗಿಕ ಶಾಸ್ತ್ರ, ಲೈಂಗಿಕ ವಿಜ್ಞಾನ

**Sissy** (ಸಿಸ್ಸಿ) : ಹುಡುಗ, ಹುಡುಗಿಯ ರೀತಿಯಲ್ಲಿ ವರ್ತಿಸುವುದು.

**Sixtynine** (ಸಿಕ್ಸಿಟಿನೈನ್) : (69) ಅರವತ್ತೊಂಭತ್ತರ ಭಂಗಿ ಏಕ ಕಾಲದಲ್ಲಿ ದಂಪತಿಗಳು ಮುಖರತಿ (**Oral-genital stimulation**)ಯಿಂದ ಒಬ್ಬರ ಮುಖ ಇನ್ನೊಬ್ಬರ ಜನನಾಂಗ ಭಾಗದಲ್ಲಿರಿಸಿಕೊಂಡು ಉತ್ತೇಜನ ಹೊಂದುವುದು.

**Smegma** (ಸ್ಮೆಗ್ಮಾ) : ಶಿಶ್ನದ ಮುಂಗೊನೆ ಮತ್ತು ಒಳಗಿನ ಮುಂದೊಗಲಿನಲ್ಲಿ ಸಂಗ್ರಹವಾಗುವ ವಸ್ತು.

**Somnophilia** (ಸೋಮ್ನೋಪೀಲಿಯಾ) : ನಿದ್ರೆ ಮಾಡುತ್ತಿರುವ ಸಂಗತಿಯನ್ನು ನೋಡುವುದರ ಮೂಲಕ ಲೈಂಗಿಕ ಸಂತೋಷವನ್ನು ಹೊಂದುವುದು.

**Staff** (ಸ್ಟಾಫ್) : ದೇಶಿಯ ಇಂಗ್ಲಿಷಿನಲ್ಲಿ ಶಿಶ್ನಕ್ಕಿರುವ ಹೆಸರು. ಶಿಶ್ನ. ಪೆನಿಸ್.

**Spouse** (ಸ್ಪೌಸ್) : ಗಂಡ ಅಥವಾ ಹೆಂಡತಿ. ಜೀವನ ಸಂಗಾತಿ.

**Surrogate** (ಸರೋಗೇಟ್) : ಬದಲಿ ಸಂಗಾತಿ, ಲೈಂಗಿಕ ಚಿಕಿತ್ಸೆಯಲ್ಲಿ ಹೆಂಡತಿಗೆ ಬದಲು ಅಥವಾ ಗಂಡನಿಗೆ ಬದಲು ಬೇರೊಬ್ಬ ವ್ಯಕ್ತಿ/ಸ್ತ್ರೀ ಭಾಗವಹಿಸುವುದು.

**Syphilis** (ಸಿಫಿಲಿಸ್) : ಫರಂಗಿರೋಗ. ಉಪದಂಶ ಟ್ರೆಪೋನಿಮಾ ಪಾಲಿಡಮ್ ರೋಗಾಣುವಿನಿಂದ ಉಂಟಾಗುತ್ತದೆ. ಸಿಫಿಲಿಸ್ ಸೋಂಕು ಇರುವ ವ್ಯಕ್ತಿಯೊಡನೆ ಲೈಂಗಿಕ ಸಂಭೋಗ ನಡೆಸಿದ 10 ರಿಂದ 90 ದಿನಗಳ ಅವಧಿಯಲ್ಲಿ ಸೋಂಕು ಉಂಟಾಗಬಹುದು.

**Sperm** (ಸ್ಪರ್ಮ್) : ವೀರ್ಯಾಣು.

ವೀರ್ಯಾಣುಗಳು 13 ಅಥವಾ 14 ನೇ ವಯಸ್ಸಿನ ನಂತರ ಹುಡುಗನ ಬೀಜ (ವೃಷಣ) ಗಳಲ್ಲಿ ಉತ್ಪತ್ತಿಯಾಗುತ್ತವೆ. ವೀರ್ಯಾಣುಗಳು ಹೆಣ್ಣಿನ ಅಂಡಾಣುಗಳಿಗಿಂತ ಬಹಳ ಸಣ್ಣವು.

**Seminal Vesicles** (ಸೆಮಿನಲ್ ವೆಸಿಕಲ್ಸ್) : ವೀರ್ಯಕೋಶ.

**Sex** (ಸೆಕ್ಸ್) : ಲಿಂಗ, ಗಂಡು ಹೆಣ್ಣು, ಕಾಮ.

**Sex organs** (ಸೆಕ್ಸ್ ಆರ್ಗನ್ಸ್) : ಲೈಂಗಿಕಾಂಗಗಳು.

# U

**Urolagnia** (ಯುರೊಲಜನಿಯಾ) : ಮೂತ್ರ ಕಾಮನೆ, ಮೂತ್ರಕಾಮ. ಮೂತ್ರ ವಿಸರ್ಜಿಸುತ್ತಿರುವುದನ್ನು ಕಂಡು ಲೈಂಗಿಕವಾಗಿ ಉದ್ರೇಕವಾಗುವಿಕೆ.

**Uterus** (ಯೂಟೆರಸ್) : ಗರ್ಭಕೋಶ, ಗರ್ಭಕೋಶ ಆಕಾರದಲ್ಲಿ ಬುಗುರಿಯನ್ನು ಹೋಲುತ್ತದೆ. ಗರ್ಭಕೋಶ ಹಿಗ್ಗು–ಕುಗ್ಗುವಂತಹುದು. ಇದರ ಉದ್ದ 3 ಅಂಗುಲ, ಅಗಲ ಒಂದುವರೆ ಅಂಗುಲ ಮತ್ತು ದಪ್ಪ 1 ಅಂಗುಲ.

# V

**Vagina** (ವಜೈನಾ) : ಯೋನಿ, ಲೈಂಗಿಕ ಸಂಭೋಗದಲ್ಲಿ ಪುರುಷನ ಶಿಶ್ನವನ್ನು ಹಿಡಿದಿಟ್ಟುಕೊಳ್ಳುವ ಅಂಗ.

**Vaginal discharge** (ವೆಜೈನಲ್ ಡಿಸ್‌ಚಾರ್ಜ್) : ಯೋನಿಸ್ರಾವ.

**Vaginismus** (ವೆಜೈನಿಸ್ಮಸ್) : ಯೋನಿಯ ಸೆಡೆತ, ಯೋನಿಯ ಸುತ್ತಲೂ ಆವರಿಸಿರುವ ಸ್ನಾಯುಗಳು ಸಾಮಾನ್ಯವಾಗಿ ಸಂಭೋಗದ ಸಮಯದಲ್ಲಿ, ಶಿಶ್ನ ಪ್ರವೇಶಿಸಿದಾಗ ಸಡಿಲವಾಗಿರುತ್ತವೆ. ಆದರೆ, ಕೆಲವು ಸ್ತ್ರೀಯರಲ್ಲಿ ಸ್ನಾಯುಗಳ ಸೆಡೆತದಿಂದಾಗಿ ಯೋನಿ ಮತ್ತು ಅದರ ಪ್ರವೇಶದ್ವಾರ ಸಂಕುಚಿತಗೊಳ್ಳುತ್ತದೆ. ಇದನ್ನು ಯೋನಿಯ ಸೆಡೆತ ಎಂದು ಕರೆಯುತ್ತೇವೆ. ಈ ಸ್ಥಿತಿಯಿಂದ ಸಂಭೋಗಕ್ಕೆ ಕಷ್ಟ, ಸಂಕೋಚನೆ ಬಲವಾಗಿದ್ದರೆ. ಹಲವು ಗಂಟೆಗಳತನಕ ಇದ್ದರೆ ಸ್ತ್ರೀಯರಲ್ಲಿ ವಿಪರೀತ ನೋವನ್ನುಂಟು ಮಾಡುತ್ತದೆ. ಅಲ್ಲದೆ, ಶಿಶ್ನಹೊರಕ್ಕೆ ಬಂದುಬಿಡುತ್ತದೆ. ಇದಕ್ಕೆ ಕಾರಣ : ಭಯ, ಆತಂಕ, ನೋವಿನ ನಿರೀಕ್ಷೆ, ಶಾರೀರಿಕ ತೊಂದರೆ ಇತ್ಯಾದಿ.

**Varietist** (ವೆರೈಟಿಸ್ಟ್): ವ್ಯಕ್ತಿಯೊಬ್ಬ ಅನೇಕರೊಂದಿಗೆ ಲೈಂಗಿಕ ಸಂಬಂಧವನ್ನು ಬೆಳೆಸಿರುವುದು.

**Vasdeferens** (ವಾಸ್‌ಡೆಫರೆನ್ಸ್): ವೀರ್ಯನಾಳ.

**Vasectomy** (ವ್ಯಾಸೆಕ್ಟೊಮಿ) : ಗಂಡಿನ ಸಂತಾನಶಕ್ತಿ ಹರಣ ಶಸ್ತ್ರ ಚಿಕಿತ್ಸೆ, ಗಂಡಸರಲ್ಲಿ ಶಾಶ್ವತವಾಗಿ ಕೈಗೊಳ್ಳಬಹುದಾದ ಸಂತತಿ ಪ್ರತಿಬಂಧ ಶಸ್ತ್ರಕ್ರಿಯೆ ಅಥವಾ ವೀರ್ಯನಾಳಛೇದನ.

**Venereal diseases** (ವೆನೆರಿಯಲ್ ಡಿಸೀಸಸ್) : ಗುಪ್ತರೋಗಗಳು, ಮೇಹಗಳು, ಲೈಂಗಿಕತೆಯ ಮೂಲಕ ಹರಡುವ ರೋಗಗಳು. ಈಗ ಸೆಕ್ಸುಯಲಿ ಟ್ರಾನ್ಸ್‌ಮಿಟೆಡ್ ಡಿಸೀಸಸ್ ಅಥವಾ S.T.D. ಲೈಂಗಿಕ

ರೋಗಗಳು ಎನ್ನುತ್ತಾರೆ. ಮುಖ್ಯವಾಗಿ ಮೇಹರೋಗ ಪೀಡಿತರೊಡನೆ ಲೈಂಗಿಕ ಸಂಪರ್ಕ ನಡೆಸಿದಾಗ ಉಂಟಾಗುತ್ತದೆ. ಲೈಂಗಿಕ ರೋಗಗಳು: 1. ಸಿಫಿಲಿಸ್, 2. ಗನೋರಿಯಾ, 3. ಲಿಂಪೋಗ್ರ್ಯಾನುಲೋಮಾ ವೆನೆರಿಯಮ್, 4. ಗ್ರ್ಯಾನುಲೋಮಾ ಇಗ್ವೈನೇಲ್, 5. ಶಾಂಕ್ರಾಯ್ಡ್ ಇತ್ಯಾದಿ.

**Venerology** (ವೆನೆರಿಯೋಲಜಿ) : ಮೇಹ ರೋಗಶಾಸ್ತ್ರ ಲೈಂಗಿಕ ರೋಗಗಳ ಬಗ್ಗೆ ಆಧ್ಯಯನ ಮತ್ತು ಚಿಕಿತ್ಸೆ ನಡೆಸುವುದರ ಬಗೆಗಿನ ಶಾಸ್ತ್ರ.

**Venerophobia** (ವೆನೆರಿಯೋಫೋಬಿಯಾ) : ಲೈಂಗಿಕ ರೋಗ ಅಂಟಬಹುದೆಂಬ ಅಸಾಮಾನ್ಯ ಭಯ.

**Vibrator** (ವೈಬ್ರೇಟರ್) : ಜನನೇಂದ್ರಿಯಗಳನ್ನು ಉತ್ತೇಜನಗೊಳಿಸುವ ಒಂದು ವೈಬ್ರೇಟಿಂಗ್ ಮೆಶಿನ್ (ವಿಶೇಷವಾಗಿ ಸ್ತ್ರೀಯರಿಗೆ ಸಂತೋಷ ನೀಡುವಂಥ ಯಂತ್ರ)

ಅಥವಾ ಪುರುಷ ಲೈಂಗಿಕ ಸಂಭೋಗವನ್ನು
ಹ್ಮಚರ್ಯೆ, ಕನ್ಯತ್ವ

ಯಗಳು – ಮುಖ್ಯವಾಗಿ ಪುರುಷನವು.

ರತಿನೋಟ ಕಾಮ.

# W

ಇಂಗ್ಲಿಷ್‌ನಲ್ಲಿ ಶಿಶ್ನಕ್ಕೆ ಇರುವ ಹೆಸರು.

ಮನ್ ಟೆಸ್ಟ್) : ಸಿಫಿಲಿಸ್ ರೋಗವನ್ನು
ಕ್ತಪರೀಕ್ಷೆ.

ಿನಿಟಲ್) : ಜನನೇಂದ್ರಿಯಗಳು ಅಥವಾ
ಣಿಸಿಕೊಳ್ಳುವ ಕಾರಳ್ಳು, ಹಲ್ಲುಲಿ, ಪಲ್ಲಂಪುರಿ,
ು ವೈರಸ್ ಸೋಂಕಿನಿಂದ ಉಂಟಾಗುತ್ತದೆ.



**Virginity** (ವರ್ಜಿನಿಟಿ) : ಸ್ತ್ರೀ
ಹೊಂದಿಲ್ಲದಿರುವುದು. ಬ್ರ

**Vitals** (ವೈಟಲ್ಸ್) : ಜನನೇಂದ್ರಿ

**Voyeruism** (ವಯರಿಸಂ) :

**Vulva** (ವಲ್ವಾ) : ಗೊಲ್ಲಿ.

**Wang** (ವಾಂಗ್) : ದೇಶಿಯ

**Wassermann Test** (ವಾಸರ
ಪತ್ತೆಹಚ್ಚಲು ನಡೆಸುವ ರ

**Warts, Genital** (ವಾರ್ಟ್ಸ್
ಗುದದ್ವಾರದ ಸುತ್ತಲೂ ಕ
ನರೂಲಿ, ಹಾಲುಣ್ಣೆ, ಇ

**Wet Dream** (ವೆಟ್ ಡ್ರೀಮ್) : ಸ್ವಪ್ನಸ್ಖಲನ, ಪುರುಷ ಮಲಗಿದ್ದಾಗ ಲೈಂಗಿಕ ಕನಸು ಕಾಣುತ್ತಿರುವಾಗ ಆಗುವ ವೀರ್ಯ ಸ್ಖಲನ.

**Whore** (ಹೋರ್) : ವೇಶ್ಯೆ ; ಸೂಳೆ.

**Withdrawal** (ವಿತ್‌ಡ್ರಾವಲ್) : ಹಿಂದೆಗೆತ, ಮೈದೆಗೆತ, ಹಿಂಜಾರಿಕೆ, ಸಾಮಾನ್ಯವಾಗಿ ಪುರುಷ ಇನ್ನೇನು ವೀರ್ಯಸ್ಖಲನವಾಗುತ್ತದೆ ಎಂದು ಆತನಿಗೆ ಸೂಚನೆ ಗೊತ್ತಾದ ಕೂಡಲೇ ಶಿಶ್ನವನ್ನು ಯೋನಿಯಿಂದ ಹೊರ ತೆಗೆಯುವುದು. ಈ ಹಿಂತೆಗೆತದ ವಿಧಾನವನ್ನು ಬಸಿರನ್ನು ತಡೆಗಟ್ಟುವ ಉದ್ದೇಶದಿಂದ ಕೆಲವು ಪುರುಷರು ಅನುಸರಿಸುತ್ತಾರೆ. ಆದರೆ, ಇದರಿಂದ ಹೆಣ್ಣಿಗೆ ಅತೃಪ್ತಿ ಉಂಟಾಗಬಹುದು.

**Wool** (ವೂಲ್) : ದೇಶಿಯ ಇಂಗ್ಲಿಷಿನಲ್ಲಿ ಜನನೇಂದ್ರಿಯಗಳ ಸುತ್ತ ಇರುವ ಪ್ಯೂಬಿಕ್ ಕೂದಲಿಗೆ ಇರುವ ಹೆಸರು.

# Z

**Zoophilia** (ಜೂಫಿಲಿಯಾ): ಪ್ರಾಣಿಗೊಳಡನೆ ಲೈಂಗಿಕ ಸಂಬಂಧ. ಇದು ಅಪಾಯವನ್ನುಂಟು ಮಾಡುತ್ತದೆ.

**Zona Penetration Test** (ಜೋನಾ ಪೆನೆಟ್ರೇಷನ್ ಟೆಸ್ಟ್) : ಬಸಿರು ಕೊರತೆ ಅಥವಾ ಬಂಜೆತನ ವಿರುದ್ಧ ಪುರುಷನ ವೀರ್ಯಾಣುಗಳ ಮೌಲ್ಯಮಾಪನ ಪರೀಕ್ಷೆ.